# ಅಧ್ಯಾಯ ೧೭

# ಪ್ರೇಕ್ಷಣೀಯ ಸ್ಥಳಗಳು

ಪೂರ್ವ-ಪಶ್ಚಿಮಘಟ್ಟಗಳ ಕೂಡು ಸ್ಥಳದಲ್ಲಿರುವ ಚಾಮರಾಜನಗರ ಜಿಲ್ಲೆಯು ದಟ್ಟ ಅರಣ್ಯಗಳಿಂದಲೂ, ಬೆಟ್ಟಗುಡ್ಡಗಳಿಂದಲೂ ಕೂಡಿದ್ದು, ಪ್ರಕೃತಿದತ್ತ ಪ್ರವಾಸಿ ತಾಣಗಳನ್ನೂ ಹೊಂದಿದೆ. ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಮಹದೇಶ್ವರ ಬೆಟ್ಟ, ಮಲೆಯೂರು ಬೆಟ್ಟ, ಪಾರ್ವತಿ ಬೆಟ್ಟ, ಶಂಭುಲಿಂಗ ಬೆಟ್ಟ ಮುಂತಾದವು ಧಾರ್ಮಿಕ ಮಹತ್ವವನ್ನೂ ಹೊಂದಿದ್ದು, ಚಾರಣಕ್ಕೂ ಹೆಸರಾಗಿವೆ. ವಿಶ್ವಖ್ಯಾತಿ ಪಡೆದಿರುವ ಭರಚುಕ್ಕಿ ಜಲಪಾತ, ಮಧ್ಯರಂಗಸ್ಥಳವಾಗಿರುವ ಶಿವಸಮುದ್ರ, ಆಕರ್ಷಕ ದೇವಾಲಯಗಳಿರುವ ನರಸಮಂಗಲ, ಕಂದಗಾಲ, ಕೆಲಸೂರು, ಕೆಸ್ತೂರು, ಮದ್ದೂರು, ಅಮಚವಾಡಿ, ಅಂಬಲೆ, ಬಾಗಳಿ, ತ್ರಿಯಂಬಕಪುರ, ಅಗರ, ಮುಡಿಗೊಂಡ, ತೆರಕಣಾಂಬಿ, ಹೊಳೆಆಲೂರು, ಹರದನಹಳ್ಳಿ, ಹರವೆ, ಬೀರಂಬಾಡಿ. ಚಿಕ್ಕಾಲೂರು, ಗಣಿಗನೂರು, ಗೋಪಿನಾಥಂ, ಗುಂಬಳ್ಳಿ, ಹೊಂಗನೂರು, ಚಾಮರಾಜನಗರ, ಉಮ್ಮತ್ತೂರು, ಸಿಂಗಾನಲ್ಲೂರು, ರಾಘವಪುರ, ಸತ್ತೇಗಾಲ, ಯಳಂದೂರು, ಗುಂಡ್ಲುಪೇಟೆ; ವ್ಯಾಪಾರಕೇಂದ್ರಗಳಾದ ಕೊಳ್ಳೇಗಾಲ, ಮಾಂಬಳ್ಳಿ; ಚಾರಿತ್ರಿಕ ಮಹತ್ವದ ಕೋಟೆಕೆರೆ, ಕುಂತೂರು ಮುಂತಾದವು; ಬಂಡೀಪುರ, ಬಿಳಿಗಿರಿರಂಗನಬೆಟ್ಟಗಳಲ್ಲಿರುವ ಅಭಯಾರಣ್ಯಗಳು; ಗುಂಡಲ ಜಲಾಶಯ, ಕೊಳ್ಳೇಗಾಲ ತಾಲೂಕಿನ ಒಡೆಯರಪಾಳ್ಯದ ಬಳಿಯಿರುವ ಟಿಬೇಟಿಯನ್(ಧೋಂಡೆನಲಿಂಗ್-Dhondenling) ಕ್ಯಾಂಪ್ ಹಾಗೂ ಅಲ್ಲಿರುವ ದ್ಸೊಗ್ಚೆನ್ ವಿಹಾರ (Dzogchen Monastery), ಮುಂತಾದವು ಜಿಲ್ಲೆಯಲ್ಲಿರುವ ಪ್ರಮುಖ ಪ್ರವಾಸಿ ತಾಣಗಳಾಗಿವೆ. ಹೀಗೆ ವೈವಿಧ್ಯತೆಯಿಂದೊಡಗೂಡಿದ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರಮುಖವಾದುವನ್ನು 'ಅ'ಕಾರಾದಿಯಲ್ಲಿ ಸಂಯೋಜಿಸಿ, ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಆಯಾ ಸ್ಥಳದೊಂದಿಗೆ ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯನ್ನಾಧರಿಸಿದ ಜನಸಂಖ್ಯೆಯನ್ನು ಸೂಚಿಸುತ್ತದೆ.

**ಅಂಚವಾಡಿ(೬,೩೮೩):** ಜಿಲ್ಲಾ ಕೇಂದ್ರ ಚಾಮರಾಜನಗರಕ್ಕೆ ಎಂಟು ಕಿಮೀ. ದೂರದಲ್ಲಿರುವ ಇದು, ಸುಮಾರು ಎಂಟು-ಒಂಬತ್ತನೆಯ ಶತಮಾನಕ್ಕೆ ಸೇರಿದ ಗಂಗರ ಶಾಸನದಲ್ಲಿ 'ಆಮಚವಾಡಿ' ಎಂದೇ ಉಲ್ಲೇಖಿತಗೊಂಡಿದ್ದು, ಅದರಿಂದಾಗಿ ಗಂಗರ ಕಾಲಕ್ಕೆ ಇದರ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ವಿಜಯನಗರದ ಅರಸರ ಆಡಳಿತಾವಧಿಯಲ್ಲಿ 'ಆಮಚವಾಡಿ ಸ್ಥಳ', ಎಂದೇ ಖ್ಯಾತಿ ಪಡೆದಿದ್ದ ಇದು ಸ್ಥಳೀಯ ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿದ್ದು, ಅವರನ್ನು ಮೈಸೂರು ಅರಸರು ನಂತರದಲ್ಲಿ ದಮನ ಮಾಡಿದರೆಂದು ಗೊತ್ತಾಗುತ್ತದೆ. ಈ ಗ್ರಾಮದಿಂದ ಈವರೆಗೆ ವರದಿಯಾಗಿರುವ ಐದು ಶಾಸನಗಳಲ್ಲಿ ಕ್ಯಾತೇದೇವರ ಗುಡಿ ಬಳಿ ನಿಂತಿರುವ ಗಂಗ ನೀತಿಮಾರ್ಗ ಪೇರ್ಮಾನಡಿಯ ಆಡಳಿತದ ಮೊದಲನೆಯ ವರ್ಷಕ್ಕೆ ಸೇರಿದ ವೀರಗಲ್ಲು

ಶಾಸನ, ಮೇಳೆಯ ಪುಣಸಿಗನ ವೀರ ಮರಣವನ್ನು ದಾಖಲಿಸುತ್ತಿದ್ದು, ಆಮಚವಾಡಿಯ ಪೆರ್ಮಾಡಿಗೌಡನನ್ನು ಸಾಂದರ್ಭಿಕವಾಗಿ ಹೆಸರಿಸುತ್ತದೆ. ಇಲ್ಲಿಯ ಮಲ್ಲೇಶ್ವರ (ಮಲ್ಲಿಕಾರ್ಜುನ) ದೇವಾಲಯವು ಹೊಯ್ಸಳರ ಕಾಲದ ನಿರ್ಮಾಣವಾಗಿದ್ದು, ಅದರ ಗರ್ಭಗೃಹ ಭಾಗವೂ ಇದನ್ನು ಪುಷ್ಟೀಕರಿಸುತ್ತದೆ. ಅಲ್ಲೇ ಇರುವ ೧೨೭೩ರ ತುಣುಕು ಶಾಸನ, ಹೊಯ್ಸಳ ಮುಮ್ಮಡಿ ನರಸಿಂಹನ ಆಳ್ವಿಕೆಯನ್ನು ಉಲ್ಲೇಖಿಸುತ್ತಾ, ಮಲ್ಲಣ, ಮಂಚಯ್ಯ, ಮುಂತಾದ ಅಧಿಕಾರಿಗಳನ್ನು ಹೆಸರಿಸುತ್ತದೆ. ಈ ಶಾಸನವನ್ನು ಆಧರಿಸಿ, ಆ ಗುಡಿಯ ಕಾಲವನ್ನು ಸುಮಾರು ೧೩ನೆಯ ಶತಮಾನಕ್ಕೆ ನಿಗದಿಪಡಿಸಬಹುದಾಗಿದೆ. ಊರಾಚೆ ದೊಂಬರಕೊಡಿಗೆ ಹೊಲದ ಓಣಿಯಲ್ಲಿರುವ ೧೩೮೦ರ ಶಾಸನ, ಊರ ಅಂತಃಕಲಹದಲ್ಲಿ ಮಡಿದ ನಾವಿದ ಮಂಚನಿಗೆ ನೀಡಿದ ನೆತ್ತರು ಕೊಡುಗೆ ಬಗ್ಗೆ ತಿಳಿಸುತ್ತದೆ. ಕಾಳಿಕೆರೆ ಬಳಿಯಿರುವ ೧೫೨೦ರ ಶಾಸನ, ಬಸವರಸನಿಗೆ ಕೊಟ್ಟ ಉಂಬಳಿಯನ್ನು ಅರುಹಿದರೆ, ಆಂಜನೇಯನ ಗುಡಿ ಬಳಿಯಿರುವ ೧೫೫೫ರ ಶಾಸನ ಹದಿನಾಡ ಚಿಕ್ಕಪ್ಪರಸನಿಗೆ ವಿಜಯನಗರದ ಅರಸ ಸದಾಶಿವರಾಯನ ಆಳ್ವಿಕೆಯಲ್ಲಿ ಅಮಚವಾಡಿ ಸ್ಥಳಕ್ಕೆ ಸೇರಿದ ಅಮಚವಾಡಿ ಹಾಗೂ ಹಿರಿಯೂರು ಗ್ರಾಮಗಳನ್ನು ಉಂಬಳಿ ನೀಡಿದ್ದನ್ನು ದಾಖಲಿಸುತ್ತದೆ. ನೆರೆಯ ಚನ್ನಾಪುರದ ೧೬೧೩ರ ಶಾಸನ ವೆಂಕಟಪತಿರಾಯನ ಆಳ್ವಿಕೆಯಲ್ಲಿ ಹದಿನಾಡ ಅರಸು ನಂಜರಾಜೊಡೆಯನು, ಆಮಚವಾಡಿ ಬೆಟ್ಟದ ಕುಂಭೇಶ್ವರ, ವೀರಭದ್ರ ಹಾಗೂ ಬಸವೇಶ್ವರ ದೇವರ ದೀಪಾರಾಧನೆಗೆಂದು ಚನ್ನಪ್ಪನಪುರವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ.

ಇಲ್ಲಿಯ ಗೋಪಾಲಸ್ವಾಮಿ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ವಿಜಯನಗರ ಕಾಲದ ರಚನೆಯಾಗಿದ್ದು, ನವರಂಗದ ಕಂಬಗಳು ವಿವಿಧ ಉಬ್ಬುಶಿಲ್ಪಗಳಿಂದ ಅಲಂಕೃತಗೊಂಡಿದ್ದರೂ ಇಂದು ಪಾಳು ಬಿದ್ದಿದೆ. ಈ ಗುಡಿಯಲ್ಲಿದ್ದ ಗೋಪಾಲಕೃಷ್ಣನ ಮೂಲವಿಗ್ರಹವನ್ನು ಚಾಮರಾಜನಗರದಲ್ಲಿರುವ ಗೋಪಾಲಸ್ವಾಮಿ ಗುಡಿಗೆ ನಂತರದಲ್ಲಿ ಸ್ಥಳಾಂತರಿಸಲಾಗಿದೆ ಎಂದು ತಿಳಿದುಬರುತ್ತದೆ. ಈ ದೇವಾಲಯದ ಆವರಣದಲ್ಲೇ ಇರುವ ಎಂಟು ವೀರಗಲ್ಲುಗಳಲ್ಲಿ ಒಂದರ ಮೇಲೆ ಯುದ್ಧ ದೃಶ್ಯವನ್ನು ಬಹಳ ಮನೋಜ್ಞವಾಗಿ ಕೆತ್ತಲಾಗಿದೆ. ಉಳಿದಂತೆ, ಊರಲ್ಲಿ ಮಹಾದೇಶ್ವರ, ಗಣಪತಿ ಮುಂತಾದ ಗುಡಿಗಳೂ ಇವೆ. ಇಲ್ಲಿಯ ಪುರಾತನ ವೀರಭದ್ರ ದೇವಾಲಯವನ್ನು ೧೮೨೬ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ರಾಣಿ ಲಿಂಗಾಜಂಮ್ಮಣ್ಣಿಯು ಪುನರ್‌ಜೀರ್ಣೋದ್ಧಾರ ಮಾಡಿಸಿ ದತ್ತಿ ಬಿಟ್ಟ ಅಂಶ ಅಲ್ಲೇ ಇರುವ ಶಾಸನವೊಂದರಿಂದ ವೇದ್ಯವಾಗುತ್ತದೆ.

**ಅಂಬಲೆ(೫,೭೬೧):** ತಾಲೂಕು ಕೇಂದ್ರ ಯಳಂದೂರಿನಿಂದ ಮೂರು ಕಿ.ಮೀ. ದಕ್ಷಿಣಕ್ಕೆ ಸುವರ್ಣ ನದಿ ಬಯಲಲ್ಲಿರುವ ಈ ಊರು ೧೨೫೫ರ ತಮಿಳು ಶಾಸನದಲ್ಲಿ 'ಅಂಬಳೆ' ಎಂದೇ ಉಲ್ಲೇಖಿತಗೊಂಡಿದೆ. ಅಲ್ಲದೆ, ಇದಕ್ಕೆ 'ಚೋಳೇಂದ್ರಸಿಂಹ ಚತುರ್ವೇದಿ ಮಂಗಲಂ' ಎಂಬ ಅಭಿದಾನವೂ ಇದ್ದ ಅಂಶ ಅದೇ ಶಾಸನದಿಂದ ಗೊತ್ತಾಗುತ್ತದೆ. ಆದರೆ ಯಳಂದೂರಿನ ೧೬೫೪ರ ಶಾಸನದಲ್ಲಿ 'ಅಮ್ಮಲೆ' ಎಂದು ದಾಖಲಿಸಲ್ಪಟ್ಟಿದೆ. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ೧೨೫೫ರ ಶಿಲಾಶಾಸನವು ಕಪಿಲೇಶ್ವರ ದೇವಾಲಯ ಪರಿಸರದಲ್ಲಿದ್ದು, ಹೊಯ್ಸಳ ವೀರಸೋಮೇಶ್ವರನ ಆಳ್ವಿಕೆಗೆ ಸೇರಿದ್ದು, ಇಲ್ಲಿಯ ಕಪಿಲೇಶ್ವರ ದೇವಾಲಯದ ನಂದಾದೀಪ ಸೇವೆಗೆಂದು ಅಂಬಲಿಯ ಪಟ್ಟಣಸ್ವಾಮಿಯ ಮೊಮ್ಮಗನೂ ಆದ ಸಿಂಗನಲ್ಲೂರಿನ ಕೇಶಿಭಟಾರನು ೧೦೦ ಕುಳಿ ಭೂಮಿಯನ್ನು ದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಶಾಸನೋಕ್ತ ಕವಿಲೇಶ್ವರ ಗುಡಿಯೇ ಈಗಿನ ಕಪಿಲೇಶ್ವರ ದೇವಾಲಯವಾಗಿದೆ. ಸಾಕಷ್ಟು ಜೀರ್ಣೋದ್ಧಾರಗೊಂಡಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಗುಡಿಯ ಭಿತ್ತಿಯು ಇಟ್ಟಿಗೆಯ ನಿರ್ಮಿತಿಯಾಗಿದ್ದು, ಗರ್ಭಗುಡಿಯ ವೃತ್ತಾಕಾರದ ಶಿಖರವು

ನಂತರದ ಸೇರ್ಪಡೆಯಾಗಿದೆ. ಈ ದೇವಾಲಯದ ಮುಂಭಾಗವೂ ಇತ್ತೀಚೆಗೆ ನವೀಕರಿಸಲ್ಪಟ್ಟಿದೆ. ಈ ಗುಡಿಯ ಮುಂಬದಿಯಲ್ಲಿ ವಿಷ್ಣುವಿನ ಮುಕ್ಕಾದ ಶಿಲ್ಪವಿದೆ. ಬದಿಯಲ್ಲೇ ಸುಬ್ರಹ್ಮಣ್ಯನ ಕಿರುಗುಡಿಯೂ ಇದೆ. ಊರ ಚಾವಡಿ ಮುಂದಿರುವ ೧೨೬೮ರ ಶಾಸನ ಹೊಯ್ಸಳ ನರಸಿಂಹನ ಕಾಲದ್ದಾಗಿದ್ದು, ವಿವರ ಹಾಳಾಗಿದೆ. ಹಿಂದೆ ಹೊಯ್ಸಳರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿದ್ದ ಈ ಊರಲ್ಲಿಂದು ಮೂಲೇಶ್ವರ, ಚಾಮುಂಡೇಶ್ವರಿ, ಗಣೇಶ ಹಾಗೂ ಉಪ್ಪರಿಗೆ ಬಸಪ್ಪನ ಗುಡಿಗಳಿವೆ. ಉಪ್ಪರಿಗೆ ಬಸಪ್ಪನ ಗುಡಿ ಬಳಿಯಿರುವ ೧೫೬೩ರ ಶಾಸನ, ಜಗದೇವರಾಯನ ಕಾರ್ಯಕರ್ತರಾದ ಚಾಮರಸವೊಡೆಯರು ಮೃತ್ಯುಂಜಯ ಮಲ್ಲಯ್ಯನಿಗೆ ಶ್ರೋತ್ರಿ ಗುತ್ತಿಗೆ–ಯಾಗಿ ಹೊನ್ನಳಿಪುರವನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಗ್ರಾಮದೇವತೆ ಚಾಮುಂಡೇಶ್ವರಿಯ ಗುಡಿಯು ನವೀಕರಣಗೊಂಡಿರುವ ವಿಶಾಲ ಗುಡಿಯಾಗಿದ್ದು, ಗರ್ಭಗೃಹದಲ್ಲಿ ಚಾಮುಂಡಿಯ ಶಿಲ್ಪವಿದ್ದು, ನವರಂಗದ ಸ್ತಂಭಗಳು ಉಬ್ಬುಶಿಲ್ಪಗಳಿಂದ ಅಲಂಕೃತಗೊಂಡಿದ್ದು, ಸಪ್ತಮಾತೃಕಾ ಪಟ್ಟಿಕೆಯನ್ನೂ ಅಲ್ಲೇ ಕಾಣಬಹುದಾಗಿದೆ. ಈ ದೇವಿಯ ಜಾತ್ರೆಯು ಶ್ರಾವಣ ಭಾದ್ರಪದ ಮಾಸದಲ್ಲಿ ಒಂದು ತಿಂಗಳ ಕಾಲ ವಿಜೃಂಭಣೆಯಿಂದ ಜರುಗುತ್ತದೆ. ಈ ಜಾತ್ರೆಯಲ್ಲಿ ಬುಧವಾರಕ್ಕೆ ಹೆಚ್ಚಿನ ಮಹತ್ವವಿದ್ದು, ದೊಡ್ಡ ಹಬ್ಬವೂ ಸೇರಿದಂತೆ ಕರಕಲು ಬುಧವಾರ ಹಾಗೂ ತಟ್ಟೆ ನೆಡುವುದೂ ಬುಧವಾರದಂದೇ. ಮೈಸೂರು ಸಂಸ್ಥಾನದಲ್ಲಿ ಹಿಂದೆ ಇದ್ದ ಕವಿ ತಿರುಮಲಾರ್ಯ, ಅಣ್ಣಯ್ಯ ಪಂಡಿತ ಮುಂತಾದವರು ಈ ಗ್ರಾಮದವರು.

**ಅಗರ(೪,೦೦೩):** ತಾಲೂಕು ಕೇಂದ್ರ ಯಳಂದೂರಿನಿಂದ ಐದು ಕಿ.ಮೀ. ಉತ್ತರಕ್ಕೆ ಯಳಂದೂರು–ಕೊಳ್ಳೇಗಾಲ ರಸ್ತೆಯಲ್ಲಿ ಸುವರ್ಣಾವತಿ ನದಿಯ ಎಡದಂಡೆ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಪ್ರಾಚೀನ ತಮಿಳು ಶಾಸನಗಳಲ್ಲಿ 'ಅನಾದಿ ಅಗ್ರಹಾರ ದುಗಯಾರಗರಂ', 'ದುರ್ಗಯರ್‌ಗರಂ' ಎಂದೂ, ಕನ್ನಡ ಶಾಸನಗಳಲ್ಲಿ 'ದುರ್ಗಾ ಅಗ್ರಹಾರ' ಎಂದೂ ಉಲ್ಲೇಖಿತಗೊಂಡಿರುವ ಈ ಊರಿಗೆ 'ವಿರುದರ ಭಯಂಕರ ಚತುರ್ವೇದಿ ಮಂಗಲ' ಎಂಬ ಅಭಿದಾನವೂ ಇದ್ದುದಕ್ಕೆ ಶಾಸನಾಧಾರಗಳಿವೆ. ಹಿಂದೊಂದು ಅಗ್ರಹಾರವಾಗಿದ್ದು, ಅಲ್ಲಿರುವ ದುರ್ಗಾಲಯಕ್ಕೆ ಇದ್ದ ಮಹತ್ವವನ್ನು ಇದು ಸೂಚಿಸುತ್ತಿದ್ದು, ಕ್ರಮೇಣ ದುರ್ಗಿ ನಾಮಪದ ಮರೆಯಾಗಿ, ಅಗ್ರಹಾರ ಸವಕಲು ರೂಪದಲ್ಲಿ ಅಗರವಾಗಿ ಉಳಿದುಬಂದಿದೆ. ಹಿಂದೆ ಇಲ್ಲಿಗೆ ಭೇಟಿ ನೀಡಿದ್ದ ವಿಷ್ಣುಶರ್ಮನೆಂಬ ರಾಜನು ಹಾವಿನ ಕಡಿತಕ್ಕೆ ತುತ್ತಾಗಿ ನರಸಿಂಹ ದೇವರನ್ನು ಪ್ರಾರ್ಥಿಸುವ ಮೂಲಕ ವಿಷಮುಕ್ತನಾದ ಕಾರಣ ಈ ಊರಿಗೆ ಅಗರ (ಗರ/ವಿಷ, ಅಗರ ಎಂದರೆ ವಿಷಮುಕ್ತ) ಎಂಬ ಹೆಸರು ಬಂತೆಂಬ ಸ್ಥಳೀಯ ಐತಿಹ್ಯ ರೂಢಿಯಲ್ಲಿದೆ. ಆದರೆ ಈ ಅಗ್ರಹಾರವನ್ನು ಕುಲೋತ್ತುಂಗ ಚೋಳನು ಸ್ಥಾಪಿಸಿ ೧೦೮ ಬ್ರಾಹ್ಮಣರಿಗೆ ದತ್ತಿ ನೀಡಿದ್ದನ್ನು ಶಾಸನವೊಂದು ದಾಖಲಿಸಿದೆ. ಇಲ್ಲಿಂದ ಈವರೆಗೆ ಸುಮಾರು ೧೨–೧೭ನೇ ಶತಮಾನಕ್ಕೆ ಸೇರಿದ ತಮಿಳು (೬೪), ಕನ್ನಡ (೧೦) ಹಾಗೂ ಸಂಸ್ಕೃತ (೫) ಭಾಷೆಗಳಲ್ಲಿರುವ ೮೦ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಕೆರೆಯ ತೂಬಿನ ಬಳಿ ಬಿದ್ದಿರುವ, ಗಂಗ ಶ್ರೀಪುರುಷನ ಆಳ್ವಿಕೆಗೆ ಸೇರಿದ ಶಾಸನ, ಅರಸ ವಿನಯತ್ತಿನಿಮ್ಮಡಿಯು ಮಳವೆಳ್ಳೂರನ್ನು ಆಳುತ್ತಿದ್ದಾಗ, ಪರ್ವಕ್ಕೆಂದು ಬಿಟ್ಟ ಸುಂಕದಾನವನ್ನು ತಿಳಿಸುತ್ತದೆ.

ಇಲ್ಲಿಯ ದೇವಾಲಯಗಳಲ್ಲಿ ನರಸಿಂಹನ ಗುಡಿಯು ಅತ್ಯಂತ ಪ್ರಾಚೀನದ್ದಾಗಿದೆ. ಗಜಪೃಷ್ಠಾಕಾರದ ತಳವಿನ್ಯಾಸವನ್ನುಳ್ಳ ಈ ದೇವಾಲಯವು ಸುಮಾರು ೧೦ನೆಯ ಶತಮಾನದ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ನವರಂಗದ ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿರುವ ದ್ವಾರಗಳಿಗೆ ಮುಖಮಂಪಟಗಳಿವೆ. ಉತ್ತರದ್ವಾರಕ್ಕೆ ಅಭಿಮುಖವಾಗಿರುವ ಕೊಠಡಿಯಲ್ಲಿ ನರಸಿಂಹನ ಲೋಹಬಿಂಬವನ್ನು ಕಾಣಬಹುದಾಗಿದೆ. ಯೋಗಾಸೀನ ನರಸಿಂಹನ ಎರಡು ಮೀಟರ್ ಎತ್ತರದ ಈ ಶಿಲ್ಪಕ್ಕೆ ಆಕರ್ಷಕ ಪ್ರಭಾವಳಿಯಿದೆ. ಈ ಅಪೂರ್ವ ಶಿಲ್ಪವು ನರಸಿಂಹನ ಪಂಚಾವತಾರಗಳನ್ನು ಪ್ರತಿನಿಧಿಸುತ್ತಿದ್ದು,

ಯೋಗ ಭಂಗಿಯಲ್ಲಿರುವುದರಿಂದ ಯೋಗಾನರಸಿಂಹನೆಂದೂ, ಎದೆಯ ಮೇಲಿರುವ ಲಕ್ಷ್ಮಿಯ ಕೆತ್ತನೆಯಿಂದಾಗಿ ಲಕ್ಷ್ಮೀನರಸಿಂಹನೆಂದೂ, ಹಣೆಗಣ್ಣನ್ನು ಹೊಂದಿರುವುದರಿಂದ ಉಗ್ರನರಸಿಂಹನೆಂದೂ, ಕಿವಿಯ ಬಳಿ ಜ್ವಾಲೆಯಿರುವುದರಿಂದ ಜ್ವಾಲಾನರಸಿಂಹನೆಂದೂ ಸನ್ನಿಧಿಯಲ್ಲಿ ಭಕ್ತಪ್ರಹ್ಲಾದನಿರುವುದರಿಂದ ಸೌಮ್ಯನರಸಿಂಹನೆಂದೂ ಪರಿಗಣಿಸಬಹುದೆಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಈ ದೇವಾಲಯದಲ್ಲಿ ಸುಮಾರು ೧೦ ರಿಂದ ೧೬ನೇ ಶತಮಾನಕ್ಕೆ ಸೇರಿದ ಐದು ಶಾಸನಗಳಿದ್ದು, ಅವುಗಳಲ್ಲೊಂದು ಒಂದನೇ ರಾಜರಾಜಚೋಳನ ಕಾಲಕ್ಕೆ ಸೇರಿದ್ದರೆ, ಇನ್ನೆರಡು ಹೊಯ್ಸಳ ವಿಷ್ಣುವರ್ಧನ ಮತ್ತವನ ದಂಡನಾಯಕರ ದತ್ತಿ ಶಾಸನಗಳಾಗಿವೆ. ಉಳಿದೆರಡು ಹೊಯ್ಸಳ ಪೆರುಮಾಳ ದಂಡನಾಯಕ (೧೨೪೮) ಹಾಗೂ ಹರಮಲ್ಲಯ್ಯನ (೧೫೬೦) ಶಾಸನಗಳಾಗಿದ್ದು, ಲಕ್ಷ್ಮೀನರಸಿಂಹ ದೇವಾಲಯದ ಪುನರ್ ಜೀರ್ಣೋದ್ಧಾರಕ್ಕೆ ಸಂಬಂಧಿಸಿದ್ದಾಗಿವೆ.

ವಿಶಾಲವಾದ ಪ್ರಾಕಾರದ ನಡುವೆ ಇರುವ ರಾಮೇಶ್ವರ ದೇವಾಲಯದ ಸುಮಾರು ೩೫ ದಾನ ಶಾಸನಗಳಲ್ಲಿ ಹೆಚ್ಚಿನವು ತಮಿಳಿನಲ್ಲಿವೆ. ಸುಮಾರು ೧೧-೧೮ನೇ ಶತಮಾನಕ್ಕೆ ಸೇರಿದ ಈ ಶಾಸನಗಳಿಂದ ಈ ದೇವಾಲಯದ ಏಳು-ಬೀಳುಗಳನ್ನು ಗುರುತಿಸಬಹುದಾಗಿದೆ. ಇದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮುಖಮಂಟಪಗಳನ್ನು ಹೊಂದಿದ್ದು, ಕಳೆದ ಶತಮಾನದಲ್ಲಿ ದುರಸ್ತಿಗೊಂಡಿದೆ. ಗರ್ಭಗೃಹದಲ್ಲಿ ರಾಮೇಶ್ವರ ಲಿಂಗವಿದ್ದು, ಪೂರ್ವ-ದಕ್ಷಿಣ ಪ್ರವೇಶವುಳ್ಳ ನವರಂಗದಲ್ಲಿ ಸೂರ್ಯ, ಗಣಪತಿ, ಚಂದ್ರಶೇಖರ, ವೀರಭದ್ರ, ನಾರಾಯಣ ಹಾಗೂ ದಕ್ಷಿಣಾಮೂರ್ತಿಯ ಶಿಲ್ಪಗಳಿವೆ. ಈ ಗುಡಿಯ ಎಡಮೂಲೆಯಲ್ಲಿರುವ ಪಾರ್ವತಿಗುಡಿಯಲ್ಲಿ ಒಂದೂವರೆ ಮೀಟರ್ ಎತ್ತರದ ಪಾರ್ವತಿಯ ಶಿಲ್ಪವಿದ್ದು, ಸ್ಥಳೀಯವಾಗಿ ಅದನ್ನು ಪರ್ವತವರ್ಧಿನಿ ಎಂದು ಕರೆಯಲಾಗುತ್ತದೆ. ರಾಮೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಶಂಕರಮಠವು ಶಿಥಿಲಾವಸ್ಥೆಯಲ್ಲಿದೆ. ಇಲ್ಲಿರುವ ವರದರಾಜನ ಕಿರು ದೇವಾಲಯವು ಚೋಳ ನಿರ್ಮಾಣವೆಂಬ ಅಭಿಪ್ರಾಯವಿದ್ದು, ಜೀರ್ಣಾವಸ್ಥೆಯಲ್ಲಿದೆ. ಚೋಳ ಕುಲೋತ್ತುಂಗನಿಂದ ನಿರ್ಮಿಸಲ್ಪಟ್ಟಿರುವ ದುರ್ಗಾ ದೇವಾಲಯದ ಗರ್ಭಗೃಹದಲ್ಲಿ ದುರ್ಗೆಯ ಶಿಲ್ಪವಿದ್ದು, ಗರ್ಭಗುಡಿಯ ಮೇಲಿದ್ದ ಶಿಖರ ಕುಸಿದಿದೆ. ಇದರ ನವರಂಗದಲ್ಲಿ ದೇವಕೋಷ್ಠಗಳಿದ್ದು, ನಡುವಣ ಛತ್ತನ್ನು ಅಲಂಕರಿಸಿರುವ ಭುವನೇಶ್ವರಿಯು ಆಕರ್ಷಕವಾಗಿದೆ. ಗುಡಿಯ ಅಧಿಷ್ಠಾನದ ಮೇಲೆ ಆನೆಗಳ ಸಾಲಿದ್ದು, ಗರ್ಭಗೃಹದ ಸುತ್ತ ತಮಿಳು ಶಾಸನವನ್ನು ಕೆತ್ತಲಾಗಿದೆ. ಉಳಿದಂತೆ ಊರಲ್ಲಿ ಗಣಪತಿ, ವೀರಾಂಜನೇಯ, ಕಾಳಮ್ಮ ಮುಂತಾದ ನವೀನ ಗುಡಿಗಳಿದ್ದು, ಸಿದ್ಧಪ್ಪಾಜಿ ಗದ್ದುಗೆ ಮಹಾಂತರ ಮಠಗಳ ಜೊತೆಗೆ ಮಸೀದಿಯೂ ಇದೆ. ಇಲ್ಲಿಯ ಮಹಾಂತರ ಮಠದ ಹೊರ ಜಗಲಿಗೆ ಸೇರಿರುವ ೧೪೮೩ರ ಶಾಸನ ಉಮ್ಮತ್ತೂರ ಪ್ರಭು, ವೀರನಂಜರಾಯನು ಹುಲಿಯೂರು ಮೂಲದ ನಿರ್ಮಲದೇವೊಡೆಯನ ಮಗ ಆರಾಧ್ಯವೊಡೆಯನಿಗೆ ಕೊಟ್ಟ ಗೃಹದಾನವನ್ನು ತಿಳಿಸುತ್ತದೆ.

**ಆಲತ್ತೂರು (೨೨೨೩ ):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಸುಮಾರು, ೨೦ಕಿ.ಮೀ.ದೂರದಲ್ಲಿರುವ ಇದರ ಪ್ರಾಚೀನತೆಯನ್ನು ಗಂಗರ ಕಾಲಕ್ಕೆ ಸೇರಿದ ವೀರಗಲ್ಲು ಶಾಸನಗಳಿಂದ ಸುಮಾರು ೯ನೇ ಶತಮಾನಕ್ಕೆ ಗುರುತಿಸಬಹುದಾಗಿದೆ. ಪ್ರಾಚೀನ ಶಾಸನಗಳಲ್ಲೂ 'ಆಲತ್ತೂರು' ಎಂದೇ ಉಲ್ಲೇಖಿತಗೊಂಡಿರುವ ಈ ಊರಿನಲ್ಲಿರುವ ನಾಲ್ಕು ಶಾಸನಗಳಲ್ಲಿ ಮೂರು ವೀರಗಲ್ಲು ಶಾಸನಗಳಾಗಿದ್ದು, ಗಂಗರ ಕಾಲದ ಎರಡು, ಅಟ್ಟಿಯ ತುರುಗೊಳದಲ್ಲಿ ಮಡಿದ ಮುಚ್ಚನೂರ ತಿಪ್ಪಣ್ಣಸೆಟ್ಟಿ ಹಾಗೂ ಇನ್ನೊಬ್ಬ ವೀರನ ಸ್ಮಾರಕ ಶಿಲ್ಪಗಳಾಗಿವೆ. ಯುವರಾಜ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲದಲ್ಲಿ (೧೨೮೫), ಪೆರುಮಾಳದೇವ ದಂಡನಾಯಕನು ಅಧಿಕಾರಿಯಾಗಿದ್ದಾಗ, ಹುಲಿಯನ್ನು ಕೊಂದು ಸ್ವರ್ಗಸ್ಥನಾದ ಓಲೆಕಾರ ಮಾರಯ್ಯನಿಗೆ ನೀಡಿದ ದತ್ತಿಯನ್ನು ಇನ್ನೊಂದು ವೀರಗಲ್ಲು ಶಾಸನ ತಿಳಿಸುತ್ತದೆ. ನೆರೆಯ ಚನ್ನಮಲ್ಲಾಪುರದ ನಂಜುಂಡೇಶ್ವರ ಗುಡಿ ಮುಂದಿರುವ

೧೪೩೦ರ ಶಾಸನದಿಂದ ತೆರಕಣಾಂಬಿ ರಾಜ್ಯವನ್ನಾಳುತ್ತಿದ್ದ ಚಿಕ್ಕಣ್ಣವೊಡೆಯನು ಕುಡುಗುನಾಡ ಆಲತೂರನ್ನು ದೇವಮಾನ್ಯವಾಗಿ ನಂಜನಗೂಡಿನ ನಂಜುಂಡೇಶ್ವರನಿಗೆ ದತ್ತಿ ನೀಡಿದ್ದು ವೇದ್ಯವಾಗುತ್ತದೆ. ಊರ ವರದರಾಜಸ್ವಾಮಿ ಗುಡಿ ಮುಂದಿರುವ ಸುಮಾರು ೧೭ನೇ ಶತಮಾನದ ಶಾಸನ ಗೋವಿಂದಬಾವಿಯನ್ನು ಸಿಂಗಯ್ಯನು ದೇವರಿಗೆ ದತ್ತಿ ನೀಡಿದ್ದನ್ನು ದಾಖಲಿಸಿದೆ. ಇಲ್ಲಿಯ ವರದರಾಜ ದೇವಾಲಯವು ವಿಜಯನಗರೋತ್ತರ ಕಾಲದ ರಚನೆಯಾಗಿದ್ದು, ನಿರಾಡಂಬರವಾಗಿದೆ.

**ಆಲದೂರು (೧,೫೭೯):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ವಾಯವ್ಯಕ್ಕೆ ೩೦ ಕಿ.ಮೀ. ದೂರದಲ್ಲಿರುವ ಇದು ಪ್ರಾಚೀನ ಶಾಸನಗಳಲ್ಲೂ 'ಆಲದೂರು' ಎಂದೇ ಉಲ್ಲೇಖಿತಗೊಂಡಿದೆ. ಊರ ಶಂಭುಲಿಂಗೇಶ್ವರ ಗುಡಿ ಮುಂದಣ ಕಲ್ಲುಗಾಣದ ಮೇಲಿರುವ ಸುಮಾರು ೧೦ನೇ ಶತಮಾನಕ್ಕೆ ಸೇರಿದ ಶಾಸನ, ಹೆಮ್ಮೇಶ್ವರ ದೇವರಿಗೆ ಸುಂಕವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ಅಲ್ಲೇ ಇರುವ ಹೊಯ್ಸಳ ಒಂದನೇ ನರಸಿಂಹನ ಆಳ್ವಿಕೆಗೆ ಸೇರಿದ ೧೧೬೫ರ ಶಾಸನ, ಲಕ್ಷ್ಮೀನಾರಾಯಣ ದೇವದಂಡನಾಯಕನು ಹೇಮೇಶ್ವರ ದೇವರಿಗೆ ಭೂ ದತ್ತಿ ನೀಡಿದ್ದನ್ನು ದಾಖಲಿಸಿದೆ. ತಾಯೂರಿಗೆ ಹೋಗುವ ಓಣಿಯಲ್ಲಿರುವ ೧೫೨೪ರ ಶಾಸನ ಬಹಳ ಹಾಳಾಗಿದ್ದರೆ, ಊರ ಅಂಕದ ಬಾಗಿಲ ಬಳಿ ಇರುವ ೧೫೨೮ರ ಶಾಸನ ಕೃಷ್ಣದೇವರಾಯನಿಗೆ ಧರ್ಮವಾಗಲೆಂದು ಅರಸನ ನಿರೂಪದಂತೆ ದೇವರಸಯ್ಯನು ಉಮ್ಮತ್ತೂರು ಬ್ರಾಹ್ಮಣರಿಗೆ ಆಲುದೂರು ಗ್ರಾಮವನ್ನು ದಾನ ನೀಡಿದ್ದನ್ನು ದಾಖಲಿಸಿದೆ. ನವಿಲುಗೆರೆ ಮಾರ್ಗದಲ್ಲಿರುವ ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಬೈಯಪ್ಪದೇವರಸನು ಅರಹಳ್ಳಿ ಗ್ರಾಮವನ್ನು ಜೋಯಿಸ ಸೋದರರಿಗೆ ಉಂಬಳಿ ನೀಡಿದ್ದನ್ನು ದಾಖಲಿಸಿದೆ. ಮೇಲಿನ ಶಾಸನೋಕ್ತ ಹೆಮ್ಮೇಶ್ವರ ದೇವಾಲಯವು ಇಂದಿನ ಶಂಭುಲಿಂಗೇಶ್ವರ ದೇವಾಲಯವಾಗಿದ್ದು, ಅದರ ಪ್ರಾಚೀನತೆಯನ್ನು ಸುಮಾರು ೧೦ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದೆಂದು ತೋರುತ್ತದೆ.

**ಉಗನೆಹುಂಡಿ (೧,೪೦೭):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೧೩ ಕಿ.ಮೀ. ದೂರದಲ್ಲಿರುವ ಈ ಊರು ೧೨ನೇ ಶತಮಾನದ ಶಾಸನದಲ್ಲಿ 'ಉಗುನೆ' ಎಂದು ದಾಖಲಾಗಿದೆ. ಊರ ಹೊಲವೊಂದರಲ್ಲಿರುವ ೧೧೨೨ರ ಶಾಸನ ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ, ಎಣ್ಣೆನಾಡ 'ಉಗುನೆ' ಗ್ರಾಮದ ಹೇರೊಡೆ (ಹಿರೊಡೆ)ಯರಾದ ಚಟ್ಟಿ ಹಾಗೂ ದೇವಗೌಡರು, ರಾಮದೇವರ ದೇವಾಲಯವನ್ನು ನಿರ್ಮಿಸಿ, ಭೂಮಿ ಗಾಣಗಳನ್ನು ಚಾಳುಕ್ಯ ವಂಶದ ರಾಮಲಿಂಗಪಂಡಿತರಿಗೆ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಈ ಶಾಸನದ ಶಿರೋಭಾಗದಲ್ಲಿ ಶಿವಲಿಂಗ ಹಾಗೂ ಭಕ್ತರ ಉಬ್ಬುಕೆತ್ತನೆಯಿದ್ದು, ಕೆಳಗೆ 'ಭಾವಜಿಯರಸೊರೂಪ' ಎಂಬ ಬರಹವಿದೆ. ಮೇಲಿನ ಶಾಸನೋಕ್ತ ರಾಮದೇವರ ಗುಡಿಯು ಹೊಯ್ಸಳರ ಕಾಲದ ರಚನೆಯಾಗಿದ್ದು, ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿದೆ. ಬಸವೇಶ್ವರ ಗುಡಿಗೆ ಹೋಗುವ ಹಾದಿಯಲ್ಲಿರುವ ಸುಮಾರು ೧೬ನೇ ಶತಮಾನಕ್ಕೆ ಸೇರಿದ ಶಾಸನದಿಂದ ಉಗುನೆಕೋಟೆಯ ರಾಯನು ಕೋನಯ್ಯನಿಗೆಂದು ಹನುಮನ ಕಲ್ಲನ್ನು ನಿಲ್ಲಿಸಿದ ಅಂಶ ಗೊತ್ತಾಗುತ್ತದೆ.

**ಉಮ್ಮತ್ತೂರು (೫೨೩೧):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಸುಮಾರು ೧೬ ಕಿ.ಮೀ. ದೂರದಲ್ಲಿರುವ ಇದೊಂದು ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ವಿಜಯನಗರದ ಅರಸರ ಕಾಲದಲ್ಲಿ ಸಾಮಂತ ಮನೆತನವೊಂದರ ಆಡಳಿತ ಕೇಂದ್ರವಾಗಿ, ರಾಜಧಾನಿಯಾಗಿ ಮಹತ್ವ ಪಡೆದಿತ್ತು. ಪ್ರಾಚೀನ ಶಾಸನಗಳಲ್ಲೂ 'ಉಂಮತೂರು' 'ಉಮ್ಮತ್ತೂರು' ಎಂದೇ ಉಲ್ಲೇಖಿತಗೊಂಡಿರುವ ಇದರ ನಾಮನಿಷ್ಪತ್ತಿಯನ್ನು 'ಉಮ್ಮತ್ತ'ಎಂಬ ಸಸ್ಯ (ಕನ್ನಡದ ದತ್ತೂರಿ ಗಿಡ) ವಾಚಿ ಮೂಲದಲ್ಲಿ ಗುರುತಿಸಬಹುದೆಂದು ಹೇಳಲಾಗುತ್ತದೆ. ಇಲ್ಲಿಂದ ಈವರೆಗೆ ಸುಮಾರು

೧೧–೧೮ನೇ ಶತಮಾನಕ್ಕೆ ಸೇರಿದ ೧೪ ಶಿಲಾಶಾಸನಗಳು ವರದಿಯಾಗಿವೆ. ಅದರಲ್ಲೂ ೧೧ನೇ ಶತಮಾನಕ್ಕೆ ಸೇರಿದ ಶಾಸನಗಳಿಂದ ಹಿಂದೆ ಇದೊಂದು ಜೈನಕೇಂದ್ರವಾಗಿದ್ದ ಅಂಶ ಗೊತ್ತಾಗುತ್ತದೆ.

ಊರಲ್ಲಿರುವ ಎರಡು ಬಸದಿಗಳಲ್ಲಿ ವರ್ಧಮಾನ ಬಸದಿಯು ದೊಡ್ಡದಿದ್ದು, ಉಮ್ಮತ್ತೂರು ಪಾಳೇಗಾರರಿಂದ ಜೀರ್ಣೋದ್ಧಾರಗೊಂಡಿದ್ದು, ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಪದ್ಮಾಸನ ಭಂಗಿಯಲ್ಲಿರುವ ವರ್ಧಮಾನ ಮಹಾವೀರನ ಶಿಲ್ಪವಿದೆ. ಗರ್ಭಗೃಹದ ಭಿತ್ತಿಯ ಮೇಲಿರುವ ಶಾಸನ, ಪೆನುಗೊಂಡೆಯ ಪಾಯಣ ಪಂಡಿತನು ವರ್ಧಮಾನ ತೀರ್ಥಂಕರ ಗುಡಿಯಲ್ಲಿ ಸೇವೆ ಮಾಡಿಕೊಂಡಿದ್ದನ್ನು ತಿಳಿಸುತ್ತದೆ. ಇಂದು ಗುಡಿಯ ಪ್ರಾಕಾರದಲ್ಲಿ ಸುಮಾರು ೧೧ನೇ ಶತಮಾನಕ್ಕೆ ಸೇರಿದ ಮೂರು ನಿಶಿಧಿ ಶಾಸನ ಸ್ಮಾರಕ ಶಿಲ್ಪಗಳಿದ್ದು, ಸನ್ಯಾಸನ ವಿಧಿ ಮೂಲಕ ನಿರ್ವಾಣ ಹೊಂದಿದ ನಾಗಯ್ಯ, ರಾಜಭಟಾರ ಹಾಗೂ ಇನ್ನೋರ್ವನನ್ನು ಅವು ಹೆಸರಿಸುತ್ತವೆ. ದೂರ ಹೊರಗಿರುವ ಆದಿನಾಥ ಬಸದಿಯಲ್ಲಿ ಆದಿನಾಥ ತೀರ್ಥಂಕರ ಶಿಲ್ಪವಿದೆ. ಊರಾಚೆ ಇರುವ ಸಪ್ತಮಾತೃಕಾ ಗುಡಿಯಲ್ಲಿ ಗಂಗರ ಕಾಲದ ಸಪ್ತಮಾತೃಕೆಯರ ಬಿಡಿ ಶಿಲ್ಪಗಳಿವೆ. ಅದೇ ಗುಡಿಯ ತೋರಣ ಬಾಗಿಲ ಮೇಲಿರುವ ೧೪೦೭ರ ಶಾಸನ ಹರವೆಯ ಯಲವದಾಸನ ಸೇವೆಯನ್ನು ದಾಖಲಿಸಿದೆ. ಆ ಗುಡಿಯ ನೈಋುತ್ಯಕ್ಕಿರುವ ೧೪೭೩ರ ವೀರಗಲ್ಲು ಶಾಸನ ಉಂಮತ್ತೂರ ದೊಡ್ಡತಮ್ಮನ ವೀರಮರಣವನ್ನು ದಾಖಲಿಸಿರುವಂತೆ ತೋರುತ್ತದೆ.

ಇಲ್ಲಿಯ ಜನಾರ್ದನ ದೇವಾಲಯವು ಪಾಳು ಬಿದ್ದಿದೆ. ಇಲ್ಲಿಯ ಮೂಲಮೂರ್ತಿಯನ್ನು ಸಮೀಪದ ಕುದೇರು ಗ್ರಾಮಕ್ಕೆ ಸ್ಥಳಾಂತರಿಸಲಾಗಿದೆಯೆಂದು ಹೇಳಲಾಗುತ್ತದೆ. ಮನೆಯೊಂದರ ಹಿತ್ತಲಲ್ಲಿರುವ ೧೫೨೭ರ ಶಾಸನ ಕೃಷ್ಣರಾಯರಿಗೆ ಧರ್ಮಕೀರ್ತಿಯಾಗಲೆಂದು ಪ್ರಧಾನಿ ತಿಮ್ಮರಾಜರು ಗರ್ಭಗೃಹ, ಸುಖನಾಸಿ, ಮುಂತಾದವನ್ನು ಜೀರ್ಣೋದ್ಧಾರ ಮಾಡಿಸಿದ್ದನ್ನು ದಾಖಲಿಸಿದ್ದು, ದೇವಾಲಯದ ಹೆಸರಿದ್ದ ಭಾಗ ಸವೆದಿದ್ದು, ವಿವರ ಹಾಳಾಗಿದೆ. ವಿಜಯನಗರ ಕಾಲದ ರಂಗನಾಥ ದೇವಾಲಯದ ಚೌಕಾಕಾರದ ಗರ್ಭಗುಡಿಯಲ್ಲಿ ರಂಗನಾಥನ ಶಿಲ್ಪವಿದ್ದು, ಮೇಲೆ ಜೀರ್ಣೋದ್ಧಾರಗೊಂಡಿರುವ ದ್ರಾವಿಡ ಶಿಖರವಿದೆ. ಇದರ ವಿಶಾಲವಾದ ನವರಂಗದ ಇಕ್ಕೆಲಗಳಲ್ಲಿರುವ ಕೋಷ್ಟಗಳಲ್ಲಿ ಆಸೀನ ರಂಗನಾಯಕಿ ಹಾಗೂ ಬೆಣ್ಣೆ ಕೃಷ್ಣನ ಮೂರ್ತಿಗಳಿದ್ದು, ಕಂಬಗಳನ್ನು ಉಬ್ಬುಶಿಲ್ಪಗಳ ಕೆತ್ತನೆಯಿಂದ ಅಲಂಕರಿಸಲಾಗಿದೆ. ಅಲ್ಲಿಯ ಕಂಬವೊಂದರ ಮೇಲಿರುವ ೧೫೨೮ರ ಶಾಸನದಲ್ಲಿ ರಂಗನಾಥ ದೇವರಿಗೆ, ರಂಗನಾಯಕನೆಂಬ ಅಧಿಕಾರಿಯು ಉಂಬಳಿ ನೀಡಿದ ವಿವರವಿದೆ. ದೇವಾಲಯದ ಮುಂದಿರುವ ಎತ್ತರದ ಧ್ವಜಸ್ತಂಭದ ಮೇಲೆ ಸ್ಥಳೀಯ ಪಾಳೇಗಾರರ ಭಕ್ತ ಶಿಲ್ಪಗಳಿವೆ. ಈ ಗುಡಿಯ ಬದಿಯಲ್ಲೇ ವೀರಭದ್ರನ ಕಿರುಗುಡಿಯೊಂದಿದೆ. ಬದಿಯಲ್ಲೇ ಇರುವ ಭುಜಂಗೇಶ್ವರ ದೇವಾಲಯವು ಸಾಕಷ್ಟು ದೊಡ್ಡದಿದ್ದು, ಜೀರ್ಣೋದ್ಧಾರ ಕಾರ್ಯ ನಡೆದಿದೆ. ಈ ಗುಡಿಯ ಧ್ವಜಸ್ಥಂಭದ ಮೇಲಿರುವ ೧೫೪೫ರ ಶಾಸನ, ಸದಾಶಿವರಾಯನು ಭುಜಂಗೇಶ್ವರ ದೇವರಿಗೆ ವಿರೂಪಸಮುದ್ರ ಗ್ರಾಮವನ್ನು ದತ್ತಿ ನೀಡಿದ್ದನ್ನು ದಾಖಲಿಸಿದೆ. ಊರಾಚೆ ಜಮೀನಿನ ನಡುವೆ ಇರುವ ೧೫೮೯ರ ಶಾಸನವು ವಿಜಯನಗರದರಸ ವೆಂಕಟಪತಿರಾಯನು ಉಮ್ಮತ್ತೂರಿನ ಭುಜಂಗೇಶ್ವರ ದೇವರ ಸೇವೆಗೆಂದು ಕೊಲ್ಲಗೌಡನಪುರವನ್ನು ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಅಲ್ಲೇ ಇರುವ ಸುಮಾರು ೧೬ನೇ ಶತಮಾನದ ಇನ್ನೊಂದು ಶಾಸನ ಈ ದೇವರ ಉಪಾಹಾರ ನಂದಾದೀವಿಗೆಗಳಿಗೆಂದು ಭೂದಾನ ನೀಡಿದ್ದನ್ನು ದಾಖಲಿಸುತ್ತದೆ. ಪ್ರಾಕಾರದೊಳಗಿರುವ ಕಾರ್ತಿಕೇಯನ ಗುಡಿಯಲ್ಲಿ ಮೂರು ಹೊಯ್ಸಳ ಶಿಲ್ಪಗಳಿದ್ದು, ವಿಜಯನಗರ ಕಾಲದ ದಕ್ಷಿಣಾಮೂರ್ತಿ ಶಿಲ್ಪವಿದೆ. ಈ ಗುಡಿಯ ಪ್ರಧಾನ ದ್ವಾರಬಾಗಿಲ ಮೇಲಿರುವ ಗಣಪತಿ, ಉಮಾಮಹೇಶ್ವರ, ಮಹಿಷಮರ್ಧಿನಿ ಮುಂತಾದ ಕೆತ್ತನೆಗಳು ಆಕರ್ಷಕವಾಗಿವೆ.

**ಎಣ್ಣೆಗುಂಬ(೯೩೭):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ನೈಋತ್ಯಕ್ಕೆ ೨೨ ಕಿ.ಮೀ. ದೂರದಲ್ಲಿರುವ ಇದರ ಮೊದಲ ಉಲ್ಲೇಖ 'ಎರುಮೈ ಕುಂಮ್ಬು' ರೂಪದಲ್ಲಿ ಚೋಳ ಒಂದನೆಯ ಕುಲೋತ್ತುಂಗನ ೧೧೧೦ರ ತಮಿಳು ಶಾಸನದಲ್ಲಿ ಲಭಿಸುತ್ತಿದ್ದು, ಈ ಗ್ರಾಮದ ತಿರುವಿರಾಮೇಶ್ವರ ಮುಡ್ವೆಯರ್ ಮಹಾದೇವರಿಗೆ ೨೦೦೦ ಕುಳಿ ಭೂದಾನವೂ ಸೇರಿದಂತೆ ಅನೇಕ ತೆರಿಗೆಗಳನ್ನು ದತ್ತಿ ನೀಡಿ ಆ ಗುಡಿಗೆ ಸೇರಿದ ಮಠದ ಅಮೃತಕರ್ತಾರರಿಗೆ, ದೇವಾಲಯದ ಜವಾಬ್ದಾರಿಯನ್ನು ನೀಡಿದ್ದನ್ನೂ ಇದು ತಿಳಿಸುತ್ತದೆ. ಇದರಿಂದ ಇಲ್ಲಿಯ ರಾಮೇಶ್ವರ ದೇವಾಲಯದ ಪ್ರಾಚೀನತೆಯನ್ನು ಸುಮಾರು ೧೦ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ನೆರೆಯ ದಾಸನಪುರದ ೧೫೩೬ರ ಶಾಸನದಿಂದ ಎಣ್ಣೆಗುಂಬಕ್ಕೆ ಸೇರಿದ ತಿಮ್ಮಪ್ಪನಪುರ ಉಪಗ್ರಾಮವನ್ನು ತೆರಕಣಾಂಬೆಯ ತಿರುಮಲದೇವರ ಸೇವೆಗೆ ದತ್ತಿ ಬಿಟ್ಟ ಅಂಶ ಗೊತ್ತಾಗುತ್ತದೆ.

**ಎ(ಯ)ಲ್ಲೂರು(೧,೪೨೬):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿರುವ ಇದು ಸುಮಾರು ೮–೯ನೇ ಶತಮಾನದ ಗಂಗ ಶಾಸನಗಳಲ್ಲಿ 'ಎಲವಕ್ಕಲೂರು' ಎಂದೂ ೧೨೮೧ರ ಹೊಯ್ಸಳ ಶಾಸನದಲ್ಲಿ 'ಎಲವಕೂರು' ರೂಪದಲ್ಲೂ ದೊರೆಯುತ್ತದೆ. ಗ್ರಾಮದ ಮೊಗ್ಗೆಕಟ್ಟೆ ಕಲ್ಲ ಮೇಲಿರುವ ಸುಮಾರು ೮ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನ ಬಹಳ ಹಾಳಾಗಿದ್ದರೂ, 'ಎಲವಕ್ಕಲೂರು' ಎಂದಿರುವ ಭಾಗ ಹಾಳಾಗಿಲ್ಲ. ಬಸವನಗುಡಿಯ ಪೂರ್ವಕ್ಕಿರುವ ಸುಮಾರು ೯ನೇ ಶತಮಾನಕ್ಕೆ ಸೇರಿದ ಶಾಸನ ಗಂಗ ಸತ್ಯವಾಕ್ಯ ಪೆರ್ಮಡಿಯ ಆಳ್ವಿಕೆಯಲ್ಲಿ ನರಸಿಂಗನು ಈ ಊರನ್ನು ಕೆರೆ ನಿರ್ಮಿಸಿದ ದಾನಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಮೊಗ್ಗೆಕಟ್ಟೆಯ ಬಳಿ ಇರುವ ೯೭೨ರ ಇನ್ನೊಂದು ವೀರಗಲ್ಲು ಶಾಸನ, ರಾಜಾದಿತ್ಯ ಮತ್ತು ಗಂಗಪೆರ್ಮಾಡಿ ನಡುವೆ ನಡೆದ ಕಾಳಗದಲ್ಲಿ ಮಡಿದ ಇಮ್ಮಡಿ ಪೆರ್ಮಾಡಿಯಾಚಾರ್ಯರ ಮಗ ಬರ್ದೆಮಯ್ಯನ (?) ಸಲುವಾಗಿ ಬಾಳ್ಗಲ್ಚು  ಉಂಬಳಿಯಾಗಿ ಎಲವಕಲೂರನ್ನು ದಾನ ನೀಡಿದ್ದನ್ನು ದಾಖಲಿಸಿದೆ. ಬಸವನಗುಡಿಯ ಉತ್ತರಕ್ಕಿರುವ ಗಂಗ ಅರಸ ನೀತಿಮಾರ್ಗ ಕೊಂಗುಣಿವರ್ಮನ ಆಳ್ವಿಕೆಗೆ ಸೇರಿದ ಕ್ರಿ.ಶ. ೧೦೦೦ ರ ಶಾಸನ, ನೊಳಂಬ ಕುಲದ ಪೃಥವಬ್ಬರಸಿ ಹಾಗೂ ಪೆರ್ಮಾನಡಿಯರು 'ಎಲವಕ್ಕಲೂರು' ಗ್ರಾಮದಲ್ಲಿ ಭೂ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿಯ ಬಸವೇಶ್ವರ ದೇವಾಲಯ ಗಂಗರ ವಾಸ್ತುಶಿಲ್ಪಾವಶೇಷಗಳನ್ನು ಹೊಂದಿರುವ ಸಾಧ್ಯತೆಯಿದೆ.

**ಕಮರಹಳ್ಳಿ(೧,೯೭೨):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಉತ್ತರಕ್ಕೆ ೧೫ ಕಿ.ಮೀ. ದೂರದಲ್ಲಿರುವ ಇದು ಪ್ರಾಚೀನ ಶಾಸನಗಳಲ್ಲಿ 'ಅರಿಊರ' ಎಂದು ಉಲ್ಲೇಖಿತಗೊಂಡಿದ್ದರೂ, ೧೫೬೭ರ ಶಾಸನದಲ್ಲಿ 'ಕಮರವಳ್ಳಿ' ಉಲ್ಲೇಖ ಕಂಡು ಬರುತ್ತದೆ. ಇಲ್ಲಿಂದ ವರದಿಯಾಗಿರುವ ಐದು ಶಾಸನಗಳಲ್ಲಿ ಮಾರಿಚಾವಡಿ ಬಳಿಯಿರುವ ಎರಡು ಶಾಸನಗಳು ಶ್ರೀ ಪುರುಷನ ಕಾಲದ್ದಾಗಿದ್ದು, ಅರಿಯೂರು ಹೆಗ್ಗಡೆ ಮಾದಪ್ಪಣ್ಣನು ಗುಣಸಾಗರ ತಮ್ಮಡಿಗೆ ಭೂ ದಾನ ನೀಡಿದ್ದನ್ನು ತಿಳಿಸುತ್ತವೆ. ಊರ ಉಪ್ಪರಿಗೆ ಬಸವೇಶ್ವರ ಗುಡಿ ಬಳಿಯಿರುವ ೧೫೬೭ರ ಶಾಸನ ಜುಂಜ ವಡೆಯರ ಶಿಷ್ಯ ಕರಿಬಸವಡೆಯರ ಮಗನಾದ ಕಮರವಳಿಯ ಲಿಂಗದೇವ ಒಡೆಯರು, ಬಸವೇಶ್ವರ ದೇವರಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಉಳಿದ ಇನ್ನೆರಡು ಶಾಸನಗಳು ಅರವಟ್ಟಿಗೆ ದಾನಗಳಾಗಿವೆ.

**ಕಂದೆಗಾಲ (೧,೦೬೨):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಒಂಭತ್ತು ಕಿ.ಮೀ. ದೂರದ ಪಾರ್ವತಿ ಬೆಟ್ಟದ ತಪ್ಪಲಿನಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಹಿಂದೆ ಇದೊಂದು ಅಗ್ರಹಾರವಾಗಿದ್ದು, ಸುಮಾರು ೧೧–೧೨ನೇ ಶತಮಾನದ ತಮಿಳು ಶಾಸನಗಳಲ್ಲಿ 'ಕಂದಮಂಗಲ' ಎಂದೇ ಉಲ್ಲೇಖಿತಗೊಂಡಿದೆ. ಹಿಂದೆ ಇದು

ಮುಡಿಗೊಂಡ ಚೋಳಮಂಡಲದಲ್ಲಿದ್ದು, ಇಲ್ಲಿಯ ಸೋಮೇಶ್ವರ ದೇವರ ಪೂಜಾವಿಧಿಗೆಂದು ದತ್ತಿ ಬಿಟ್ಟಿದ್ದ ಅಂಶ ವೇದ್ಯವಾಗುತ್ತದೆ. ಅಲ್ಲದೇ ತೆಂಕಣಯ್ಯವೊಳೆ ಪೊಳಲು ಎಂಬ ಅಭಿದಾನವೂ ಇದಕ್ಕೆ ಇದ್ದಂತೆ ತೋರುತ್ತದೆ. ಹೊಯ್ಸಳ ಮುಮ್ಮಡಿ ಬಲ್ಲಾಳನ ೧೩೩೪ರ ಶಾಸನದಲ್ಲಿ ಇದು 'ಕಂದವಂಗಲ' ಎಂದು ದಾಖಲಾಗಿದ್ದು, ಇಮ್ಮಡಿ ರಾಹುತರಾಯ ಕೇತೆಯ ದಂಡನಾಯಕನು ಆಳುತ್ತಿದ್ದಾಗ ಅದೇ ಸೋಮನಾಥ ದೇವರ ಸೇವೆಗೆಂದು ಬಮ್ಮಗೌಡನ ನಾಲ್ಕು ಮಕ್ಕಳು ತಮ್ಮ ಅಪ್ಪನ ಧರ್ಮಕ್ಕೆಂದು ದಾನ ನೀಡಿದ ಅಂಶ ಗೊತ್ತಾಗುತ್ತದೆ. ಆದರೆ ಮೇಲಿನ ಶಾಸನೋಕ್ತ ಸೋಮೇಶ್ವರ ಗುಡಿಯಿಂದು ಪೂರ್ಣ ನಾಶವಾಗಿದೆ. ಊರ ಪ್ರವೇಶ ಭಾಗದಲ್ಲಿ ಐದಾರು ವೀರಗಲ್ಲುಗಳು ರಸ್ತೆಯಂಚಲ್ಲಿವೆ. **ಪಾರ್ವತಿ ಬೆಟ್ಟ:** ಸಮೀಪದಲ್ಲಿರುವ ಪಾರ್ವತಿ ಬೆಟ್ಟಕ್ಕೆ 'ಸ್ಕಂಧಗಿರಿ' ಎಂಬ ಅಭಿದಾನವು ಇದ್ದು, ತಾರಕಾಸುರನನ್ನು ಸಂಹರಿಸಿದ ಷಣ್ಮುಖನು ತಪಸ್ಸಿಗೆ ಕುಳಿತ ತಾಣ ಇದೆಂದೂ ಅದರಿಂದಾಗಿ ಈ ಬೆಟ್ಟಕ್ಕೆ 'ಸ್ಕಂಧಗಿರಿ' ಎಂಬ ಹೆಸರು ಬಂದಿದ್ದು, ಕಂದಗಾಲ ಗ್ರಾಮ ನಾಮವು 'ಸ್ಕಂಧ' ಮೂಲದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಬೆಟ್ಟದ ಮೇಲೆ ಶಿವ–ಪಾರ್ವತಿಯರ ಪ್ರತ್ಯೇಕ ಗುಡಿಗಳಿದ್ದು, ಜೀರ್ಣೋದ್ಧಾರಗೊಂಡಿವೆ. ಶಿವನ ಗುಡಿಯೊಳಗೆ ಸಪ್ತಮಾತೃಕೆಯರು, ವೀರಭದ್ರ, ವಿಷ್ಣು, ದಕ್ಷ, ಮಹಿಷಮರ್ಧಿನಿ, ಸೂರ್ಯ ಹಾಗೂ ನಾಗರಕಲ್ಲುಗಳಿವೆ. ದೇವಾಲಯದ ಹಿಂಬದಿಯಲ್ಲಿ ಚೋಳ ಲಕ್ಷಣವಿರುವ ಶಿವನ ಶಿಲ್ಪವಿದೆ. ಅಲ್ಲೇ ಉಮಾ–ಮಹೇಶ್ವರ ಶಿಲ್ಪವೂ ಇದೆ. ಈ ಗುಡ್ಡಕ್ಕೆ ಅನತಿ ದೂರದ ಇನ್ನೊಂದು ಬೆಟ್ಟದಲ್ಲಿ ಸಿದ್ದಪ್ಪಾಜಿ ಹಾಗೂ ರಾಜಪ್ಪಾಜಿಗೆ ಸಂಬಂಧಿಸಿದ್ದೆಂದು ಹೇಳಲಾಗುವ ಗವಿಯೊಂದಿದೆ. ಬೆಟ್ಟದಲ್ಲಿ ಕೊಳವೊಂದಿದ್ದು, ಬೆಟ್ಟದ ಇನ್ನೊಂದು ಭಾಗದಲ್ಲಿ ಗುರು ರಾಮಯೋಗಿಗಳ ಗವಿಯಿದೆ.

**ಕುಂತೂರು (೪,೩೧೫):** ತಾಲೂಕು ಕೇಂದ್ರ ಕೊಳ್ಳೇಗಾಲದಿಂದ ೧೦ ಕಿ.ಮೀ. ದೂರಕ್ಕಾದಂತೆ ಕೊಳ್ಳೇಗಾಲ–ನರಸೀಪುರ ರಸ್ತೆಯಲ್ಲಿರುವ ಧಾರ್ಮಿಕ ಸ್ಥಳ. ರಸ್ತೆಯ ಬದಿಯ ಬಸವೇಶ್ವರ ಗುಡಿ ಬಳಿ ಬೃಹತ್ ಶಿಲಾಯುಗ ಸಂಸ್ಕೃತಿಯ ಹಾಳಾಗಿರುವ ಕಲ್ಗೋರಿ ಸಮಾಧಿಯೊಂದಿದೆ. ಇದರಿಂದ ಹಿಂದೆ ಇದು ಬೃಹತ್ ಶಿಲಾಯುಗ ಮಾನವರ ನೆಲೆಯಾಗಿದ್ದ ಅಂಶ ವೇದ್ಯವಾಗುತ್ತದೆ. ಗಂಗ ನೀತಿಮಾರ್ಗ ಪೇರ್ಮಾಡಿಯ ಕಾಲಕ್ಕೆ ಸೇರಿದ ಸುಮಾರು ೧೦ನೇ ಶತಮಾನದ ಶಾಸನದಲ್ಲಿ 'ಕುಂದತ್ತೂರು' ಎಂದು ಉಲ್ಲೇಖಿತಗೊಂಡಿರುವ ಈ ಊರು ೧೫೪೯ರ ಶಾಸನದಲ್ಲಿ 'ಕುಂತೂರು' ಎಂದೇ ದಾಖಲಾಗಿದೆ. ಇಲ್ಲಿಂದ ಈವರೆಗೆ ಸುಮಾರು ೧೦–೧೬ನೇ ಶತಮಾನಕ್ಕೆ ಸೇರಿದ ನಾಲ್ಕು ಶಾಸನಗಳು ವರದಿಯಾಗಿವೆ.

ಇಲ್ಲಿಯ ಮಹಾಲಿಂಗೇಶ್ವರ ದೇವಾಲಯವು ಅಲ್ಲೇ ಇರುವ ಗಂಗ ಶಾಸನದಲ್ಲಿ ಉಕ್ತವಾಗಿರುವ ಮಹಾದೇವರ (ಲಿಂಗಮಹೇಶ್ವರ) ಗುಡಿಯಾಗಿದ್ದು, 'ಕುಂದತ್ತೂರನ್ನು ಪರಬ್ಬರಸಿಯು ಆಳುತ್ತಿದ್ದಾಗ, ಈ ದೇವರ ಸೇವೆಗೆಂದು ಊರ ೧೨ ಮಂದಿ ಹಿರಿಯರು ಭೂ ದತ್ತಿ ಬಿಟ್ಟ ವಿವರವನ್ನು ಇದು ಒಳಗೊಂಡಿದೆ. ಇಲ್ಲಿಯ ಉಪ್ಪರಿಗೆ ಬಸವೇಶ್ವರ ಗುಡಿಯು ಸಾಧಾರಣ ರಚನೆಯಾಗಿದ್ದು, ಅಲ್ಲಿರುವ ಮೂರು ಶಾಸನಗಳಲ್ಲಿ ೧೫೧೨ರ ಶಾಸನ ಉಮ್ಮತ್ತೂರಿನ ಅರಸು ವೀರ ಇಮ್ಮಡಿ ಚಿಕ್ಕರಾಯ ಒಡೆಯನು, ಕುಂತೂರಿನ ವೀರಶೈವ ಮಠದ ಗುರು ಸಾಲೂರ ಶಾಂತದೇವನಿಗೆ ಕುಂತೂರನ್ನು ದೇವದಾನ ಕೊಡುಗೆಯಾಗಿ ಮಠದ ನಿರ್ವಹಣೆ ಹಾಗೂ ೫೦ ಒಡೆಯರ ದಾಸೋಹಕ್ಕೆಂದು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಲ್ಲೇ ಇರುವ ೧೫೪೯ರ ಇನ್ನೊಂದು ಶಾಸನ ಅಚ್ಯುತರಾಯನ ಆಳ್ವಿಕೆಯಲ್ಲಿ ರಾಮಭಟ್ಟಯ್ಯನೆಂಬ ಅಧಿಕಾರಿ, ಉಮತ್ತೂರು ನಾಯಕರು ಮಠಕ್ಕೆ ನೀಡಿದ್ದ ದತ್ತಿಯನ್ನು ಸಾಲೂರ ನಂಜೇದೇವರಿಗೆ ಊರ್ಜಿತಗೊಳಿಸಿದ್ದನ್ನು ತಿಳಿಸುತ್ತದೆ. ಅಲ್ಲೇ ಇರುವ ೧೫೪೪ರ ಇನ್ನೊಂದು ಶಾಸನ ಅಧಿಕಾರಿ ಕಂಪಣನು ನಂದ್ಯಾಲದ ನಾರಪ್ಪ ರಾಜಯ್ಯನು ಹದಿನಾಡ ಸೀಮೆಯನ್ನಾಳುತ್ತಿದ್ದಾಗ, ಕುಂತೂರ ಮಹಾನಂದೀಶ್ವರ ಮಠದ ಪಟ್ಟದ ಕೆಂಪನಂಜೆ ದೇವರಿಗೆ ಮೂವತ್ತು

ವರಾಹಗಳನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಕುಂತೂರಿಗೆ ಅನತಿ ದೂರದಲ್ಲಿರುವ ಪ್ರಭುದೇವರ ಬೆಟ್ಟವು ತಾಲೂಕಿನ ಗಡಿಯಾಗಿದ್ದು, ಬೆಟ್ಟದ ಮೇಲೆ ಶಿವಾಲಯ ಹಾಗೂ ಪ್ರಭುದೇವರ ಗದ್ದುಗೆಗಳಿವೆ. ಕುಂತೂರು ಮಠದ ಸಂಸ್ಥಾಪಕ ಗುರುಗಳೂ, ಹರದನಹಳ್ಳಿ ಮಠದ ದ್ವಿತೀಯ ಗುರುಗಳೂ ಆಗಿದ್ದ ಈ ಪ್ರಭುದೇವರಿಗೆ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಶಿಷ್ಯರಾಗಿದ್ದರು. ಕಾರ್ತಿಕ ಮಾಸದಲ್ಲಿ ಇಲ್ಲಿ ಜಾತ್ರೆಯಾಗುತ್ತದೆ. ಕುಂತೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆ. **ಶಂಭುಲಿಂಗೇಶ್ವರ ಬೆಟ್ಟ:** ಚಿಲಕವಾಡಿ ಬೆಟ್ಟ ಎಂದೂ ಪರಿಚಿತವಿರುವ ಇದು ಕುಂತೂರಿಗೆ ಎರಡು ಕಿ.ಮೀ. ಸಮೀಪದಲ್ಲಿರುವ ಪುಣ್ಯಕ್ಷೇತ್ರವಾಗಿದ್ದು, ವೀರಶೈವಯತಿ ನಿಜಗುಣ ಶಿವಯೋಗಿ ಹಾಗೂ ಮುಪ್ಪಿನ ಷಡಕ್ಷರಿಗಳು ಇಲ್ಲಿ ನೆಲೆಸಿದ್ದರೆಂದು ತಿಳಿದುಬರುತ್ತದೆ. ಗುಡ್ಡದ ತಪ್ಪಲಿನಲ್ಲಿ ಕೊಳವಿದೆ. ನಾಲ್ಕಾರು ಮೆಟ್ಟಿಲುಗಳನ್ನೇರಿದರೆ, ನಿಜಗುಣ ಶಿವಯೋಗಿಗಳು ತಪೋಮಗ್ನರಾಗಿದ್ದ ಗವಿಯನ್ನು ಒಳಗೊಂಡ ಕಟ್ಟಡವಿದೆ. ಬದಿಯಲ್ಲೇ ಇರುವ ಇನ್ನೊಂದು ಗವಿಯನ್ನು ಮುಪ್ಪಿನ ಷಡಕ್ಷರಿಯವರು ನೆಲೆಸಿದ್ದ ಸ್ಥಳವೆಂದು ಹೇಳಲಾಗುತ್ತದೆ. ಈ ಗವಿಗಳ ನಡುವೆ ಇರುವ ಕಿರುಮಾರ್ಗದಲ್ಲಿ ಮುಂದೆ ಸಾಗಿ ಬೆಟ್ಟದ ತುದಿಯನ್ನು ತಲುಪಬಹುದಾಗಿದ್ದು, ಅಲ್ಲಿ ಕಾವಲುಗೋಪುರವಿದೆ. ಹಿಂದೆ ರಾಜಧಾನಿ ಪಟ್ಟಣವಾಗಿದ್ದ ಗಾಳೀಪುರ, ಅದೇ ಎಂದು ದೂರದ ಸ್ಥಳವನ್ನು ಇಲ್ಲಿಂದ ತೋರಿಸಲಾಗುತ್ತದೆ. ಅಲ್ಲಿ ಪ್ರಾಚ್ಯ ಅವಶೇಷಗಳಿವೆ ಎಂದು ಹೇಳಲಾಗುತ್ತಿದ್ದು, ನಿಜಗುಣ ಶಿವಯೋಗಿಗಳು ತಮ್ಮ ಪೂರ್ವಾಶ್ರಮದಲ್ಲಿ ಅಲ್ಲಿಂದಲೇ ರಾಜ್ಯವಾಳುತ್ತಿದ್ದರೆಂದು ಐತಿಹ್ಯವಿದೆ. ಗುಡ್ಡದ ಕೆಳಗೆ ಶಂಭುಲಿಂಗ, ಸಿದ್ಧೇಶ್ವರ, ವೀರಭದ್ರ, ದುರ್ಗಾ ಮುಂತಾದ ಗುಡಿಗಳಿವೆ. ಸಿದ್ಧೇಶ್ವರ ಗುಡಿಯಲ್ಲಿ ಭೈರವ ಶಿಲ್ಪವಿದ್ದು, ತೆರೆದ ಮುಖಮಂಟಪದ ಕಂಬಗಳು ಉಬ್ಬುಶಿಲ್ಪಗಳಿಂದ ಕೂಡಿವೆ. ಸಮೀಪದ ಶಂಭುಲಿಂಗೇಶ್ವರ ಗುಡಿಯು ಇತ್ತೀಚಿನದಾಗಿದೆ. ವೀರಭದ್ರನ ಗುಡಿಯಲ್ಲಿ ವೀರಭದ್ರನ ಶಿಲ್ಪವಿದೆ. ಅನುಭವ ಮಂಟಪವನ್ನು ಭಕ್ತಾದಿಗಳು ಸಿದ್ಧೇಶ್ವರ ಗುಡಿಯ ಬಳಿ ನಿರ್ಮಿಸಿದ್ದಾರೆ. ಕೊಳ್ಳೇಗಾಲ ರಸ್ತೆಯಲ್ಲಿ ಗುರುರಾಮೇಶ್ವರ ಮಠ ಹಾಗೂ ಹಾಲಪ್ಪಸ್ವಾಮಿ ಮಹಾಲಿಂಗಸ್ವಾಮಿ ಮಠಗಳಿವೆ.

**ಕುದೇರು(೪,೨೪೮):** ತಾಲೂಕು ಕೇಂದ್ರ ಚಾಮರಾಜನಗರದಿಂದ ೨೦ ಕಿ.ಮೀ. ಹಾಗೂ ಯಳಂದೂರಿನಿಂದ ೧೦ ಕಿ.ಮೀ. ದೂರದಲ್ಲಿ ಸಂತೆಮರಳ್ಳಿ-ನಂಜನಗೂಡು ರಸ್ತೆಯಲ್ಲಿರುವ ಇದು ಗಂಗರ ಕಾಲದಷ್ಟು ಪ್ರಾಚೀನ ನೆಲೆಯಾಗಿದ್ದು, ಬಸವನಪುರದ ೯-೧೦ನೇ ಶತಮಾನದ ಶಾಸನದಲ್ಲಿ ಉಕ್ತವಾಗಿರುವ 'ಕುದಿರೂರು' ಇದೇ ಆಗಿರುವಂತೆ ತೋರುತ್ತದೆ. ಮುಂದೆ, ಈ ಊರಿನ ಉಲ್ಲೇಖ ಹೊಯ್ಸಳ ಸೋಮೇಶ್ವರನ ಕಾಲಕ್ಕೆ ಸೇರಿದ ೧೨೪೯ರ ತಮಿಳು ಶಾಸನದಲ್ಲಿ 'ಕುದಿಯೇರು' ರೂಪದಲ್ಲಿ ದೊರೆಯುತ್ತಿದ್ದು, 'ಕುದಿಹೇರು ಅಗ್ರಹಾರ' ಎಂಬ ವಿಶೇಷಣವನ್ನು ಹೊಂದಿದ್ದು, ಪ್ರಮುಖ ಅಗ್ರಹಾರವಾಗಿದ್ದ ಅಂಶ ಇತರ ಶಾಸನಗಳಿಂದ ವೇದ್ಯವಾಗುತ್ತದೆ. ಇಲ್ಲಿಯ ಆದಿನಾಥ ಬಸದಿಯು ಚಿಕ್ಕಗುಡಿಯಾಗಿದ್ದು, ಆದಿನಾಥ ಶಿಲ್ಪವನ್ನು ಹೊಂದಿದೆ. ಅಲ್ಲದೇ ಅಮೃತಶಿಲೆಯ ತೀರ್ಥಂಕರ ಮೂರ್ತಿಗಳೂ ಇಲ್ಲಿವೆ. ಗಂಗಶೈಲಿಯ ಗಿಡ್ಡನೆಯ ದುಂಡಾಕಾರದ ಕಂಬಗಳು ನವರಂಗದಲ್ಲಿವೆ.

ಊರಾಚೆ ಕೆರೆ ದಂಡೆಯ ಬಳಿಯಿರುವ ಮಲ್ಲಿಕಾರ್ಜುನ ಗುಡಿಯು ಪ್ರಾಚೀನದ್ದಾಗಿದ್ದು, ಗುಡಿಯ ಉತ್ತರ ದ್ವಾರದ ಬಳಿಯಿರುವ ೧೪೮೯ರ ಶಾಸನ, ಮೋಗೂರ ನಾಡ ಕುದಿಹೇರ ಮಲ್ಲಿನಾಥ ದೇವರ ನಂದಾದೀಪ ಸೇವೆಗೆಂದು ದೇವರಸ ಒಡೆಯನೆಂಬ ಅಧಿಕಾರಿಯು ಮಾರಬೋವನ ಒಡೆತನಕ್ಕೆ ಸೇರಿದ ಒಂದು ಮಗ್ಗದ ಸುಂಕವನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. 'ಕಾವಿ ಬಸವೇಶ್ವರ' ಎಂದೂ ಕರೆಯಲಾಗುವ ಸುಡಾವೆ ಮಣ್ಣಿನಿಂದ ಮಾಡಿದ ನಂದಿಮೂರ್ತಿಯೂ ಈ ಗುಡಿಯಲ್ಲಿದೆ. ಗುಡಿಯ ಪ್ರಾಕಾರದಲ್ಲಿ ಬಲಮುರಿ ಗಣೇಶನ ಮೂರ್ತಿ ಇದ್ದು, ಗುಡಿಯೊಳಗೆ ವಿಷ್ಣು ದುರ್ಗ, ಮುಂತಾದ ಶಿಲ್ಪಗಳನ್ನಿಡಲಾಗಿದೆ. ಊರ

ಹೊಲವೊಂದರಲ್ಲಿರುವ ೧೫೦೧ರ ಶಾಸನ, ರಾವುತಪುರವನ್ನು ಕಟ್ಟಿಸಿದ ಸೋಮರಸನಿಗೆ ಆ ಪುರದ ೩೩೦೦ ಗುಳಿ ಗುತ್ತಿಗೆ ಭೂಮಿಯ ಸಿದ್ದಾಯ ೨೦೧೨ ಗದ್ಯಾಣವನ್ನು ಸಂದಾಯ ಮಾಡಿ, ಆ ಊರಿಂದ ಬರುವ ಮಗ್ಗದೆರೆ, ಮನೆವಣಗಳ ಬಾಬ್ತನ್ನು ಸಂಗ್ರಹಿಸುವ ಹಕ್ಕಿಗೆ ಕುದಿಹೇರ ಪ್ರಭು ಪ್ರಜೆಗಳು ಒಪ್ಪಿಗೆ ನೀಡಿದ ಅಂಶವನ್ನು ದಾಖಲಿಸುತ್ತದೆ. ಮಾರಿಗುಡಿ ಮುಂದಿರುವ ೧೫೭೮ರ ಇನ್ನೊಂದು ಶಾಸನ, ಹದಿನಾಡ ರಾಮರಾಜ ನಾಯಕನಿಗೆ, ಉಮ್ಮತ್ತೂರು ಸೀಮೆಯೊಳಗಣ, ಕುದಿಹೇರು ಹಾಗೂ ಮೂಕಹಳ್ಳಿ ಗ್ರಾಮಗಳನ್ನು ಸರ್ವಮಾನ್ಯವಾಗಿ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಸುಮಾರು ೧೭ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನ, ರಕ್ತಕೊಡುಗೆಯಾಗಿ ೪೦೦ ಗುಳಿ ಗದ್ದೆಯನ್ನು ಮಾದೋಜನಿಗೆ ನೀಡಿದ್ದನ್ನು ದಾಖಲಿಸಿದೆ. ಅದೇ ಮಲ್ಲಿಕಾರ್ಜುನ ಗುಡಿ ಬಳಿಯಿರುವ ಬಲಿಪೀಠದ ಮೇಲಿನ ಸುಮಾರು ೧೮ನೇ ಶತಮಾನದ ಶಾಸನ, ತಮ್ಮಡಿ ಕೆಂಪಯ್ಯನ ಮರಯ್ಯನ ಕೋರಿಕೆಯಂತೆ ಮಲ್ಲವೊಡೆಯನು ಅದನ್ನು ಮಾಡಿಸಿದ ಅಂಶವನ್ನು ತಿಳಿಸುತ್ತದೆ.

ಉಳಿದಂತೆ ಊರಲ್ಲಿ ಗೌರಿ, ವೀರಭದ್ರ, ಉಪ್ಪರಿಗೆ ಬಸವ, ಮುಂತಾದ ಗುಡಿಗಳಿದ್ದು, ಗೌರಿ ಗುಡಿಯಲ್ಲಿ ಗೌರಿ ಹಬ್ಬವಾದ ೧೫ನೇ ದಿನಕ್ಕೆ ಮಾಡುವ 'ಗೌರಿ ವಿಸರ್ಜನಾ ಹಬ್ಬ' ಈ ಭಾಗದಲ್ಲಿ ಬಹಳ ಹೆಸರುವಾಸಿಯಾಗಿದೆ. ಇಲ್ಲಿ ಮಂಟೆಸ್ವಾಮಿಯ ಗದ್ದುಗೆಯೂ ಇದೆ. ಊರ ಪೋಲೀಸ್ ಠಾಣೆಯಲ್ಲಿರುವ ದುರ್ಗಾ ಹಾಗೂ ವಿಷ್ಣು ಮೂರ್ತಿಗಳನ್ನು ಉಮ್ಮತ್ತೂರಿನಿಂದ ತಂದಿಲ್ಲಿ ಇಡಲಾಗಿದೆ ಎಂದು ತಿಳಿದು ಬರುತ್ತದೆ.

**ಕುಲಗಾಣ(೧,೬೩೦):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಸುಮಾರು ೨೪ ಕಿ.ಮೀ. ದೂರದಲ್ಲಿರುವ ಇದು ಮಲೆಯೂರಿಗೆ ಐದು ಕಿ.ಮೀ. ಸಮೀಪದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿಂದ ಈವರೆಗೆ ಸುಮಾರು ೮–೧೩ನೇ ಶತಮಾನಕ್ಕೆ ಸೇರಿದ ೨೬ ಶಾಸನಗಳು ವರದಿಯಾಗಿವೆ. ಮಧ್ಯಕಾಲೀನ ಶಾಸನಗಳಲ್ಲಿ ಕೊಲ್ಲಣ, ಕೊಲಗಾಣ ಎಂದೇ ಉಲ್ಲೇಖಿತಗೊಂಡಿರುವ ಈ ಊರು ಗಂಗರ ಕಾಲದಷ್ಟು ಪ್ರಾಚೀನ ನೆಲೆಯಾಗಿದ್ದು, ಗಂಗ ಅರಸ ಒಂದನೆಯ ಶಿವಮಾರನ ಕಾಲಕ್ಕೆ ಸೇರಿದ ತಾಮ್ರಶಾಸನವೊಂದು ಇಲ್ಲಿ ದೊರೆತಿದೆ. ಗಂಗ ವಂಶಾವಳಿಯನ್ನು ಸವಿಸ್ತಾರವಾಗಿ ಒಳಗೊಂಡಿರುವ ಈ ಸಂಸ್ಕೃತ ಶಾಸನ, ಜೈನ ಚೈತ್ಯಾಲಯಕ್ಕೆ ಹೊಲ, ಗದ್ದೆ, ತೋಟಗಳನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಊರ ಹೊರಗೆ ಜಮೀನಿನ ನಡುವೆ ಇರುವ ಇಮ್ಮಡಿ ಬಲ್ಲಾಳನ ಕಾಲದ ೧೧೭೩ರ ಶಾಸನ, ಕೊಲಗಾಣದ ೬೦ ಪ್ರಭು ಗೌಡರು ಅಲ್ಲಿಯ (ಕೊಲ್ಲಾನ) ಜೈನಬಸದಿಯ ಸಿಂಗನ ದೇವರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ಅಲ್ಲೇ ಇರುವ ೧೨೪೧ರ ಇನ್ನೊಂದು ಶಾಸನ ಕೊಲುಗಣದ ಬಸದಿಗೆ ಕೇತೆಯ ದಂಡನಾಯಕನು ಕುಂದತ್ತೂರ ಸುಂಕವನ್ನು ದಾನ ನೀಡಿದ್ದನ್ನು ದಾಖಲಿಸಿದೆ. ಆದರಿಂದು ಯಾವುದೇ ಜೈನಬಸದಿ ಇಲ್ಲಿಲ್ಲ. ಇಲ್ಲಿಯ ಬಲವಾಸುದೇವ ಗುಡಿಯು ಕೆರೆಯ ದಂಡೆಯಲ್ಲಿರುವ ಹೊಯ್ಸಳ ದೇವಾಲಯವಾಗಿದ್ದು, ದೇವಾಲಯದ ದಕ್ಷಿಣ ಭಿತ್ತಿಯಲ್ಲಿರುವ ಹೊಯ್ಸಳ ಇಮ್ಮಡಿ ನರಸಿಂಹನ ಕಾಲದ ೧೨೧೬ರ ತಮಿಳು ಶಾಸನದಲ್ಲಿ ವಾಸುದೇವನಿಗೆ ದಾನಿಗಳು ೩೦ ಗದ್ಯಾಣ ವೆಚ್ಚದಲ್ಲಿ ಪ್ರದಕ್ಷಿಣಾ ಪಥವನ್ನು (ತಿರುನಡೈ ಮಾಳಿಗೈ) ನಿರ್ಮಿಸಿ, ದತ್ತಿ ಬಿಟ್ಟ ಉಲ್ಲೇಖವಿದೆ. ಈ ದೇವಾಲಯದ ಮಹಾದ್ವಾರ, ನವರಂಗದ ಕಂಬಗಳ ಮೇಲಿರುವ ಸುಮಾರು ೧೩ನೆಯ ಶತಮಾನಕ್ಕೆ ಸೇರಿದ ತಮಿಳು ಶಾಸನಗಳಿಂದ ಕೊಲ್ಲಣದ ವಿವಿಧ ಗೌಡ ಪ್ರಮುಖರು ಈ ಗುಡಿಯ ನಿರ್ಮಾಣದಲ್ಲಿ ಆರ್ಥಿಕ ನೆರವು ನೀಡಿದ ಅಂಶ ವೇದ್ಯವಾಗುತ್ತದೆ. ಇವುಗಳನ್ನು ಲೆಕ್ಕಾಚಾರ ಮಾಡಿದಾಗ ಈ ದೇವಾಲಯದ ನಿರ್ಮಾಣಕ್ಕೆ ೮೪ ಗದ್ಯಾಣಗಳ ಲೆಕ್ಕ ಸಿಗುತ್ತದೆ. ಇಲ್ಲಿಯ ಬಸವೇಶ್ವರ ಗುಡಿಯು ವಿಜಯನಗರ ಶೈಲಿಯಲ್ಲಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗಗಳನ್ನು ಹೊಂದಿದ್ದು, ಗುಡಿಯ ಹೊರಭಾಗದಲ್ಲಿ ಸುಡಾವೆ ಮಣ್ಣಿನ ಗಾರೆ ಶಿಲ್ಪಗಳಿವೆ.

**ಕೆಂಪನಪುರ(೪,೭೨೨) :** ಜಿಲ್ಲಾ ಕೇಂದ್ರ ಚಾಮರಾಜನಗರಕ್ಕೆ ೧೨ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಊರಿನ ತೆಂಗಿನ ತೋಟದ ಪಾಳು ಮೂಲಸ್ಥಾನೇಶ್ವರ ಗುಡಿ ಬಳಿಯಿರುವ ೯೯೧ರ ಶಾಸನ, ಚೋಳ ಒಂದನೇ ರಾಜರಾಜನ ಆಳ್ವಿಕೆಯಲ್ಲಿ, ಸೋಮರಾಶಿಭಟಾರರಿಗೆ ಕೆಲ್ಲೂರಿನ ಪೊಲೆಯ್ಯನು ಕಿರು ಹೇರೂರಲ್ಲಿ ಇರ್ಖಂಡುಗ ಗದ್ದೆ, ನೆಲ್ಲಿಗುಂದದಲ್ಲಿ ಹತ್ತು ಖಂಡುಗ ಗದ್ದೆ, ತೋಟವನ್ನು ವಿದ್ಯಾದಾನಕ್ಕೆಂದು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಊರ ಹೊಲದಲ್ಲಿರುವ ೧೦೧೮ರ ಇನ್ನೊಂದು ಶಾಸನ, ಅಯ್ಯಾವೊಳೆಯ ೧೫೦೦ ವರ್ತಕರ ಸಂಘವು, ಪದಿನಾಡಿನ ರಾಜಾಧಿರಾಜ ಚತುರ್ವೇದಿ ಮಂಗಲವಾದ ವೇಲೂರನ್ನು ಎರ್ರೈವೀರಪಟ್ಟಣವನ್ನಾಗಿ ಪರಿವರ್ತಿಸಿ, ಅಲ್ಲಿಯ ಗವರೇಶ್ವರ ದೇವರ ಸೇವೆಯೂ ಸೇರಿದಂತೆ, ಇನ್ನಿತರೆ ಕಾರ್ಯಗಳಿಗಾಗಿ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಶಾಸನೋಕ್ತ ಎರೇವೀರಪಟ್ಟಣವೇ ಇಂದಿನ ಕೆಂಪನಪುರವಾಗಿದ್ದು, ಶಾಸನೋಕ್ತ ಗವರೇಶ್ವರ ಗುಡಿ, ಇಂದಿನ ಮೂಲಸ್ಥಾನೇಶ್ವರ ದೇವಾಲಯವಾಗಿದೆ. ಈ ಗುಡಿ ಬಳಿಯಿರುವ ೧೧೬೯ರ ಶಾಸನ, ಒಂದನೇ ನರಸಿಂಹನ ಆಳ್ವಿಕೆಯಲ್ಲಿ ಹದಿನಾಡು ಸೀಮೆಯ ಕಲ್ಲೂರಿನ ಚಂದ್ರಶೇಖರ ಮಾರಾಯನು ತಾನು ಖರೀದಿಸಿದ ಭೂಮಿಯನ್ನು ಹೆಗ್ಗೊತಾರದ ಗೌಡರಿಗೆ ನೀಡಿದ್ದು, ಅದ-ಕ್ಕೆ ನೆರೆಯ ಅಮ್ಮೆಳೆ, ಹೊಮ್ಮ, ಕಣ್ಣವಂಗಲ, ಮಂಗಲ, ಎಡೆಯೂರು, ಹಾಗೂ ಎಲವಕೂರು ಗೌಡರು ಸಾಕ್ಷಿಯಾಗಿದ್ದರೆಂದು ದಾಖಲಿಸಿದೆ. ಅದೇ ದೇವಸ್ಥಾನದ ಮುಂದಿರುವ ಸುಮಾರು ೧೫ನೇ ಶತಮಾನಕ್ಕೆ ಸೇರಿದ ಶಾಸನ ವೀರಸೋಮೇಶ್ವರನ ೧೨ನೇ ಅವತಾರನೂ, ವೀರಭದ್ರನ ನಿಜಸ್ವರೂಪನೂ ಆದ ಏಕಾಂತದ ರಾಮಯ್ಯನ ವಂಶಜನೂ ಸಕಲಶಾಸ್ತ್ರಪಾರಂಗತನೂ ಆದ ಏಕಾಂತದ ಬಸವೇಶ್ವರ ದೇವರು ಕೆಲ್ಲೂರ ಮೂಲಸ್ಥಾನ ದೇವರ ಸೇವೆಗೆಂದು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ.

**ಕೆರೆಹಳ್ಳಿ(೧,೪೧೦):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೧೮ ಕಿ.ಮೀ. ದೂರದಲ್ಲಿರುವ ಇದು, ಸುಮಾರು ೧೦ನೇ ಶತಮಾನಕ್ಕೆ ಸೇರಿದ ಗಂಗಶಾಸನದಲ್ಲಿ 'ಶಿವಯ್ಯನಕೆರೆ' ಎಂದು ಉಲ್ಲೇಖಿತಗೊಂಡಿದ್ದು, ನೊಳಂಬ ಹೆಗ್ಗಡೆ ತ್ರಿಭುವನಯ್ಯನು ಶಿವಯ್ಯನಕೆರೆಯೂರ ಕೆರೆಯ ಬಿತ್ತುವಟ್ಟವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ಊರಲ್ಲಿ ಲಭಿಸಿರುವ ೯೦೬ರ ಗಂಗ ತಾಮ್ರ ಶಾಸನ, ಗಂಗವಂಶಾವಳಿಯನ್ನು ನೀಡುತ್ತಾ, ಇಮ್ಮಡಿ ನೀತಿಮಾರ್ಗ ಎರೆಗಂಗನ ಆಳ್ವಿಕೆಯಲ್ಲಿ, ಶಿವಾರ್ಯ ಎಂಬ ಗುರುವಿಗೆ, ಕೊಂಗನಾಡು ವಿಷಯದಲ್ಲಿ ಭೂದಾನ ನೀಡಿದ್ದನ್ನು ದಾಖಲಿಸುತ್ತಿದ್ದು, ಇಲ್ಲಿಯ ಶಾಸನೋಕ್ತ ಶಿವಾರ್ಯನೇ ಶಿವಯ್ಯನಕೆರೆ ಹಾಗೂ ಗ್ರಾಮಗಳ ನಿರ್ಮಾತೃ ಆಗಿದ್ದು, ಅದೇ ಇಂದಿನ ಕೆರೆಹಳ್ಳಿ ಆಗಿರುವಂತೆ ತೋರುತ್ತಿದ್ದು, ಇದನ್ನು ಪರಿಶೀಲಿಸುವ ಅಗತ್ಯವಿದೆ. ಈ ಸಂದರ್ಭದಲ್ಲಿ ಗಟ್ಟವಾಡಿ (ನಂಜನಗೂಡು ತಾ.) ಯ ೯೦೪ರ ತಾಮ್ರ ಶಾಸನದಲ್ಲಿ ಉಲ್ಲೇಖಿತಗೊಂಡಿರುವ ಶಿವಾರ್ಯನೇ ಇವನಾಗಿರುವ ಸಾಧ್ಯತೆಯನ್ನೂ ವಿವೇಚಿಸುವ ಅಗತ್ಯವಿದೆ. ಆದರೆ ೧೨೭೫ರ ಶಾಸನದಲ್ಲಿ ಊರ ಹೆಸರು ಕೆರೆಹಳ್ಳಿ ಎಂದೇ ಉಲ್ಲೇಖಿತಗೊಂಡಿದೆ. ಊರ ನವಗ್ರಹಗುಡಿ ಮುಂದಣ ಹಿರಿಯಮ್ಮನ ಕಟ್ಟೆ ಬಳಿಯಿರುವ ಸುಮಾರು ೧೩ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನ, ಉಪ್ಪಲಿಗ ಸಿಂಗನಿಗಾಗಿ, ಇದೇ ಊರಿನ ವೀರೋಜನ ಮಗ ಕಾವೋಜನು ಈ ವೀರಗಲ್ಲನ್ನು ಕೆತ್ತಿದ್ದನ್ನು ದಾಖಲಿಸುತ್ತದೆ. ಊರ ಹನುಮಂತದೇವರ ಗುಡಿ ಉತ್ತರಕ್ಕಿರುವ ಹೊಯ್ಸಳ ಮುಮ್ಮಡಿ ನರಸಿಂಹನ ೧೨೭೫ರ ಶಾಸನ, ಹದಿನಾರು ನಾಡ ಸಮಸ್ತ ಗಾವುಂಡರು ತಗಡೂರ ಮೂಲಸ್ಥಾನದೇವರಿಗೆ ಕೆರೆಹಳ್ಳಿ ಗ್ರಾಮವನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ.

**ಕೆಲ್ಲೂರು(೩,೫೨೪):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಎಂಟು ಕಿ.ಮೀ. ದೂರದಲ್ಲಿರುವ ಇದು, ಹಿಂದೆ ಪ್ರಮುಖ ಜೈನ ನೆಲೆಯಾಗಿತ್ತು. ಇಲ್ಲಿಂದ ಈವರೆಗೆ ಒಂಭತ್ತು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ

ಗ್ರಾಮದೇವತೆಗುಡಿ ಮುಂದಿರುವ ಸುಮಾರು ೧೦ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನ, ಯುದ್ಧದಲ್ಲಿ ಮಡಿದ ಕಂಬಣ್ಣನ ನೆನಪಾಗಿ ಅವನ ತಮ್ಮ ಮಾರಣ್ಣನಿಗೆ ಪೆರ್ಮಾಡಿ ಗೌಡನು ಭೂ ದಾನ ನೀಡಿದ್ದನ್ನು ದಾಖಲಿಸಿದೆ. ಇಲ್ಲಿಯ ಜೈನಬಸದಿಯ ಅಧಿಷ್ಠಾನದ ಮೇಲಿರುವ ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ತಮಿಳು ಶಾಸನಗಳಲ್ಲಿ ಇದು 'ಕೆಲ್ಲಸೂರು'ಎಂದೇ ದಾಖಲಾಗಿದ್ದು, ಕುಡುಗು ನಾಡೊಳಗಿದ್ದುದ್ದಾಗಿ ತಿಳಿದು ಬರುತ್ತದೆ. ಇಲ್ಲಿರುವ ೧೨ನೇ ಶತಮಾನಕ್ಕೆ ಸೇರಿದ ತಮಿಳು ಶಾಸನ ಈ ದೇವರಿಗೆ ಕೆಲ್ಲಸೂರ ತೆರಿಗೆಯನ್ನು ದತ್ತಿ ನೀಡಿದ್ದನ್ನು ದಾಖಲಿಸಿದರೆ, ಇದೇ ಕಾಲಕ್ಕೆ ಸೇರಿದ ಕನ್ನಡ ಶಾಸನ, ಸರ್ವ ಲೋಕಾಶ್ರಯ ಬಸದಿಗೆ ಗಾಣದೆಣ್ಣೆಯನ್ನು ದಾನ ಬಿಟ್ಟಿದ್ದ ಅಂಶವನ್ನು ತಿಳಿಸುತ್ತದೆ. ಅಲ್ಲೇ ಇರುವ ೧೨೪೯ರ ಇನ್ನೊಂದು ಶಾಸನ ಕೊಲ್ಲಗಣದ ಶಂಕರಯ್ಯ ಹಾಗೂ ಇತರರು ಬಸದಿಯ ಶ್ರೀ ಕಾರ್ಯಕ್ಕೆಂದು ತೆರಿಗೆಗಳನ್ನು ದತ್ತಿ ಬಿಟ್ಟ ಅಂಶವನ್ನು ಅರುಹುತ್ತದೆ. ಇಲ್ಲಿರುವ ಚಂದ್ರನಾಥ ಬಸದಿಯು ಗಂಗ-ಹೊಯ್ಸಳರ ಕಾಲದ ನಿರ್ಮಾಣವಾಗಿದ್ದು, ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನುಳ್ಳ ಈ ಗುಡಿಯ ಗರ್ಭಗೃಹದಲ್ಲಿರುವ, ಸುಡಾವೆ ಮಣ್ಣಿನಿಂದ ತಯಾರಿಸಿದ ಚಂದ್ರನಾಥನ ಮೂರ್ತಿಯನ್ನು ಕೃಷ್ಣರಾಜ ಒಡೆಯರು ೧೮೪೯ರ ಪ್ರತಿಷ್ಠಾಪಿಸಿದ್ದು, ಹಿಂದಿದ್ದ ಪಾರ್ಶ್ವನಾಥನ ಮೂಲ ಶಿಲ್ಪವನ್ನು ಬಸದಿಯ ಹೊರಗೆ ಕಾಣಬಹುದಾಗಿದೆ. ನವರಂಗದ ಕಂಬಗಳು ಚೋಳ ಶೈಲಿಯಲ್ಲಿದ್ದು, ಗಾತ್ರದಲ್ಲಿ ಕಿರಿದಾಗಿವೆ. ಗರ್ಭಗೃಹದ ಎಡಕ್ಕಿರುವ ಕೋಣೆಯಲ್ಲಿ ಬ್ರಹ್ಮ ಕೂಷ್ಮಾಂಡಿನಿ ಹಾಗೂ ಪದ್ಮಾವತಿಯರ ಕಿರುಶಿಲ್ಪಗಳಿವೆ. ನವರಂಗದಲ್ಲಿ ೨೦ನೆಯ ಶತಮಾನಕ್ಕೆ ಸೇರಿದ ಆಳೆತ್ತರದ ಯಕ್ಷ ಹಾಗೂ ಜ್ವಾಲಮಾಲಿನಿ ಯಕ್ಷಿಯರ ಸುಡಾವೆ ಮಣ್ಣಿನ ವರ್ಣಯುಕ್ತ ಮೂರ್ತಿಗಳಿವೆ. ಬಸದಿಯ ಸುತ್ತಮುತ್ತ ನಾಲ್ಕಾರು ನಿಶಿಧಿ ಸ್ಮಾರಕ ಶಿಲೆಗಳಿವೆ. ಇಲ್ಲಿಯ ಚೌಡೇಶ್ವರಿ ಗುಡಿಯ ಗರ್ಭಗೃಹದಲ್ಲಿ ಗಂಗರ ಕಾಲಕ್ಕೆ ಸೇರಿದ ಒಂದೂವರೆ ಮೀ. ಎತ್ತರದ ಸಪ್ತಮಾತೃಕೆಯರ ಶಿಲ್ಪಗಳಿದ್ದು, ಬಾಗಿಲವಾಡವನ್ನು ನರ್ತಿಸುತ್ತಿರುವ ಗಣಗಳಿಂದ ಅಲಂಕರಿಸಲಾಗಿದೆ. ಅಲ್ಲೇ ಇರುವ ಸುಮಾರು ೧೦ನೇ ಶತಮಾನಕ್ಕೆ ಸೇರಿದ ಸೂರ್ಯ ಶಿಲ್ಪವು ಬಹಳ ಸುಂದರವಾಗಿದ್ದು, ಅದನ್ನು ಸೋಮರಾಶಿ ಎಂಬುವನು ಪ್ರತಿಷ್ಠಾಪಿಸಿದ ಅಂಶ ಅದರ ಮೇಲಿರುವ ಶಾಸನದಿಂದ ವ್ಯಕ್ತವಾಗುತ್ತದೆ. ಚೌಡೇಶ್ವರಿ ಗುಡಿಯ ಗಂಟೆಗಳ ಮೇಲಿರುವ ೧೯ನೇ ಶತಮಾನದ ಬರಹಗಳು ದಾನಿಗಳನ್ನು ಹೆಸರಿಸಿವೆ. ಇದರ ಸನಿಹದ ಭೈರವನ ಗುಡಿಯಲ್ಲಿ ಬೃಹತ್ತಾದ ವೀರಗಲ್ಲನ್ನು ಇಡಲಾಗಿದೆ. ಚೋಳರ ಕಾಲದ ಮುಕ್ಕಾಗಿರುವ ಸೂರ್ಯ ಶಿಲ್ಪವನ್ನೂ ಅಲ್ಲೇ ನೋಡಬಹುದಾಗಿದೆ. ಸಮೀಪದಲ್ಲೇ ಇರುವ ಹುಲ್ಲೆವ್ವನ ಗುಡಿಯ ಬಳಿ ನಿಂತಿರುವ ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ಗಂಗ ಶಾಸನ ಕಾಳಗವೊಂದರಲ್ಲಿ ಗತಿಸಿದ ಚಾಮಣ್ಣನ ಬಗ್ಗೆ ಉಲ್ಲೇಖಿಸುತ್ತದೆ. ಊರಾಚೆ ಗಣಪತಿ, ಭೈರವನ ಗುಡಿಗಳಿದ್ದು, ವಿಜಯನಗರ ಕಾಲದ ಮಹಾಲಿಂಗೇಶ್ವರ ದೇವಾಲಯವೂ ಇದೆ. ಅಲ್ಲದೇ ಅಲ್ಲೇ ಇರುವ ಗದ್ದೆವ್ವನ ಗುಡಿಯಲ್ಲಿ ಸಪ್ತಮಾತೃಕಾ ಶಿಲ್ಪವಿದ್ದು, ಶಾಲೆಯ ಬಳಿಯಿರುವ ಶಿಲಾಫಲಕದಲ್ಲಿ ಖೆಡ್ಡ ಕಾರ್ಯಾಚರಣೆಯನ್ನು ಬಹಳ ಮನೋಜ್ಞವಾಗಿ ತೋರಿಸಲಾಗಿದೆ.

**ಕೆಸ್ತೂರು(೫,೭೩೯):** ತಾಲೂಕು ಕೇಂದ್ರ ಯಳಂದೂರಿನಿಂದ ೧೦ ಕಿ.ಮೀ. ದೂರದಲ್ಲಿರುವ ಕೆಸ್ತೂರು ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಮೂರು ಶಾಸನಗಳಲ್ಲಿ ಪಾಳು ಬಸವೇಶ್ವರ ಗುಡಿ ಮುಂದಿರುವ ೧೩೭೯ರ ಶಾಸನ ಬಹಳ ಹಾಳಾಗಿದ್ದರೂ ಊರ ಮಹಾಜನ, ಸಮಸ್ತ ಪ್ರಜೆಗಳು ವೀರಶೈವ ಮಠವೊಂದಕ್ಕೆ ದತ್ತಿ ನೀಡಿರುವಂತೆ ತೋರುತ್ತದೆ. ಊರಾಚೆ ಇರುವ ೧೫೫೬ರ ಶಾಸನ ಹಿರಿಯೊಡೆಯರ ಶಿಷ್ಯ ಚಿಕ್ಕಪ್ಪ ದೇವರಿಗೆ ಮಂಟಪವನ್ನು ಧರ್ಮಾರ್ಥವಾಗಿ ನಿರ್ಮಿಸಿದ್ದನ್ನು ತಿಳಿಸುತ್ತದೆ. ಸುಮಾರು ೧೬ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ದೇವಗೌಡನ ಮರಣವನ್ನು ದಾಖಲಿಸಿದೆ. ಇಲ್ಲಿಯ ಚನ್ನಕೇಶವ ದೇವಾಲಯವು ಹೊಯ್ಸಳ ಲಕ್ಷಣವುಳ್ಳ ಚತುರ್ಭುಜಧಾರಿ ಕೇಶವ ಶಿಲ್ಪವನ್ನು ಹೊಂದಿದೆ.

ಇಲ್ಲಿಯ ಗೌರಿಶಂಕರ ಗುಡಿಯು ಇತ್ತೀಚಿನದಾಗಿದ್ದು, ಅದರ ಸಂಭಾಗಣದಲ್ಲಿ ದುರ್ಗಾ, ಗಣಪತಿ, ನಂದಿ ಮುಂತಾದ ಶಿಲ್ಪಗಳಿವೆ. ಸಮೀಪದ ಬಸವೇಶ್ವರನ ಗುಡಿ ಬಳಿ ಇರುವ ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ೧೩೧೯ರ ಶಾಸನ ಮಲ್ಲಿನಾಥ ದೇವರೂ ಹಾಗೂ ವೀರಶೈವ ಮಠಗಳಿಗೆ ಮಹಾಜನರು ದತ್ತಿಬಿಟ್ಟ ಅಂಶವನ್ನು ತಿಳಿಸುತ್ತದೆ. ಸಪ್ತಮಾತೃಕಾ ಬಿಡಿ ಶಿಲ್ಪಗಳು, ವೀರಗಲ್ಲುಗಳು, ಭೈರವ ಶಿಲ್ಪಗಳು ಹಾಗೂ ಮಹಾಸತಿ ಕಲ್ಲುಗಳನ್ನು ಸಮೀಪದ ಕಾಮರಾಯನಗುಡಿಯ ಮುಂದೆ ನಿಲ್ಲಿಸಲಾಗಿದೆ. ಬರಗೆರೆ ಕೊಳದ ಬಳಿ ಇನ್ನಷ್ಟು ವೀರಗಲ್ಲು ಹಾಗೂ ಭೈರವ ಶಿಲ್ಪಗಳಿವೆ. ಇಲ್ಲಿಯ ಏಳು ಮಂಡಮ್ಮನಗುಡಿಯು ಶಿಥಿಲಾವಸ್ಥೆಯಲ್ಲಿದ್ದು, ಅಲ್ಲಿ ಗಣಪತಿ, ಸೂರ್ಯ ಹಾಗೂ ದೇವಿ ಶಿಲ್ಪಗಳನ್ನು ನೋಡಬಹುದಾಗಿದೆ.

**ಕೊಳ್ಳೇಗಾಲ(೫೨,೬೦೭):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೩೫ ಕಿ.ಮೀ. ದೂರದಲ್ಲಿದ್ದು, ಭೌಗೋಳಿಕವಾಗಿ ರಾಜ್ಯದಲ್ಲೇ ಅತ್ಯಂತ ದೊಡ್ಡದಾದ ತಾಲೂಕು ಎಂಬ ಹೆಗ್ಗಳಿಕೆಯನ್ನು ಹೊಂದಿರುವ ತಾಲೂಕಿನ ಕೇಂದ್ರವಾಗಿದೆ. ಏಕೀಕರಣ(೧೯೫೬)ಕ್ಕೆ ಮೊದಲು ನೆರೆಯ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿ ಇದು ಒಂದು ತಾಲೂಕಾಗಿತ್ತು. ಸುಮಾರು ೧೧ನೆಯ ಶತಮಾನಕ್ಕೆ ಸೇರಿದ ಚೋಳರ ಕಾಲದ ತಮಿಳು ಶಾಸನದಲ್ಲಿ 'ಕೊಳ್ಳಗರ', (ಕೊಳ್ಳ+ಅಗರ) 'ಕೊಳ್ಳಗಾರ' ಎಂದು ಉಲ್ಲೇಖಿತಗೊಂಡಿರುವ ಇದು, ಹಿಂದೊಂದು ಅಗ್ರಹಾರವಾಗಿದ್ದು, 'ತ್ರಿಭುವನ ಮಹಾದೇವಿ ಚತುರ್ವೇದಿ ಮಂಗಲ' ಎಂಬ ಅಭಿದಾನವನ್ನೂ ಹೊಂದಿತ್ತು. ಇದು ಚಾಳುಕ್ಯ ಮೂಲದ ಚೋಳ ರಾಣಿಯ ಹೆಸರಾಗಿರುವಂತೆ ತೋರುತ್ತದೆ. ಹೊಯ್ಸಳರ ಕಾಲದ ೧೨೨೪ರ ತಮಿಳು ಶಾಸನದಲ್ಲೂ ಹಾಗೆಯೇ ಉಲ್ಲೇಖಿತಗೊಂಡಿದ್ದರೂ ವಿಜಯನಗರ ಕಾಲದ ೧೫೪೯ರ ಶಾಸನದಲ್ಲಿ 'ಕೊಳೊಗಾಲ' ಎಂಬ ಉಲ್ಲೇಖ ದೊರಕುತ್ತದೆ. ಆದರೆ ಪೌರಾಣಿಕವಾಗಿ 'ಕೊಹಳ ಹಾಗೂ ಗಾಳವ' ಎಂಬ ಋಷಿದ್ವಯರ ತಪೋಭೂಮಿ ಇದಾಗಿದ್ದು, ಅದರಿಂದಾಗಿ 'ಕೊಹಳಗಾಳವ ಕ್ಷೇತ್ರ' ಎಂಬ ಹೆಸರು ಬಂದು ಮುಂದೆ ಅದೇ 'ಕೊಳ್ಳೇಗಾಲ' ಆಯಿತೆಂಬ ಐತಿಹ್ಯ, ಸ್ಥಳೀಯವಾಗಿ ರೂಢಿಯಲ್ಲಿದೆ. ಇಲ್ಲಿಂದ ಈವರೆಗೆ ಸುಮಾರು ೧೧–೧೮ನೇ ಶತಮಾನಕ್ಕೆ ಸೇರಿದ ಆರು ಶಾಸನಗಳು ವರದಿಯಾಗಿವೆ. ಈ ಪ್ರದೇಶವು ಗಂಗರ ಆಳ್ವಿಕೆಗೂ ಒಳಪಟ್ಟಿದ್ದ ಅಂಶ, ಇಲ್ಲಿಯ ಲಕ್ಷ್ಮೀನಾರಾಯಣ ಗುಡಿಯ ದಕ್ಷಿಣದಲ್ಲಿರುವ ಮರುಳೇಶ್ವರ ದೇವಾಲಯದಲ್ಲಿ ಸುಮಾರು ೧೧ನೆಯ ಶತಮಾನಕ್ಕೆ ಸೇರಿದ ಚೋಳ ಒಂದನೇ ರಾಜರಾಜನ ತಮಿಳು ಶಾಸನದಿಂದ ಗೊತ್ತಾಗುತ್ತಿದ್ದು, ಅದಾಗಲೇ 'ಕೊಳ್ಳಗಾರ' ದಲ್ಲಿದ್ದ ಮಣಲೀಶ್ವರ ದೇವರಿಗೆ ಅಯ್ಯಾವೊಳೆ ೫೦೦ ವರ್ತಕ ಸಂಘದವರು ಹಳ್ಳಿಗಳನ್ನು ದತ್ತಿ ಬಿಟ್ಟ ಅಂಶ ಆ ಶಾಸನದಲ್ಲಿದೆ. ಗರ್ಭಗೃಹ, ಅರ್ಧಮಂಟಪ, ಹಾಗೂ ವಿಶಾಲವಾದ ನವರಂಗಗಳನ್ನುಳ್ಳ ಈ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಕಂಬಗಳು ಕಿರಿದಾಗಿದ್ದು, ಅಲಂಕಾರಿಕ ಕಂಬಗಳನ್ನು ಅದರ ಭಿತ್ತಿಯಲ್ಲಿ ಕಾಣಬಹುದಾಗಿದೆ. ನವರಂಗದಲ್ಲಿ ಆದಿಶಂಕರ, ಗಣಪತಿ, ಮಹಿಷಮರ್ಧಿನಿ, ನಾರಾಯಣ, ವಾರಾಹಿ, ಮುಂತಾದ ಶಿಲ್ಪಗಳಿವೆ. ಇದಕ್ಕೆ ವಿಜಯನಗರ ಕಾಲದ ಮುಖಮಂಟಪವಿದ್ದು, ಎದುರಲ್ಲಿ ಚಂದ್ರಪುಷ್ಕರಣಿಯಿದೆ. ಇದು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು, ಉತ್ತರದಿಂದ ಪ್ರವೇಶಕ್ಕೆ ಅವಕಾಶ ಮಾಡಲಾಗಿದ್ದು, ನಗರಖಾನೆಯ ಮೇಲೆ ಸುಡಾವೆ ಮಣ್ಣಿನಿಂದ ಮಾಡಿದ ನಂದಿಯ ಮೂರ್ತಿಯಿದೆ. ಈ ಗುಡಿಯ ಬದಿಯಲ್ಲೇ ದಕ್ಷಿಣ ಮೂರ್ತಿ, ಗಣಪತಿ, ಕಾಳಭೈರವರ ಕಿರುಗುಡಿಗಳಿವೆ. ಪ್ರಧಾನ ಗುಡಿಯ ಎಡಕ್ಕೆ ಮೀನಾಕ್ಷಮ್ಮನವರ ಸನ್ನಿಧಿ ಇದ್ದು, ಗರ್ಭಗೃಹಕ್ಕೆ ವೇಸರ ಶೈಲಿಯ ಕಿರು ಶಿಖರವಿದೆ. ಗರ್ಭಗುಡಿಯಲ್ಲಿರುವ ದೇವಿ ಶಿಲ್ಪವು ಚೋಳ ಲಕ್ಷಣದಿಂದ ಕೂಡಿದ್ದು, ನವರಂಗದ ಮುಂಭಾಗದಲ್ಲಿ ತೆರೆದ ಮುಖಮಂಟಪವಿದೆ. ಎದುರಲ್ಲೇ ಸೂರ್ಯನ ಶಿಲ್ಪ ಹಾಗೂ ಧ್ವಜಸ್ತಂಭಗಳಿವೆ. ಅಮ್ಮನವರ ಗುಡಿಯ ಹಿಂದಿನ ಷಣ್ಮುಖ ಗುಡಿಯಲ್ಲಿ ನವಿಲ ಮೇಲೆ ಕುಳಿತಿರುವ ಕಾರ್ತಿಕೇಯನ ಶಿಲ್ಪವಿದೆ. ಈ ಗುಡಿಯ ಬದಿಯಲ್ಲೇ ಇತ್ತೀಚಿನದಾದ ಗಾಯತ್ರಿ ದೇವಿಯ ಗುಡಿಯಿದೆ. ಪ್ರತೀ ವರ್ಷ ಮೀನಮಾಸದಲ್ಲಿ ಈ ದೇವರ ರಥೋತ್ಸವ, ಜಾತ್ರಾದಿಗಳು ವಿಜೃಂಭಣೆಯಿಂದ ಜರುಗುತ್ತದೆ.

ಇಲ್ಲಿಯ ನಾರಾಯಣಸ್ವಾಮಿ ಗುಡಿ ರಸ್ತೆಯಲ್ಲಿರುವ ಲಕ್ಷ್ಮೀನಾರಾಯಣ ಗುಡಿಯು ಮೂಲತಃ ಚೋಳರ ಕಾಲದ ರಚನೆಯಾಗಿದ್ದು, ನಂತರದಲ್ಲಿ ಸಾಕಷ್ಟು ಸೇರ್ಪಡೆಗಳಾಗಿವೆ. ಇಲ್ಲಿರುವ ಎರಡು ತಮಿಳು ಶಾಸನಗಳು ೧೨ನೇ ಶತಮಾನಕ್ಕೆ ಸೇರಿದ್ದು, 'ಕೊಳ್ಳಗರಾ' ದಲ್ಲಿ ಅದಾಗಲೇ ಇದ್ದ ವಿರ್ರಿರುಂದ ಪೆರುಮಾಳ (ನಾರಾಯಣ) ದೇವರ ನಂದಾದೀಪಕ್ಕೆಂದು ಪುವ್ವೆಲೂರು ಉದಯನು ದತ್ತಿ ಬಿಟ್ಟಿದ್ದನ್ನು ಒಂದು ಶಾಸನ ದಾಖಲಿಸಿದರೆ, ೧೨೦೧ರ ಇನ್ನೊಂದು ಶಾಸನ, ಇಮ್ಮಡಿ ಬಲ್ಲಾಳನು ಅದೇ ದೇವರಿಗೆ ಇನ್ನಷ್ಟು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲೇ ಇರುವ ೧೨೮೪ರ ಶಾಸನ, ಹೊಯ್ಸಳ ನರಸಿಂಹನ ಆಳ್ವಿಕೆಯಲ್ಲಿ ಕೊಳ್ಳಗರಾದ ತಿರುಮೇರ್ ಕೊಯಿಲಿನ ವಂಡುವರೈ-ಪೆರುಮಾಳೆ ದೇವರ ಸೇವೆಗೆಂದು ೧೦೦೦ ಕುಳಿ ಗದ್ದೆಯನ್ನು ಅಗ್ರಹಾರದ ಮಹಾಜನಗಳು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಗರ್ಭಗೃಹದಲ್ಲಿ ಶ್ರೀದೇವಿ-ಭೂದೇವಿಯರನ್ನೊಳಗೊಂಡ ಸ್ಥಾನಕ ಭಂಗಿಯ ನಾರಾಯಣನ ಸುಂದರ ಶಿಲ್ಪವಿದ್ದು, ನವರಂಗದ ಕಂಬಗಳು ಚೋಳ ಶೈಲಿಯಲ್ಲಿದ್ದು, ಈ ಗುಡಿಯೂ ಜೀರ್ಣೋದ್ಧಾರಗೊಂಡಿದೆ. ಪ್ರತ್ಯೇಕ ಕೋಣೆಯೊಂದರಲ್ಲಿ, ರಾಮಾನುಜ, ದೀಕ್ಷಿತರು, ಕಾಳಿಂಗಕೃಷ್ಣ, ಆಳ್ವಾರ ಮುಂತಾದ ಕಿರುಶಿಲ್ಪಗಳಿವೆ. ಈ ಗುಡಿಗೆ ತೆರೆದ ಮುಖಮಂಟಪವಿದ್ದು, ಎದುರಲ್ಲೇ ಧ್ವಜಸ್ತಂಭವಿದೆ. ದೇವಾಲಯದ ಪ್ರಾಕಾರದ ಪ್ರವೇಶದ್ವಾರಕ್ಕೆ ನಗರಖಾನೆ ಇದೆ. ಈ ಗುಡಿಯ ಬದಿಯಲ್ಲೇ ಸೌಮ್ಯನಾಯಕಿ ಅಮ್ಮನವರ ಸನ್ನಿಧಾನವಿದೆ. ಒಂದೇ ಸಾಲಿನಲ್ಲಿರುವ ಮೂರು ಗುಡಿಗಳಲ್ಲಿ ಮಧ್ಯದರಲ್ಲಿ ಸೌಮ್ಯನಾಯಕಿಯ ಶಿಲ್ಪವಿದ್ದರೆ, ಉಳಿದೆರಡರಲ್ಲಿ ಉತ್ಸವ ಮೂರ್ತಿ ಹಾಗೂ ಆಳ್ವಾರರ ಶಿಲ್ಪಗಳಿವೆ. ಈ ದೇವಾಲಯಕ್ಕಿರುವ ತೆರೆದ ಮುಖಮಂಟಪದಲ್ಲಿ ವಿಜಯನಗರ ಕಾಲದ ಎರಡು ಆಕರ್ಷಕ ಸ್ತಂಭಗಳಿವೆ. ಈ ದೇವಾಲಯದ ಭಿತ್ತಿಯಲ್ಲಿರುವ ೧೨೦೧ರ ಶಾಸನ, ತ್ರಿಭುವನ ಮಹಾದೇವಿ ಮಂಗಲದ ವಿರ್ರಿರುಂದ ಪೆರುಮಾಳೆ ದೇವರಮಠಕ್ಕೆ ನೆರೆಯ ಮುಡಿಗೊಂಡ ಚೋಳಪುರದ ಭಕ್ತನೊಬ್ಬ ಭೂದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಈ ಗುಡಿಯ ಮುಂದಿರುವ ೧೫೩೯ರ ಶಾಸನ, ಸದಾಶಿವರಾಯನು ಹದಿನಾಡು ರಾಜ್ಯದ ಸಾಮಂತನಾದ ರಾಮರಾಜನಾಯಕನಿಗೆ ಶಿವನಸಮುದ್ರ-ಕೊಳ್ಳೆಗಾಲ ಸ್ಥಳದ ಹಿರಿಯೂರು ಗ್ರಾಮವನ್ನು ಪಲ್ಲಕ್ಕಿ ಉಂಬಳಿಯಾಗಿ ನೀಡಿದ್ದನ್ನು ದಾಖಲಿಸುತ್ತದೆ. ಈ ಗುಡಿಯ ಮುಂದಣ ಧ್ವಜಸ್ತಂಭದ ಮೇಲಿರುವ ೧೭೭೨ರ ಶಾಸನ ವೈಶ್ಯ ಅನ್ನದಾನ ಶೆಟ್ಟಿಯು ಆ ಕಂಬವನ್ನು ಮಾಡಿಸಿದ್ದನ್ನು ದಾಖಲಿಸಿದೆ. ಈ ದೇವರ ರಥವು ಬೃಹತ್ತಿದ್ದು, ಆಕರ್ಷಕವೂ ಆಸಕ್ತವೂ ಆದ ಧಾರ್ಮಿಕ ಸಾಮಾಜಿಕ ವಿಷಯಗಳೊಂದಿಗೆ ಮಿಥುನ ಶಿಲ್ಪಗಳ ಕೆತ್ತನೆಯನ್ನೂ ಹೊಂದಿದೆ. ಈ ದೇವರ ರಥೋತ್ಸವವು ಮಾಘ ಪೂರ್ಣಿಮೆಯಂದು ವಿಜೃಂಭಣೆಯಿಂದ ಜರುಗುತ್ತದೆ. ಈ ಗುಡಿಯ ಸಮೀಪದಲ್ಲೇ ವ್ಯಾಸತೀರ್ಥರು ಪ್ರತಿಷ್ಠಾಪಿಸಿದ್ದೆಂದು ಹೇಳಲಾಗುವ ಪ್ರಸನ್ನ ವೀರಾಂಜನೇಯನ ಗುಡಿಯಿದೆ. ಈ ಮಾರ್ಗವಾಗಿ ಗಂಗವಾಡಿಗೆ ತೆರಳುತ್ತಿದ್ದ ರಾಮಾನುಜರು ಇಲ್ಲಿ ಒಂದು ವಾರ ತಂಗಿದ್ದಾಗ ಅವರಿಗೆ ಕೊಂಗಪೆರಟಿ ಎಂಬ ಸ್ಥಳೀಯ ಮಹಿಳೆ ನೆರವು ನೀಡಿದಳೆಂದು ಹೇಳಲಾಗುತ್ತದೆ.

ಇಲ್ಲಿಯ ಪೇಟೆ ಸಮೀಪದ ಕಾವೇರಿ ರಸ್ತೆಯ ಮೂಲೆಯಲ್ಲಿರುವ ಪದ್ಮಾಸೀನ ತೀರ್ಥಂಕರ ಶಿಲ್ಪವು ಮುಕ್ಕಾಗಿದ್ದರೂ ಆಕರ್ಷಕವಾಗಿದೆ. ಹಿಂದೆ ಪ್ರಾಚೀನ ಬಸದಿಯಿದ್ದ ಈ ಸ್ಥಳದ ಮುಂದಿರುವ ದಿಬ್ಬದಲ್ಲಿ ಜೈನಾವಶೇಷಗಳು ಹುದುಗಿರಬಹುದೆಂದು ಈಗಾಗಲೇ ವಿದ್ವಾಂಸರು ಅನುಮಾನಿಸಿದ್ದಾರೆ.

ಇಲ್ಲಿಯ ಚಿಕ್ಕಪರಿವಾರದವರ ಬೀದಿಯಲ್ಲಿರುವ ಚಾವಡಿ ಕಟ್ಟಡದಲ್ಲಿ ೧೯ನೆಯ ಶತಮಾನಕ್ಕೆ ಸೇರಿದ ಭಿತ್ತಿ ವರ್ಣಚಿತ್ರಗಳಿದ್ದು, ಟಿಪ್ಪು, ಪೂರ್ಣಯ್ಯ, ಮುಮ್ಮಡಿಕೃಷ್ಣರಾಜ ಒಡೆಯರ ಮೆರವಣಿಗೆ ದೃಶ್ಯ, ದಶಾವತಾರ ದೃಶ್ಯಾವಳಿ, ರಾಮ-ರಾವಣ ಯುದ್ಧ, ಕರ್ಣಾರ್ಜುನ ಕಾಳಗ, ಪಾರ್ವತಿ ಕಲ್ಯಾಣ, ಮೈಸೂರು ಇತಿಹಾಸಕ್ಕೆ ಸಂಬಂಧಿಸಿದ ದೃಶ್ಯ ಮುಂತಾದವನ್ನು ಇಲ್ಲಿ ಚಿತ್ರಿಸಲಾಗಿತ್ತೆಂದು ತಿಳಿದು ಬರುತ್ತದೆ. ಆದರೆ

ಅವಿಂದು ಸಂಪೂರ್ಣ ನಶಿಸಿಹೋಗಿವೆ. ಇದರ ಬದಿಯಲ್ಲೇ ಇರುವ ದಂಡಿನ ದಾರಿಯ ಬಳಿ ಕೊಳ, ಹಾಗೂ ಕೋಟೆಯ ಅವಶೇಷಗಳಿವೆ. ಸಮೀಪದಲ್ಲೇ ಮಾರಮ್ಮ ಹಾಗೂ ಮಂಟೇಸ್ವಾಮಿಯ ಗುಡಿಗಳಿವೆ. ಅಲ್ಲೇ ರಾವಳೇಶ್ವರ ಗುಡಿಯೂ ಇದೆ. ದೇವಾಂಗರ ಬೀದಿಯಲ್ಲಿರುವ ದೇವಾಂಗ ಸಮಾಜದ ಚೌಡೇಶ್ವರಿ ದೇವಾಲಯವು ವಿಶಾಲವಾಗಿದ್ದು, ಸಾಕಷ್ಟು ಜೀರ್ಣೋದ್ಧಾರಗೊಂಡಿದ್ದು, ಅಲ್ಲೇ ೧೭೪೩ರ ಶಾಸನವೂ ಇದೆ. ಗ್ರಾಮದೇವತೆಯಾದ 'ಉಚ್ಚಾಲಮ್ಮನ ದೇವಾಲಯವೂ ಇಲ್ಲಿದೆ.

ಪಟ್ಟಣದ ಪೂರ್ವಕ್ಕೆ ಪರಿವೀಕ್ಷಣಾ ಮಂದಿರದ ಸಮೀಪದಲ್ಲಿರುವ ಗುಡ್ಡವನ್ನು ಮರಡಿಗುಡ್ಡ ಎಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಗುಡ್ಡದ ಮೇಲೆ ಇತ್ತೀಚಿನ ಈಶ್ವರ ಗುಡಿಯಿದ್ದು, ಮಲೆಮಹದೇಶ್ವರರು ತಪಸ್ಸು ಮಾಡಿದ ಸ್ಥಳವೆಂದು ಹೇಳಲಾಗುತ್ತದೆ. ಈ ಗುಡ್ಡದ ಮೇಲಿಂದ ಕೊಳ್ಳೇಗಾಲ ಪಟ್ಟಣ ಪರಿಸರದ ಸಮಗ್ರ ದೃಶ್ಯವನ್ನು ವೀಕ್ಷಿಸಬಹುದಾಗಿದೆ.

ಪಟ್ಟಣದಲ್ಲಿರುವ ನಾಲ್ಕಾರು ಮಸೀದಿಗಳಲ್ಲಿ ಬಡಾ ಮಸೀದಿ, (ಪೇಟೆಯಲ್ಲಿ), ಛೋಟ ಮಸೀದಿ (ಮಾರುಕಟ್ಟೆ ಚೌಕ) ಹಾಗೂ ಅಮೀನಾ ಮಸೀದಿ (ಈದ್ಗಾ ಮೈದಾನ ಬಳಿ) ಉಲ್ಲೇಖಾರ್ಹವಾಗಿದ್ದು, ದೊಡ್ಡ ಮಸೀದಿಯು ಟಿಪ್ಪು ಕಾಲದ್ದಾಗಿದ್ದು, ಮಸೀದಿಗೆ ಸೇರಿದಂತೆ ಇರುವ ಅರಾಬಿಕ್ ಶಾಲೆಯು ಕಾರ್ಯನಿರ್ವಹಿಸುತ್ತಿದೆ. ಅಲ್ಲದೇ ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟಂಟ್ ಪಂಥಕ್ಕೆ ಸೇರಿದ ಪ್ರತ್ಯೇಕ ಚರ್ಚುಗಳೂ ಇಲ್ಲಿವೆ. ಕೊಳ್ಳೇಗಾಲದ ರೇಷ್ಮೆ ಮಾರುಕಟ್ಟೆಗೆ ಒಳ್ಳೆಯ ಹೆಸರಿದ್ದು, ರೇಷ್ಮೆ ಬಟ್ಟೆಗಳಿಗೆ ಈ ಊರು ಪ್ರಸಿದ್ಧವಾಗಿದೆ. **ಬಸ್ತಿಪುರ:** ಇಂದು ಕೊಳ್ಳೇಗಾಲ ಪಟ್ಟಣದ ಭಾಗವೇ ಆಗಿರುವ ಬಸ್ತೀಪುರವು ಜೈನಮುನಿ ಪೂಜ್ಯಪಾದನ ಕಾರ್ಯಕ್ಷೇತ್ರವಾಗಿದ್ದು, ಅದರಿಂದಾಗಿ ಮಹತ್ವ ಪಡೆದಿದೆ. ಇಲ್ಲಿಯ ಬಂಡೆಯೊಂದರ ಮೇಲೆ ಸುಮಾರು ೭–೮ನೇ ಶತಮಾನದ ಲಿಪಿ ಲಕ್ಷಣವಿರುವ ಶಾಸನ ಜೈನಗುರು ಪುಷ್ಪನಂದಿಯ ನಿರ್ವಾಣವನ್ನು ದಾಖಲಿಸಿದ್ದು, ಆ ಶಾಸನವಿಂದು ನಶಿಸಿಹೋಗಿದೆ. ಅಲ್ಲೇ ಇದ್ದ ಇದೇ ಕಾಲದ ಇನ್ನೊಂದು ಶಾಸನ ತನ್ನ ಗುರು ಪುಷ್ಪನಂದಿಯ ನಿಶಿಧಿಗೆಯ ಬಳಿ ತಿಂಗಳೊಪ್ಪತ್ತು ಸಲ್ಲೇಖನ ವ್ರತ ಕೈಗೊಂಡ ಮಡಿದ ಶಿಷ್ಯ ಬಲದೇವನು ಪುರಿ ಮಂಡಲದಿಂದ ಬಂದವನೆಂದೂ ಹೇಳುತ್ತದೆ. ಇಲ್ಲಿದ್ದ ಜೈನ ಪುರಾವಸ್ತುಗಳನ್ನು ಮದ್ರಾಸ್ ವಸ್ತು ಸಂಗ್ರಹಾಲಯಕ್ಕೆ ಸಾಗಿಸಲಾಗಿದೆ ಎಂದು ತಿಳಿದು ಬರುತ್ತದೆ. ಹಿಂದೆ ಜೈನಶಾಸನ ಹಾಗೂ ಪೂಜ್ಯಪಾದನ ಪಾದುಕಾ ಚಿಹ್ನೆ ಇದ್ದ ಬಂಡೆಗಲ್ಲುಗಳು ಇಂದು ಸಂಪೂರ್ಣ ನಾಶವಾಗಿದ್ದು, ಜೈನಾವಶೇಷಗಳೇನು ಉಳಿದು ಬಂದಿಲ್ಲ. **ಮುಡಿಗೊಂಡ:** ಇಂದು ಕೊಳ್ಳೇಗಾಲ ಪಟ್ಟಣದ ಭಾಗವೇ ಆಗಿರುವ ಮುಡಿಗೊಂಡವು ಹಿಂದೊಂದು ಅಗ್ರಹಾರವಾಗಿದ್ದು, 'ಕುಮಾರ ಹಿರಿಯ ವಣಿಕ ಪಟ್ಟಣ' 'ದೇಶಿ ಉಯಕ್ಕೊಣ ಪಟ್ಟಣ' ಎಂದು ಪರಿಚಿತವಿದ್ದು, 'ಮುಂಡಿಗೊಂಡ ಚೋಳಪುರ' ಎಂದೇ ಖ್ಯಾತಿ ಪಡೆದಿದ್ದ ಅಂಶ ತಮಿಳು ಶಾಸನಗಳಿಂದ ಗೊತ್ತಾಗುತ್ತದೆ. ಇಲ್ಲಿಂದ ಈವರೆಗೆ ೨೮ ಶಾಸನಗಳು ವರದಿಯಾಗಿದ್ದು, ಹೆಚ್ಚಿನವು ತಮಿಳಿನಲ್ಲಿವೆ. ಇಲ್ಲಿಯ ಲಕ್ಷ್ಮೀನಾರಾಯಣ (ಶಾಸನೋಕ್ತ ದೇಶಿಪೆರುಮಾಳ್) ಗುಡಿಯು ಮೂಲತಃ ಚೋಳರ ಕಾಲದ ರಚನೆಯಾಗಿದ್ದು, ದೇವಾಲಯದ ಕಂಬಗಳು ಇದನ್ನು ಸ್ಪಷ್ಟಪಡಿಸುತ್ತವೆ. ಈ ಗುಡಿ ಪರಿಸರದಲ್ಲಿರುವ ೧೧೨೦, ೧೨೩೭, ೧೨೩೮, ೧೨೫೦ ೧೩೨೩ ಹಾಗೂ ೧೩೮೧ರ ಶಾಸನಗಳು ಈ ದೇವರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿವೆ. ಇಲ್ಲಿರುವ ಅನೇಕ ಚೋಳ–ಹೊಯ್ಸಳ ಶಾಸನಗಳಲ್ಲಿ ಒಂದನೆಯ ಬಲ್ಲಾಳನ ಕಾಲಕ್ಕೆ ಸೇರಿದ ೧೧೯೯ರ ತಮಿಳು ಶಾಸನ ಮುಡಿಗೊಂಡದ ದೇಶಿ ಪೆರುಮಾಳ ದೇವರಿಗೆ ಭೂದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ಗರ್ಭಗೃಹದಲ್ಲಿ ಹೊಯ್ಸಳರ ಕಾಲದ ವಿಷ್ಣು ಮೂರ್ತಿಯಿದ್ದು, ಜನಾರ್ದನ, ವೇಣುಗೋಪಾಲ ಹಾಗೂ ನಮ್ಮಾಳ್ವಾರರ ಶಿಲ್ಪಗಳೂ ಇಲ್ಲಿವೆ. ಈ ಗುಡಿಯ ಬದಿಯಲ್ಲೇ ಲಕ್ಷ್ಮೀಗುಡಿಯೂ ಇದೆ. ಇಲ್ಲಿಯ ಶಿವಾಲಯದ ಕುಮುದಪಟ್ಟಿಯ ಮೇಲಿರುವ ಸುಮಾರು ೧೧ನೇ ಶತಮಾನದ ತಮಿಳು ಶಾಸನ ವರ್ತಕ

ಶ್ರೇಣಿಯವರು ವಿಷ್ಣು ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸಿದರೆ, ಚೋಳ ಒಂದನೇ ಕುಲೋತ್ತುಂಗನ ಶಾಸನದ ವಿವರ ಹಾಳಾಗಿ, ಅಲ್ಲೇ ಇರುವ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನದಲ್ಲಿ ಬಿರುದಾವಳಿಗಳಷ್ಟೇ ಉಳಿದಿದೆ. ಗ್ರಾಮದ ನಡುವೆ ಇರುವ ಮಾರಮ್ಮನ ಗುಡಿ ಬಳಿ ಹೊಯ್ಸಳರ ಕಾಲದ ೧೨೧೧, ೧೨೩೮, ೧೨೮೫, ೧೨೬೮ರ ಶಾಸನಗಳಿವೆ. ಊರಾಚೆ ಕೊಳ್ಳೆಗಾಲ ರಸ್ತೆಯಲ್ಲಿ ಮುಳ್ಳಾಚ್ಚಮನ ಗುಡಿ ಮುಂದಿರುವ ೧೧೯೦ರ ಶಾಸನ, ಮುಡಿಗೊಂಡ ಚೋಳಪುರದ ಮುಳ್ನಾಚ್ಚಿ ಕೊಯಿಲಿನ ಉತ್ತರಕ್ಕಿದ್ದ ೩೦೦ ಕುಳಿ ಭೂಮಿಯನ್ನು ದೇವಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ಬಸವೇಶ್ವರ ಗುಡಿ ಬಳಿಯಿರುವ ಆರು ಶಾಸನಗಳಲ್ಲಿ ಚೋಳೇಶ್ವರ ಗುಡಿ, ಚಂದ್ರಪ್ರಭ ಸ್ವಾಮಿ ನಗರ ಜಿನಾಲಯ, ಹಾಗೂ ಮಾಸ್ತಿ ಸ್ಮಾರಕಗಳ ಉಲ್ಲೇಖವಿದೆ. ಊರಾಚೆ ಹೊರವಲಯದಲ್ಲಿ ಗಣೇಶನ ಗುಡಿಯಿದ್ದು, ಸಮೀಪದ ಅಶ್ವತ್ಥ ಕಟ್ಟೆಯ ಬುಡದಲ್ಲಿ ಚೋಳ ಲಕ್ಷಣವುಳ್ಳ ಸೂರ್ಯಶಿಲ್ಪವೊಂದಿದೆ.

**ಕೋಟೆಕೆರೆ(೪೧೯೬):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ೧೩ ಕಿ.ಮೀ. ದೂರದಲ್ಲಿರುವ ಇದು ೧೫೪೮ರ ಶಾಸನದಲ್ಲಿ 'ಕೋಟೆಯಕೆರೆ' ಎಂದೇ ದಾಖಲಾಗಿದ್ದು, ತೆರಕಣಾಂಬಿ ಸೀಮೆಯಲ್ಲಿದ್ದ ಅಂಶವೂ ವೇದ್ಯವಾಗುತ್ತದೆ. ಆದರೆ ಊರ ಪ್ರವೇಶದಲ್ಲೇ ಇರುವ ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನ ಪೊಸವೂರಿನ ಗೋವುಗಳ ಸಂರಕ್ಷಣೆಗೆ ಮುಂದಾದ ಕೊಳ್ಳಿಯಣ್ಣನ ವೀರಮರಣದ ಕುರುಹಾಗಿ ಅವನ ಮಗ ಸಾಂತಣ್ಣನು ಈ ಕಲ್ಲನ್ನು ನಿಲ್ಲಿಸಿದ ಅಂಶವನ್ನು ದಾಖಲಿಸಿದೆ. ಪೊಸವೂರು ಕೋಟೆಕೆರೆ' ಯ ಪ್ರಾಚೀನ ಹೆಸರಾಗಿರುವಂತೆ ತೋರುತ್ತದೆ. ಇಲ್ಲಿರುವ ಕಂಬದದೇವರು, ರಾಮಲಿಂಗೇಶ್ವರ, ವೇಣುಗೋಪಾಲ, ಚಂದ್ರಮೌಳೇಶ್ವರ ಹಾಗೂ ಗಣಪತಿ ಗುಡಿಗಳಲ್ಲಿ ರಾಮಲಿಂಗೇಶ್ವರ ದೇವಾಲಯವು ವಿಜಯನಗರ ಕಾಲದ್ದಾಗಿದ್ದು, ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದ್ದು, ನವರಂಗದಲ್ಲಿ ವಿಜಯನಗರಕಾಲದ ಕಂಬಗಳಿವೆ.

ಇಲ್ಲಿಯ ವೇಣುಗೋಪಾಲ ದೇವಾಲಯವು ವಿಜಯನಗರ ಕಾಲದ ರಚನೆಯಾಗಿದ್ದು, ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದೆ. ಪ್ರಧಾನ ಗರ್ಭಗೃಹದಲ್ಲಿ ವೇಣುಗೋಪಾಲನ ಮೂರ್ತಿಯಿದ್ದು, ಇಕ್ಕೆಲದವುಗಳಲ್ಲಿ ದೇವಿ ಹಾಗೂ ಆಳ್ವಾರರ ಶಿಲ್ಪಗಳಿವೆ. ನವರಂಗದ ಕಂಬಗಳು ವಿಜಯನಗರ ಕಾಲದ ಸಾಂಪ್ರದಾಯಿಕ ಶೈಲಿಯಲ್ಲಿದ್ದು, ಆಕರ್ಷಕ ಉಬ್ಬುಶಿಲ್ಪ ಕೆತ್ತನೆಯನ್ನು ಹೊಂದಿವೆ. ಅರ್ಧಮಂಟಪದ ಮರದ ಬಾಗಿಲನ್ನು ವಿಷ್ಣುಲೀಲಾ ಕೆತ್ತನೆಯಿಂದ ಅಲಂಕರಿಸಲಾಗಿದೆ. ಕೆರೆ ದಂಡೆಯ ಮೇಲಿರುವ ಕಂಬದ ದೇವರ ಗುಡಿಯಲ್ಲಿ ನರಸಿಂಹ ದೇವರ ಪಾದುಕಾ ಕೆತ್ತನೆ ಫಲಕವನ್ನು ಆರಾಧಿಲಾಗುತ್ತಿದ್ದು, ಗುರುಪೀಠದ ಮೇಲೆ ಶ್ರೀವೈಷ್ಣವ ಧರ್ಮಕ್ಕೆ ಸೇರಿದ ಉಬ್ಬು ಕೆತ್ತನೆಗಳಿವೆ. ಹಿರಿಕಾಟಿ(೨,೨೧೩): ಕೋಟೆಕೆರೆಗೆ ಒಂಭತ್ತು ಕಿ.ಮೀ. ದೂರದಲ್ಲಿರುವ ಈ ಊರ ಬಳಿಯ ಬೆಟ್ಟದ ಮೇಲೆ ಪುಟ್ಟದೊಂದು ಶಿವಾಲಯವಿದೆ. ಆ ಗುಡಿಯ ಬದಿಯಲ್ಲಿ ಗಂಗರ ಕಾಲದ ಒಂದು ಶಾಸನ ಹಾಗೂ ವಿಷ್ಣು ಮೂರ್ತಿಗಳಿವೆ. ಊರ ಉತ್ತರಕ್ಕೆ ಸರ್ಕಾರಿ ಜಮೀನಿನಲ್ಲಿರುವ ೧೫೩೩ರ ಶಾಸನ, ತಗಡೂರು ಸ್ಥಳದ ಚಿಕ್ಕಮಲೆಯ ವೊಡೆಯ ಹಿರಿಯ ಕಾಟಿಯ ಮಲ್ಲಯ್ಯ ದೇವರಿಗೆ ಗ್ರಾಮವನ್ನು ಗುತ್ತಿಗೆಯಾಗಿ ನೀಡಿದ್ದನ್ನು ತಿಳಿಸುತ್ತದೆ. **ಚಿಕ್ಕಕಾಟಿ(೨,೩೦೬):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಉತ್ತರ–ಕ್ಕೆ ೨೫ ಕಿ.ಮೀ. ದೂರದಲ್ಲಿರುವ ಇದು ಹಿರಿಕಾಟಿ ಗ್ರಾಮದ ನೆರೆಯ ಗ್ರಾಮವಾಗಿದ್ದು, ಅಲ್ಲಿರುವ ಗಂಗ ಚೋಳ ಶಾಸನಗಳಿಂದಾಗಿ ಉಲ್ಲೇಖಾರ್ಹ. ಊರ ಪಾಳು ಚಂದ್ರಶೇಖರ ಗುಡಿ ಬಳಿಯಿರುವ ಗಂಗ ಸತ್ಯವಾಕ್ಯ ಪೆರ್ಮಾಡಿಯ ಆಳ್ವಿಕೆಯ ಶಾಸನ ಬೂತರಸನು ಪದಿಯಳೆ, ನೆಲೆಗೂರುಗಳನ್ನು ದತ್ತಿ ನೀಡಿರುವುದನ್ನು ದಾಖಲಿಸಿರುವಂತೆ ತೋರುತ್ತದೆ. ಅಲ್ಲೇ ಬದಿಯ ಹೊಲವೊಂದರಲ್ಲಿರುವ ಚೋಳ ಒಂದನೇ ರಾಜಾಧಿರಾಜನ

೧೦೪೯ರ ಶಾಸನವನ್ನು ಅವನ ಆಳ್ವಿಕೆಯ ೩೩ನೇಯ ವರ್ಷದಲ್ಲಿ ನೀಡಲ್ಪಟ್ಟಿದ್ದು, ತೊರೆಕಾರಟ್ಟಿಯ ಆಚಯ್ಯನ ಮಗನಾದ ಕೇಶವಭಟ್ಟನು ತನ್ನ ತಂದೆ ತಾಯಿಯ ಪುಣ್ಯಾರ್ಥವಾಗಿ ದೇಗುಲವನ್ನು ಮಾಡಿಸಿ ೧೦೦ ಭತ್ತದ ಮಣ್ಣು ಹಾಗೂ ಆರು ಹಸುಗಳನ್ನು ಮಹಾದೇವರ (ಚಂದ್ರಶೇಖರ ದೇವರಿಗೆ) ಸೇವೆಗೆಂದು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಅಲ್ಲದೇ ಇತರರೂ ದತ್ತಿ ನೀಡಿರುವ ಅಂಶವನ್ನು ದಾಖಲಿಸಿದೆ ಇದರಿಂದ ಹಿರಿಕಾಟಿಯ ಪ್ರಾಚೀನ ಹೆಸರು ತೊರೆಕಾರಟ್ಟಿ ಎಂದು ಗೊತ್ತಾಗುತ್ತಿದ್ದು, ಇಂದು ಪಾಳು ಬಿದ್ದಿರುವ ಚಂದ್ರಶೇಖರ ಗುಡಿಯೇ ಮೇಲಿನ ಶಾಸನೋಕ್ತ ದೇಗುಲವೆಂದು ವೇದ್ಯವಾಗುತ್ತದೆ. **ನಿಟ್ರೆ (೨,೯೮೪):** ಚಿಕ್ಕಕಾಟಿಗೆ ನಾಲ್ಕು ಕಿ.ಮೀ. ದೂರದಲ್ಲಿರುವ ಇದು ೧೧೦೯ರ ಶಾಸನದಲ್ಲಿ 'ನಿಟ್ಟರೆ' ಎಂದೇ ದಾಖಲಾಗಿದೆ. ಊರ ಅಂಚರಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ಗಂಗ ಲಕ್ಷಣದಿಂದ ಕೂಡಿದ್ದು, ಅಲ್ಲಿರುವ ೧೧೦೯ರ ಶಾಸನ, ನಿಟ್ಟರೆ ರಾಜಗೌಡನ ಪೆಮ್ಮೆಗೌಡ ಮತ್ತವನ ಸೋದರ, ಬಿದಿವಾಸಯ್ಯರು ಸಂಯುಕ್ತವಾಗಿ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿ, ಕಳಸಾರೋಹಣ ಮಾಡಿಸಿ, ಕೊಳನೆಲ್ಲೂರ ನರಸಿಂಗಯ್ಯನ ಮಗ ಮಾಧವಯ್ಯನಿಗೆ ಅಯ್ಗೊಳ ಹುಂಬೊಲ (ಉಂಬಳಿ)ವನ್ನು ನೀಡಿದ ಅಂಶವನ್ನು ತಿಳಿಸುತ್ತದೆ.  ಆದರೆ ಇಂದಿದು ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಸುತ್ತಮುತ್ತ ಹಲವಾರು ವೀರಗಲ್ಲುಗಳಿವೆ. ಊರ ಹೊಲವೊಂದರಲ್ಲಿರುವ ೧೧೬೩ರ ತಮಿಳು ಶಾಸನ ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಮಲ್ಲಿಕಾಜುನ ದಂಡನಾಯಕನು ಕೊಲ್ಗಣದ ವಾಸುದೇವ ಪೆರುಮಾಳೆ ದೇವರಿಗೆಂದು ಭೂ ದಾನ ನೀಡಿದ್ದನ್ನು ದಾಖಲಿಸಿದೆ. ಇದರಿಂದ ಕೊಲ್ಗಣ(ಕುಲಗಾಣ)ದಲ್ಲಿ ವಾಸುದೇವ ಪೆರುಮಾಳ ದೇವರ ಗುಡಿ ಇದ್ದ ಅಂಶ ವೇದ್ಯವಾಗುತ್ತದೆ. ಇಲ್ಲಿಯ ಲಕ್ಷ್ಮೀಗುಡಿಯು ಪ್ರಾಚೀನದ್ದಾಗಿದ್ದು, ವಿಜಯನಗರ ಶೈಲಿಯ ಶಿಖರವನ್ನು ಹೊಂದಿದೆ. ಇದರ ನವರಂಗವು ವಿಜಯನಗರ ಶೈಲಿಯ ಚೌಕಾಕಾರದ ಕಂಬಗಳನ್ನು ಹೊಂದಿದ್ದು, ತೊಲೆಯ ಮೇಲೆ ಅಪ್ರಕಟಿತ ಶಾಸನವೊಂದಿದೆ.

**ಗಣಿಗನೂರು(೨,೨೪೯):** ತಾಲೂಕು ಕೇಂದ್ರ ಯಳಂದೂರಿನಿಂದ ಐದಾರು ಕಿ.ಮೀ ಈಶಾನ್ಯಕ್ಕೆ ಸುವರ್ಣ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿಂದ ಉತ್ತರಕ್ಕೆ ಆರು ಕಿ.ಮೀ. ಅಂತರದಲ್ಲಿ ಕಾವೇರಿ ನದಿಯು ಪೂರ್ವಾಭಿಮುಖವಾಗಿ ಪ್ರವಹಿಸುತ್ತದೆ. ಈ ಊರಿನ ಪ್ರಾಚೀನತೆಯನ್ನು ಗಂಗರ ಕಾಲಕ್ಕೆ ಗುರುತಿಸಬಹುದಾದರೂ ಸುಮಾರು ೧೨-೧೩ನೆಯ ಶತಮಾನಕ್ಕೆ ಸೇರಿದ ಶಾಸನದಲ್ಲಿ ಈ ಊರನ್ನು 'ಗಣಿಯನೂರು ತಿರುವರಂಗನಾಥ ಚತುರ್ವೇದಿ ಮಂಗಲ' ಎಂದು ಮೊದಲ ಬಾರಿಗೆ ಹೆಸರಿಸಲಾಗಿದೆ. ಈ ಉಲ್ಲೇಖ ಸಾಮಾನ್ಯ ಗ್ರಾಮವಾಗಿದ್ದ ಗಣಿಯನೂರನ್ನು ಅಗ್ರಹಾರವನ್ನಾಗಿಸಿದ ಅಂಶವನ್ನು ಸೂಚಿಸುತ್ತದೆ. ಆದರೆ ಕೆರೆಯ ಬದಿಯಲ್ಲಿರುವ ಗಂಗ ಶಾಸನ ಕಲ್ಲಿನ ಹಿಂಬದಿಯಲ್ಲಿ ಬರೆದಿರುವ ೧೫೬೪ ರ ದಾಖಲೆಯಲ್ಲಿ ಇದು 'ಗಣಿಗನೂರು' ಎಂದು ಉಲ್ಲೇಖಿತಗೊಂಡಿದ್ದು, ಹದಿನಾಡು ಸೀಮೆಯಲ್ಲಿದ್ದ ಅಂಶ ವೇದ್ಯವಾಗುತ್ತದೆ. ಇಲ್ಲಿಯ ೧೫೬೬ರ ಇನ್ನೊಂದು ಶಾಸನ, ಯಳಂದೂರಿನ ಗೌರೇಶ್ವರ ದೇವರಿಗೆ ಈ ಗ್ರಾಮವನ್ನು ಉಪಗ್ರಾಮದೊಂದಿಗೆ ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ.

ಇಲ್ಲಿಯ ನೀಲಕಂಠೇಶ್ವರ ಗುಡಿ ಮುಂದಿರುವ ಸುಮಾರು ೧೦ನೇ ಶತಮಾನದ ಶಾಸನ, ಗಂಗ ಸತ್ಯವಾಕ್ಯ ಪೆರ್ಮಾಡಿದೇವನ ಆಳ್ವಿಕೆಗೆ ಸೇರಿದ್ದು, ಬಲಿಕುಲದ ಅರಕುಟ್ಟಿ ಎಂಬ ಅಧಿಕಾರಿಯು, ಶಿವಶಕ್ತಿ ಭಟಾರಕರು ನಿರ್ಮಿಸಿದ ಈ ಅರಕೂಟ್ಟೇಶ್ವರ ಗುಡಿಯ ಪೂಜಾವಿಧಿಗಳಿಗೆಂದು ಭೂ ದತ್ತಿ ನೀಡಿದ ಅಂಶವನ್ನು ತಿಳಿಸುತ್ತದೆ. ಈ ಶಾಸನ ಬರೆದಾತ ನೆರೆಯ ಎರಿಯೂರಿನ ದಿನಕರಯ್ಯ ಸೆಟ್ಟಿ ಎಂದೂ ಗೊತ್ತಾಗುತ್ತದೆ. ಮೇಲಿನ ಶಾಸನೋಕ್ತ ದೇವಾಲಯವೇ ಪ್ರಸಕ್ತ ನೀಲಕಂಠೇಶ್ವರ ದೇವಾಲಯವೆಂದು ಗುರುತಿಸಲಾಗಿದ್ದು, ಇದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಪೂರ್ಣ ಜೀರ್ಣೋದ್ಧಾರಗೊಂಡಿರುವ ಇದರ ಗರ್ಭಗೃಹದಲ್ಲಿ

ಶಿವಲಿಂಗವಿದ್ದು, ನಂತರದಲ್ಲಿ ಹದಿನಾಡು ಅರಸರ ಆಳ್ವಿಕೆಯಲ್ಲಿ ಇದಕ್ಕೆ ಶಿಖರವನ್ನು ಸೇರಿಸಿರುವಂತೆ ತೋರುತ್ತದೆ. ನವರಂಗದಲ್ಲಿ ದುಂಡಾಕಾರದ ಕಿರುಗಂಬಗಳಿವೆ. ಗಣಪತಿ, ಸೂರ್ಯ, ದುರ್ಗಿ ಹಾಗೂ ವಿಷ್ಣುವಿನ ಪ್ರಾಚೀನ ಶಿಲ್ಪಗಳನ್ನು ನವರಂಗದಲ್ಲಿ ಇಡಲಾಗಿದೆ. ಈ ಶಾಸನದಲ್ಲಿ ಉಕ್ತವಾಗಿರುವ ಅಧಿಕಾರಿ ಅರಿಕುಟ್ಟಿಗು ಚಾಮರಾಜನಗರಕ್ಕಿರುವ 'ಅರೆಕೊತಾರ' ಹೆಸರಿಗೂ ಏನಾದರೂ ಸಂಬಂಧವಿದೆಯೇ ಎಂದು ವಿವೇಚಿಸುವ ಅಗತ್ಯವಿದೆ. ಮನೆಯೊಂದರ ಹಿತ್ತಲಲ್ಲಿರುವ ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಘನರುದ್ರ ಸ್ವಾಮಿಯು ಕೆರೆ ನಿರ್ಮಿಸಿ, ಬಿತ್ತುವಾಟ ಉಂಬಳಿ ನೀಡಿದ್ದನ್ನು ದಾಖಲಿಸುತ್ತದೆ.

ಇಲ್ಲಿಯ ಜನಾರ್ದನ ದೇವಾಲಯವು ಹೊಯ್ಸಳ ಶೈಲಿಯ ಚಿಕ್ಕ ಗುಡಿಯಾಗಿದ್ದು, ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿದೆ. ಅದರ ತಳಪಾದಿಕಲ್ಲಿನ ಮೇಲಿರುವ ಸುಮಾರು ೧೩-೧೪ನೇ ಶತಮಾನಕ್ಕೆ ಸೇರಿದ ತಮಿಳು ಶಾಸನಗಳಿಂದ ಗಣಿಗನೂರಿಗೆ "ತಿರುವರಂಗ ನಾರಾಯಣ ಚತುರ್ವೇದಿ ಮಂಗಲ" ಎಂಬ ಅಭಿದಾನವಿದ್ದು, ಅಲ್ಲಿಯ ತಿರುಮಲ ಕೊಯಿಲಿನ ನಂದಾದೀಪಕ್ಕೆಂದು ಮಹಾಸಭೆಯ ಸುಬರ್ದಿನಲ್ಲಿ ಪುದುವಟ್ಟನ್ನು ಇಟ್ಟ ಅಂಶ ಗೊತ್ತಾಗುತ್ತದೆ. ಗರ್ಭಗುಡಿಯಲ್ಲಿರುವ ಸುಮಾರು ಒಂದೂವರೆ ಮೀಟರ್ ಎತ್ತರದ ಜನಾರ್ದನ ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರನ್ನು ಕೆತ್ತಲಾಗಿದೆ. ಅಶ್ವತ್ಥಕಟ್ಟೆಯ ಬಳಿ ಮಹಿಷಮರ್ಧಿನಿ ಶಿಲ್ಪದೊಂದಿಗೆ ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳೂ ಇವೆ. ಇಲ್ಲಿಯ ವೀರಗಲ್ಲುಗಳಲ್ಲೊಂದು ಸಾಗುವಳಿಯಲ್ಲಿ ತೊಡಗಿರುವ ರೈತನ ಕೆತ್ತನೆಯನ್ನು ಹೊಂದಿರುವುದು ಉಲ್ಲೇಖಾರ್ಹ. ಊರ ಸಮೀಪದ ಹೊನ್ನಹೊಳೆಯ ಕಲ್ಲಕಟ್ಟೆ ಬಂಡೆ ಮೇಲಿರುವ ಸುಮಾರು ೧೬ನೇ ಶತಮಾನದ ಶಾಸನ ಹದಿನಾಡು ಪ್ರಭು ರಾಜನಾಯಕನು ನಂದ್ಯಾಲ ಸೀಮೆಯ ಭಂಡಿಕಾರರಿಂದ ಎರಡು ವಡ್ಡನ್ನು ಈ ನದಿಗೆ ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ. ಉಳಿದಂತೆ ಇಲ್ಲಿ ಗುಂಗುರು ಮಲ್ಲಿಕಾರ್ಜುನ, ಮಾರಮ್ಮ ಮುಂತಾದ ಗುಡಿಗಳಿವೆ. ಗಣಿಗನೂರಿನ ೧೫೬೪ರ ಶಾಸನ, ಸದಾಶಿವರಾಯನ ಆಳ್ವಿಕೆಯಲ್ಲಿ ಸಂಜರಖಾನನು ದೇವಪ್ಪಗೌಡನನ್ನು ಅನ್ಯಾಯವಾಗಿ ಕೊಂದದ್ದಕ್ಕೆ ಪರಿಹಾರವಾಗಿ, ಗಣಿಗನೂರ ಸ್ಥಳವೂ ಸೇರಿದಂತೆ ಆರು ಗ್ರಾಮಗಳನ್ನು ರಕ್ತ ಕೊಡುಗೆಯಾಗಿ ಚಾಮರಸ ಒಡೆಯರಿಗೆ ಉಂಬಳಿ ನೀಡಿದ್ದನ್ನು ದಾಖಲಿಸಿದೆ.

**ಗುಂಡ್ಲುಪೇಟೆ(೨೬,೩೪೦):** ಬಹು ಹಿಂದಿನಿಂದಲೂ (೧೮೮೭) ತಾಲೂಕು ಕೇಂದ್ರವಾಗಿರುವ ಗುಂಡ್ಲುಪೇಟೆಯು ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೩೫ ಕಿ.ಮೀ. ದೂರದಲ್ಲಿ ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಗಡಿಭಾಗದ ಸರಹದ್ದಲ್ಲಿರುವ ಪ್ರಮುಖ ವಾಣಿಜ್ಯ ಸ್ಥಳ. ನೆರೆಯ ಮಾದಾಪಟ್ಟಣದ ೧೭೫೧ರ ಇಮ್ಮಡಿ ಕೃಷ್ಣರಾಜೊಡೆಯರ ತಾಮ್ರಶಾಸನದಲ್ಲಿ 'ಗುಂಡ್ಲುಪೇಟೆ' ಯ ಉಲ್ಲೇಖವಿದ್ದು ಅಲ್ಲಿ ಹರಿದಿರುವ ಗುಂಡ್ಲು ಹೊಳೆಯಿಂದಾಗಿ 'ಗುಂಡ್ಲುಪೇಟೆ' ಎಂಬ ಹೆಸರನ್ನು ಇದು ಪಡೆದಿದೆಯಾದರೂ 'ವಿಜಯಪುರ ಅಗ್ರಹಾರ' ಎಂದೂ ದಾಖಲೆಗಳಲ್ಲಿ ಇದನ್ನು ಕರೆದಿರುವ ಅಂಶ ಅನೇಕ ಪ್ರಾಚೀನ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹಿಂದೆ ತೆರಕಣಾಂಬಿ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಈ ಪಟ್ಟಣದಲ್ಲಿಂದು ವಿವಿಧ ಅರಸರ ಕಾಲಕ್ಕೆ ಸೇರಿದ ೧೭ ಶಾಸನಗಳು ಪತ್ತೆಯಾಗಿದ್ದು, ಅವುಗಳಲ್ಲಿ ಎರಡು ತಾಮ್ರ ಶಾಸನಗಳಾಗಿವೆ. ಅಲ್ಲದೆ, ಹಿಂದೆ 'ಕೋಟೆ' ಎಂದು ಕರೆಯಲಾಗುತ್ತಿದ್ದ ಪ್ರದೇಶದ ಬಸ್ತಿಮಾಳದಲ್ಲಿರುವ ೧೧೯೬ರ ಶಾಸನ ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಹರದಗೌಡನ ಮಗನಾದ ಬಿಟ್ಟಿಗೌಡನು ಭರದಿಂದ ಮಾಡಿಸಿದ ತುಪ್ಪದ ಬಿಟ್ಟಿಜಿನಾಲಯಕ್ಕೆ ಕುಡುಗುನಾಡು ೩೦೦ ಪ್ರಾಂತದ ಸಮಸ್ತ ಪ್ರಭುಗೌಂಡರು ಮಡಹಳ್ಳಿಯನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಆಗ ಕುಮಾರ ಲಕ್ಷ್ಮಣ ದಂಡನಾಯಕ ನಾಡನ್ನಾಳುತ್ತಿದ್ದನೆಂದು ತಿಳಿದು ಬರುತ್ತದೆ. ಅಲ್ಲೇ ಇರುವ ಸುಮಾರು ೧೬ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ, ವಿಜಯಪುರದ ಅನಂತ ದೇವರಿಗೆ ಗೌಡ ಪ್ರಜೆಗಳು ಭೂ ದತ್ತಿ

ನೀಡಿದ ಅಂಶವನ್ನು ಅರುಹುತ್ತಿದ್ದು, ಇದರಿಂದ ಅನಂತನಾಥ ತೀರ್ಥಂಕರನ ಬಸದಿ (ಎಕ್ಕೋಟಿ ಜಿನಾಲಯ) ಇಲ್ಲಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಆದರೆ ಇಲ್ಲಿ ಹೊಯ್ಸಳರ ಕಾಲದ ವಿಜಯನಾರಾಯಣ, ವಿಜಯನಗರ ಕಾಲದ ರಾಮೇಶ್ವರ ಹಾಗೂ ಮೈಸೂರು ಅರಸರ ಕಾಲದ ಅಮ್ಮನವರ ಗುಡಿ ಮತ್ತು ಪರವಾಸುದೇವ ದೇವಾಲಯಗಳಿವೆ.

ಊರ ನಡುವೆ ಇರುವ ವಿಜಯನಾರಾಯಣ ದೇವಾಲಯವು ಹೊಯ್ಸಳ ಲಕ್ಷಣಗಳನ್ನುಳ್ಳ ರಚನೆಯಾಗಿದ್ದು, ವಿಶಾಲವಾಗಿದೆ. ಈ ಗುಡಿ ಪರಿಸರದಲ್ಲಿರುವ ನಾಲ್ಕು ಶಾಸನಗಳಲ್ಲಿ ೧೫೪೩ರ ಶಾಸನ ಗಾಳಿ ಮಂಟಪದ ಬಗ್ಗೆ ಹೇಳಿದರೆ, ೧೫೫೪ರ ಶಾಸನ ರುಸ್ತುಂಖಾನೊಡೆಯರ ದತ್ತಿಯನ್ನು ದಾಖಲಿಸಿದೆ. ಸುಮಾರು ೧೨ನೇ ಶತಮಾನಕ್ಕೆ ಸೇರಬಹುದಾದ ಈ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ಮುಂದಿನೆರಡು ನಂತರದ ಸೇರ್ಪಡೆಗಳಾಗಿವೆ. ಗರ್ಭಗೃಹದಲ್ಲಿರುವ ಒಂದು ಮೀಟರ್ ಎತ್ತರದ ವಿಜಯನಾರಾಯಣ ಶಿಲ್ಪವು ಹೊಯ್ಸಳ ಶಿಲ್ಪ ಕೌಶಲ್ಯವನ್ನು ಮೆರೆದಿದ್ದು, ಅದರ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರವನ್ನು ಮನೋಜ್ಞವಾಗಿ ಬಿಡಿಸಲಾಗಿದೆ. ನವರಂಗದ ದುಂಡಾಕಾರದ ಕಂಬಗಳ ಮೇಲೆ ಆಕರ್ಷಕ ಉಬ್ಬುಕೆತ್ತನೆಗಳಿವೆ. ನವರಂಗದ ಪ್ರವೇಶದ್ವಾರದ ಎಡಪಾರ್ಶ್ವದಲ್ಲಿ ಕಮಲವಲ್ಲಿ ಅಮ್ಮನವರ ಗುಡಿಯಿದೆ. ವರದರಾಜ ಹಾಗೂ ವಿಜಯನಾರಾಯಣರ ಕಂಚಿನ ಮೂರ್ತಿ ಹಾಗೂ ಊರಾಚೆ ಪಾಳುಬಿದ್ದಿರುವ ಪರವಾಸುದೇವ ಗುಡಿಯಿಂದ ತಂದಿರುವ ಪರವಾಸುದೇವರ ಶಿಲ್ಪಗಳನ್ನು ಇಲ್ಲಿ ಪ್ರತ್ಯೇಕವಾಗಿ ಪ್ರತಿಷ್ಠಾಪಿಸಲಾಗಿದೆ. ಈ ಅಂಶವನ್ನು, ಅವುಗಳ ಪೀಠದ ಮೇಲಿರುವ ಸುಮಾರು ೧೭ನೇ ಶತಮಾನದ ಶಾಸನಗಳಿಂದ ಅರಿಯಬಹುದಾಗಿದೆ. ಇದರ ಮುಖಮಂಟಪವು ವಿಜಯನಗರ ಶೈಲಿಯ ಕಂಬಗಳಿಂದ ಅಲಂಕೃತಗೊಂಡಿದೆ. ಈ ದೇವರ ಜಾತ್ರೆಯು ರಥಸಪ್ತಮಿಯಂದು ರಥೋತ್ಸವದೊಂದಿಗೆ ವಿಜೃಂಭಣೆಯಿಂದ ಜರುಗುತ್ತದೆ.

ಊರಾಚೆ ತೆರಕಣಾಂಬಿ ರಸ್ತೆಯಲ್ಲಿ ಗುಂಡ್ಲುಹೊಳೆ ದಂಡೆಯ ಮೇಲಿನ ದೇವಾಲಯ ಸಂಕೀರ್ಣದಲ್ಲಿರುವ ರಾಮೇಶ್ವರ ದೇವಾಲಯವು ವಿಜಯನಗರದರಸರ ಕಾಲದ ರಚನೆಯಾಗಿದೆ. ಈ ದೇವಾಲಯದ ದುರಸ್ತಿ ಕಾರ್ಯವು ಪ್ರಗತಿಯಲ್ಲಿದೆ. ಈ ದೇವಾಲಯದ ಪರಿಸರದಲ್ಲಿರುವ ಎಂಟು ಶಾಸನಗಳಲ್ಲಿ ಈ ದೇವಾಲಯದ ಅಧಿಷ್ಠಾನದ ಮೇಲಿರುವ ಒಂದೇ ತೇದಿಯ (೧೩೭೪) ಎರಡು ಶಾಸನಗಳಿಂದ, ಒಂದನೇ ಬುಕ್ಕನ ಮಗ ಚಿಕ್ಕಕಂಪಣ್ಣೊಡೆಯನು ಆಳುತ್ತಿದ್ದಾಗ ಸರ್ವನಮಸ್ಯದ ಮಹಾ ಅಗ್ರಹಾರ ಪ್ರಸನ್ನ ವಿಜಯಪುರದ ಮಹಾಜನಗಳು ರಾಮನಾಥದೇವರ ಪಾತ್ರ ಭೋಗಕ್ಕೆಂದು ದತ್ತಿ ಬಿಟ್ಟ ಸಂದರ್ಭದಲ್ಲೇ ವೀರ ಪಂಚಾಳರೂ ದಾನ ನೀಡಿದ್ದನ್ನು ದಾಖಲಿಸುತ್ತಿದ್ದು, ಉಳಿದವೂ ಇತರೇ ದತ್ತಿಗಳನ್ನು ದಾಖಲಿಸಿವೆ. ಅಲ್ಲೇ ಇರುವ ಇನ್ನೊಂದು ಶಾಸನ, ಆಚಾರ್ಯ ವಿದ್ಯಾರಾಸಿ ದಿಗಂಬರರ ಗುರುಪರಂಪರೆಯನ್ನು ನೀಡುತ್ತದೆ. ನೆರೆಯ ಮಡೆಹಳ್ಳಿಯ ೧೩೭೪ರ ಶಾಸನ ಗತಿಸಿದ ತಮ್ಮ ತಂದೆ ಚಿಕ್ಕ ಕಂಪಣ ವೊಡೆಯರ ಹೆಸರಲ್ಲಿ ಮಡೆಹಳ್ಳಿ ಗ್ರಾಮವನ್ನು ರಾಮಯ್ಯ ದೇವರ ಸೇವೆಗೆಂದು ಕುಮಾರ ನಂಜಣ್ಣವಡೆಯನು ದತ್ತಿ ನೀಡಿದ್ದನ್ನು ದಾಖಲಿಸಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನುಳ್ಳ ಇದರ ಗರ್ಭಗೃಹದ ಇಟ್ಟಿಗೆ ಶಿಖರವು ನಶಿಸಿ ಹಾಳಾಗುತ್ತಿದೆ. ಇದರ ನವರಂಗದ ಕಂಬಗಳು

ಮದನಿಕಾ, ಸಂಗೀತಗಾರರೇ ಮೊದಲಾದ ಉಬ್ಬುಕೆತ್ತನೆಯಿಂದಾಗಿ ಆಕರ್ಷಕವಾಗಿವೆಯಾದರೂ ಗುಡಿಯಿಂದು ಪಾಳು ಬಿದ್ದಿದೆ. ಅದರ ಬದಿಯಲ್ಲೇ ಇರುವ ಅಮ್ಮನವರ ದೊಡ್ಡ ಗುಡಿಯೂ ಶಿಥಿಲಾವಸ್ಥೆಯಲ್ಲಿದೆ.

ಇದೇ ಪರಿಸರದಲ್ಲಿರುವ ಪರವಾಸುದೇವರ ಗುಡಿಯು ಚಿಕ್ಕದೇವರಾಜ ಒಡೆಯರ ಕಾಲದ ರಚನೆಯಾಗಿದ್ದು, ಇದನ್ನು ತಮ್ಮ ತಂದೆಯ ಸ್ಮರಣಾರ್ಥವಾಗಿ ನಿರ್ಮಿಸಿದರೆಂದು ಹೇಳಲಾಗುತ್ತದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ವಿಶಾಲವಾದ ಮುಖಮಂಟಪವನ್ನು ಹೊಂದಿದ್ದ ಇದು ಹಿಂದೊಂದು ಸುಂದರ ದೇವಾಲಯವಾಗಿತ್ತು. ಆದರೆ ಇಂದು ಪಾಳುಬಿದ್ದಿದೆ. ಪ್ರಸ್ತುತ ಈ ದೇವಾಲಯದ ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ. ಇಲ್ಲಿದ್ದ ಪರವಾಸುದೇವ ಶಿಲ್ಪವನ್ನು ನಂತರದಲ್ಲಿ ದಿವಾನ್ ರಂಗಚಾರ್ಲುರವರು ವಿಜಯನಾರಾಯಣ ಗುಡಿಗೆ ಸ್ಥಳಾಂತರಿಸಿದರೆಂದು ತಿಳಿದು ಬರುತ್ತದೆ. ಇಲ್ಲಿಯ ನವರಂಗದ ಕಂಬಗಳ ಮೇಲೆ ಮಹಾಭಾರತ ಭಾಗವತ ಹಾಗೂ ದಶಾವತಾರ ಕೆತ್ತನೆಗಳ ಜೊತೆಗೆ ಚಿಕ್ಕದೇವರಾಜ ಒಡೆಯರ ಉಬ್ಬು ಶಿಲ್ಪವನ್ನೂ ನೋಡಬಹುದಾಗಿದೆ. ಇದರ ಬದಿಯಲ್ಲಿರುವ ಇನ್ನೊಂದು ಗುಡಿಯೂ ಶಿಥಿಲಾವಸ್ಥೆಯಲ್ಲಿದೆ.

ಊರ ಪೇಟೆ ಬೀದಿಯಲ್ಲಿರುವ ರಾಮೇಶ್ವರ ದೇವಾಲಯ, ಅದರ ಎದುರು ಭಾಗದಲ್ಲಿರುವ ಕಾಳಮ್ಮನವರ ಗುಡಿಗಳೂ ಉಲ್ಲೇಖಾರ್ಹವಾಗಿವೆ. ಊರಲ್ಲಿ ಹಿಂದೆ ಇದ್ದ ಕೋಟೆ ಪ್ರದೇಶದ ಒಳಭಾಗದಲ್ಲಿ ಬಸದಿಮಾಳ ಎಂದು ಕರೆಯಲ್ಪಡುವ ಸ್ಥಳದಲ್ಲಿಂದು ಕೋಟೆ ಇಲ್ಲವೇ ಬಸದಿಯ ಅವಶೇಷಗಳೇನು ಉಳಿದಿಲ್ಲ. ಆದರೆ ಹೊಯ್ಸಳ ಇಮ್ಮಡಿ ಬಲ್ಲಾಳನ ೧೧೯೬ರ ಒಂದು ಶಾಸನದಲ್ಲಿ ಬಿಟ್ಟಿಗೌಂಡನು ನಿರ್ಮಿಸಿದ ಬಿಟ್ಟಿ ಜಿನಾಲಯದ ಪೂಜೆ-ಪುರಸ್ಕಾರಗಳಿಗೆಂದು ಅರಸನು ತುಪ್ಪೂರಿನಲ್ಲಿದ್ದಾಗ ದತ್ತಿ ಬಿಟ್ಟ ಅಂಶ ದಾಖಲಾಗಿದೆ. ಮೇಲಿನ ಶಾಸನೋಕ್ತ ಬಸದಿಯು ಹಿಂದೆ ಇಲ್ಲಿಯ ಬಸ್ತಿಮಾಳದಲ್ಲಿದ್ದು, ನಂತರದಲ್ಲಿ ನಾಶವಾಗಿರಬೇಕೆಂದು ತೋರುತ್ತದೆ. ಊರಲ್ಲಿ ಜಮಾತ್ ಹಾಗೂ ಜಾಮಿಯಾ ಮಸೀದಿಗಳಿದ್ದು, ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟಂಟ್‌ರ ಪ್ರತ್ಯೇಕ ಚರ್ಚುಗಳಿವೆ.

**ಗುಂಬಳ್ಳಿ(೪,೦೪೫):** ತಾಲೂಕು ಕೇಂದ್ರ ಯಳಂದೂರಿನಿಂದ ಆಗ್ನೇಯಕ್ಕೆ ಸುಮಾರು ೧೫ ಕಿ.ಮೀ. ದೂರಕ್ಕಾದಂತೆ ಬಿಳಿಗಿರಿರಂಗನಬೆಟ್ಟದ ರಸ್ತೆಯಲ್ಲಿರುವ ಊರು. ಇಲ್ಲಿಂದ ಈವರೆಗೆ ಸುಮಾರು ೧೦-೧೬ನೇ ಶತಮಾನಕ್ಕೆ ಸೇರಿದ ಹನ್ನೆರಡು ಶಾಸನಗಳು ವರದಿಯಾಗಿವೆ. ಪ್ರಾಚೀನ ಶಾಸನಗಳಲ್ಲಿ ವಾಣಿಗಪಳ್ಳಿ, ಗುಂಬಹಳ್ಳಿ, ಗುಂಬೆಹಳ್ಳಿ, ಗುಂಬಪಳ್ಳಿ ರೂಪಗಳಲ್ಲಿ ಇದು ಉಲ್ಲೇಖಿತಗೊಂಡಿದೆ. ಸುಮಾರು ೧೦ನೇ ಶತಮಾನಕ್ಕೆ ಸೇರಿದ ಗಂಗ ಶಾಸನದಲ್ಲಿ ಉಲ್ಲೇಖಿತಗೊಂಡಿರುವ ದೇವಾಲಯವೇ ಪ್ರಸ್ತುತ ಶಾಸನವಿರುವ ಕಾರೇಶ್ವರ-ಬಾಣೇಶ್ವರ ಗುಡಿಯಾಗಿದ್ದು, ನಾಗತಿಅಮ್ಮನ ಮಗನಾದ ಮರಲ್ಲಯ್ಯನು ವಾಅಲಬ್ಬೆಯ ಮೂರ್ತಿಯನ್ನು ಮಾಡಿಸಿದ ಅಂಶ ಆ ಶಾಸನದಲ್ಲಿದೆ. ಗರ್ಭಗೃಹ, ನವರಂಗಗಳನ್ನೊಳಗೊಂಡ ಈ ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದು, ತೊಡೆಯ ಮೇಲೆ ಮಕ್ಕಳನ್ನು ಕೂರಿಸಿಕೊಂಡಿರುವ ಅಂಬಿಕಾಯಕ್ಷಿ, ಸೂರ್ಯ, ವೀರಗಲ್ಲು ಮುಂತಾದ ಪ್ರಾಚೀನ ಶಿಲ್ಪಗಳಿಲ್ಲಿವೆ. ಇದರಿಂದ ಹಿಂದೆ ಇದೊಂದು ಜೈನ ನೆಲೆಯಾಗಿತ್ತೆಂದು ತರ್ಕಿಸಬಹುದಾಗಿದೆ. ಹೊಲವೊಂದರಲ್ಲಿರುವ ೧೧೯೮ರ ಶಾಸನ ಭೂಕ್ರಯ ದಾಖಲೆಯಾಗಿದ್ದು, ಉಲ್ಲೇಖಾರ್ಹವಾಗಿದೆ.

ಚಾವಡಿ ಬಳಿಯಿರುವ ೧೨೦೦ರ ವೀರಗಲ್ಲು ಶಾಸನ ಗುಂಬಪಳ್ಳಿಯ ದೊಮ್ಮರ ಮಂಚಪೋವನು ತುರುಗೋಳದಲ್ಲಿ ಗತಿಸಿದ್ದರಿಂದ ಅವನ ಮಕ್ಕಳು ಈ ವೀರಗಲ್ಲು ನಿಲ್ಲಿಸಿದರೆಂಬ ಅಂಶವನ್ನು ತಿಳಿಸುತ್ತದೆ. ೧೨೪೦ರ ಇನ್ನೊಂದು ಶಾಸನ ಮೂಗೂರು (ಚೇರನಲ್ಲೂರು) ಹಾಗೂ ಗುಮ್ಬಹಳ್ಳಿಯ ಇಬ್ಬರು ಗೌಡರನ್ನು ಹೆಸರಿಸುತ್ತದೆ.

ಊರ ಮಧ್ಯದಲ್ಲಿರುವ ಬಸವೇಶ್ವರ ಗುಡಿಯು ಇಟ್ಟಿಗೆ ಗಾರೆ ನಿರ್ಮಿತ ಕಿರುಗುಡಿಯಾಗಿದ್ದು, ಗರ್ಭಗೃಹ, ಮುಖಮಂಟಪಗಳನ್ನೊಂದಿದ್ದು, ನಂತರದಲ್ಲಿ ಗರ್ಭಗುಡಿಗೆ ಶಿಖರವನ್ನು ಸೇರಿಸಲಾಗಿದೆ. ಇದು ೧೫೧೨ರ ಶಾಸನದಲ್ಲಿ ನಂದೀಕೇಶ್ವರವೆಂದು ಉಲ್ಲೇಖಿತಗೊಂಡಿದೆ. ಇಲ್ಲಿರುವ ವೀರಗಲ್ಲಿನಲ್ಲಿ ಹಂದಿ–ಆನೆಗಳ ಕಾದಾಟವನ್ನು ಮನೋಜ್ಞವಾಗಿ ಚಿತ್ರಿಸಲಾಗಿದ್ದು, ತಮಿಳು ಶಾಸನವನ್ನೂ ಅದು ಒಳಗೊಂಡಿದೆ. ಇಲ್ಲಿಯ ವೇಣುಗೋಪಾಲ ಗುಡಿಯು ವಿಜಯನಗರ ಕಾಲದ ಸರಳ ರಚನೆಯಾಗಿದ್ದು, ಗರ್ಭಗೃಹದಲ್ಲಿ ಒಂದು ಮೀಟರ್ ಎತ್ತರದ ವೇಣುಗೋಪಾಲನ ಶಿಲ್ಪವಿದೆ. ಗುಡಿಯ ನವರಂಗದಲ್ಲಿ ಆಳ್ವಾರ್, ದುರ್ಗಿ, ಹನುಮಂತ ಮುಂತಾದ ಶಿಲ್ಪಗಳಿವೆ. ನೆರೆಯ **ಯರಗಂಬಳ್ಳಿಯೂ** ಸುಮಾರು ೧೩–೧೬ನೇ ಶತಮಾನಕ್ಕೆ ಸೇರಿದ ಎಂಟು ಶಾಸನಗಳನ್ನು ಹೊಂದಿದ್ದು, ಅದರಿಂದ ಹಿಂದೆ ಅದು ಹೊಂದಿದ್ದ ಮಹತ್ವದ ಅರಿವಾಗುತ್ತದೆ. ಊರ ಆಂಜನೇಯ ಗುಡಿ ಮುಂದಿರುವ ೧೨೧೨ರ ಶಾಸನ ಶ್ರೀ ವೈಷ್ಣವರಿಗೆ ಬಿಟ್ಟ ದತ್ತಿಯಾಗಿದೆ. ಮಾದೇಶ್ವರ ಗುಡಿ ಮುಂದಿರುವ ೧೫೧೦ರ ಶಾಸನ ಯರಗಂಬಳ್ಳಿಯಲ್ಲಿ ಭೂ ದಾನ ನೀಡಿದ್ದನ್ನು ದಾಖಲಿಸಿದೆ. **ವಡಗೆರೆ(೪೫೭):** ತಾಲೂಕು ಕೇಂದ್ರ ಯಳಂದೂರಿನಿಂದ ೧೦ ಕಿ.ಮೀ. ಅಂತರದಲ್ಲಿರುವ ಇದು ಗುಂಬಳ್ಳಿಗೆ ಐದು ಕಿ.ಮೀ. ದೂರದಲ್ಲಿದೆ. ಊರ ಗದ್ದೆಯ ಬಯಲಲ್ಲಿರುವ ಹನುಮಂತನ ಗುಡಿಯು ಬೆಟ್ಟದತ್ತ ಮುಖಮಾಡಿ ನಿಂತಿದೆ. ಇಲ್ಲಿ ಬೃಹತ್ ಗಾತ್ರದ ಆಂಜನೆಯನ ಉಬ್ಬುಶಿಲ್ಪವಿದ್ದು, ಶಂಖವನ್ನು ಮಧ್ಯದಲ್ಲಿಡಲಾಗಿದೆ. ಆ ಗುಡಿಯ ಮುಂದಿರುವ ೧೫೮೨ರ ಶಾಸನ ಇಮ್ಮಡಿ ಶ್ರೀರಂಗರಾಯನ ಆಳ್ವಿಕೆಯಲ್ಲಿ ನೀಡಿದ ದತ್ತಿಯಾಗಿದ್ದು, ವಿವರ ಹಾಳಾಗಿದೆ.

**ಗೋಪಾಲಸ್ವಾಮಿ ಬೆಟ್ಟ:** ಹಿಮವತ್ ಗೋಪಾಲಸ್ವಾಮಿ ಬೆಟ್ಟ ಎಂದೂ ಪರಿಚಿತವಿರುವ ಇದನ್ನು ಸಾಂಪ್ರದಾಯಕವಾಗಿ ಕಮಲಾದ್ರಿ ಎಂದೂ ಕರೆಯಲಾಗುತ್ತದೆ. ಪಶ್ಚಿಮಘಟ್ಟ ಶ್ರೇಣಿಯ ಭಾಗವಾಗಿರುವ ಈ ಬೆಟ್ಟ ರಾಜ್ಯದ ಪ್ರಮುಖ ಗಿರಿಧಾಮಗಳಲ್ಲೊಂದಾಗಿದೆ. ಈ ಬೆಟ್ಟವನ್ನು ಏಳು ಕಿ.ಮೀ. ದೂರದ ಹಂಗಲದಿಂದ ಘಟ್ಟ ರಸ್ತೆಯ ಮೂಲಕ ತಲುಪಬಹುದಾಗಿದೆ. ಸಮುದ್ರ ಮಟ್ಟದಿಂದ ಸುಮಾರು ೪೭೭೯ ಅಡಿ ಎತ್ತರವಿರುವ ಈ ಬೆಟ್ಟದ ತುದಿಯಲ್ಲಿ ಗೋಪಾಲಸ್ವಾಮಿ ದೇವಾಲಯವಿದೆ. ಈ ದೇವಾಲಯದ ಅರ್ಚಕರು ಹಂಗಲ ಗ್ರಾಮಕ್ಕೆ ಸೇರಿದ ಕನ್ನೆಗಾಲದಲ್ಲಿ ನೆಲೆಸಿದ್ದಾರೆ. ಈ ಬೆಟ್ಟವು ಸದಾ ಹಿಮದಿಂದಾವೃತವಾಗಿದ್ದು, ಬೆಟ್ಟದ ಮೇಲೆ ಗೋಪಾಲಸ್ವಾಮಿ ಗುಡಿ ಇರುವುದರಿಂದ ಇದಕ್ಕೆ ಆ ಹೆಸರು ಬಂದಿದೆ. ಹೊಯ್ಸಳ ಮುಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ, ನೆರೆಯ ೧೩೧೫ರ ಕನ್ನೇಗಾಲ ಶಾಸನದಲ್ಲಿ 'ಗೋವರ್ಧನ ಗಿರಿ' ಎಂದೇ ಈ ಬೆಟ್ಟವನ್ನು ಕರೆಯಲಾಗಿದ್ದು, ಗೋವರ್ಧನ ಗಿರಿಯಲ್ಲಿ ಗುಡಿ ನಿರ್ಮಿಸಿ, ಗೋಪಿನಾಥ ದೇವರನ್ನು ಪ್ರತಿಷ್ಠಾಪಿಸಿದ ಮಹಾಪ್ರಧಾನ ಮಾಧವ ದಂಡನಾಯಕನು ಆ ದೇವರ ಪೂಜಾವಿಧಿಗೆಂದು ಕಂಣ್ಣವಗಾಲ ಗ್ರಾಮವನ್ನು ದತ್ತಿ ಬಿಟ್ಟ ಅಂಶವನ್ನು ಅದು ದಾಖಲಿಸಿದೆ. ನೆರೆಯ ಗೋಪಾಲಪುರದ ಹೊಲವೊಂದರಲ್ಲಿರುವ ೧೫೩೭ರ ಶಾಸನ, ಇಂಗಳವಾಡಿ ಗ್ರಾಮವನ್ನು ಇದೇ ದೇವರಿಗೆ ದತ್ತಿ ನೀಡಿದ್ದನ್ನು ದಾಖಲಿಸಿದೆ.

ಇಲ್ಲಿಯ ಗೋಪಾಲಸ್ವಾಮಿ ಗುಡಿಯ ಗರ್ಭಗೃಹ ಹಾಗೂ ಗೋಪಾಲಕೃಷ್ಣ ಶಿಲ್ಪಗಳಲ್ಲಿ ಕಂಡು ಬರುವ ಹೊಯ್ಸಳ ಲಕ್ಷಣಗಳು, ಈ ಗುಡಿಯ ಪ್ರಾಚೀನತೆಯನ್ನು ಹೊಯ್ಸಳರಷ್ಟು ಹಿಂದಕ್ಕೆ ಗುರುತಿಸಲು ನೆರವಾಗುತ್ತಿದ್ದು, ಇದನ್ನು ಮೇಲೆ ಚರ್ಚಿಸಿರುವ ೧೩೧೫ರ ಶಾಸನವೂ ಸಮರ್ಥಿಸುತ್ತದೆ. ಆದರೆ ಈ ಗುಡಿಯು ಮೈಸೂರು ಅರಸರ ಕಾಲದಲ್ಲಿ ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ. ಪ್ರಧಾನ ಗರ್ಭಗುಡಿಯಲ್ಲಿರುವ ಸುಮಾರು ಒಂದೂವರೆ ಮೀಟರ್ ಎತ್ತರದ ಹಿಮವತ್ ಗೋಪಾಲಸ್ವಾಮಿ ಶಿಲ್ಪವನ್ನು ಗೌತಮ ಮುನಿಗಳು ಪ್ರತಿಷ್ಠಾಪಿಸಿದರೆಂಬ ಪ್ರತೀತಿ ಸ್ಥಳೀಯವಾಗಿದೆ. ಆಕರ್ಷಕವಾದ ಪ್ರಭಾವಳಿಯನ್ನು ಹೊಂದಿರುವ ಗೋಪಿನಾಥನ ಈ ಶಿಲ್ಪವು ರುಕ್ಮಿಣಿ–ಸತ್ಯಭಾಮೆಯರನ್ನೊಳಗೊಂಡಿದ್ದು ನಯನ ಮನೋಹರವಾಗಿದ್ದು,

ಬದಿಯಲ್ಲೇ ಇರುವ ಕಿರುಗುಡಿಯಲ್ಲಿ ಆಚಾರ್ಯ ರಾಮಾನುಜ, ವಿಶ್ವಕಸೇನ ಹಾಗೂ ಆಳ್ವಾರರ ಮೂರ್ತಿಗಳಿವೆ. ಈ ದೇವಾಲಯದಲ್ಲಿರುವ ಹಿತ್ತಾಳೆಯ ಅರ್ಚನಾತಟ್ಟೆ ಹಾಗೂ ಕೊಡ; ಕಂಚಿನ ಗಿಂಡಿ ಮತ್ತು ಗಂಟೆಗಳ ಮೇಲಿರುವ ಸುಮಾರು ೧೮-೧೯ನೇ ಶತಮಾನಕ್ಕೆ ಸೇರಿದ ಶಾಸನಗಳು ದಾನಿಗಳನ್ನು ಹೆಸರಿಸಿವೆ. ಗುಡಿಯ ಮುಖಮಂಟಪವನ್ನು ಇಟ್ಟಿಗೆ-ಗಾರೆಗಳಿಂದ ನವೀಕರಿಸಲಾಗಿದೆ. ಗುಡಿಯ ಉತ್ತರ ದಿಕ್ಕಿನಲ್ಲಿ ಅರಣ್ಯ ಇಲಾಖೆಯ ಬಂಗಲೆಯಿದ್ದು, ಅಲ್ಲಿಂದ ಸುತ್ತಲಿನ ಅನಂತ ವನಸಿರಿಯನ್ನು ಕಂಡುಂಡು ಆನಂದಿಸಬಹುದಾಗಿದೆ. ಕಾಡಾನೆಗಳ ಸುರಕ್ಷಿತ ತಾಣವಾದ ಈ ಅರಣ್ಯ ಪ್ರದೇಶದಲ್ಲಿ ಕೆಲವೊಮ್ಮೆ ಆನೆಯ ಹಿಂಡು ದೇವಾಲಯ ಪರಿಸರಕ್ಕೂ ಬರುವುದುಂಟು.

ಈ ಬೆಟ್ಟಕ್ಕೆ ಸುತ್ತಲೂ ಕೋಟೆ ಇದ್ದುದರಿಂದ ಹಿಂದೆ ಅದನ್ನು 'ಬೆಟ್ಟದ ಕೋಟೆ' ಎಂದೂ ಕರೆಯಲಾಗುತ್ತಿತ್ತು. ಆದರೆ ಇಂದು ಅದರ ಅಲ್ಪಸ್ವಲ್ಪ ಕುರುಹಷ್ಟೆ ಉಳಿದಿದೆ. ಆ ಕೋಟೆಯನ್ನು ಸ್ಥಳೀಯ ಪಾಳೇಗಾರನಾದ ಸೋಮಣ್ಣ ದಂಡನಾಯಕನು ನಿರ್ಮಿಸಿದನೆಂದು ಹೇಳಲಾಗುತ್ತಿದ್ದು, ಬೆಟ್ಟದಕೋಟೆ ಪಾಳೇಗಾರರು ಮೈಸೂರು ಅರಸರ ಸಂಬಂಧಿಗಳಾಗಿದ್ದು, ಇಮ್ಮಡಿ ಕೃಷ್ಣರಾಜ ಒಡೆಯರ ಮಾವನಾದ ಕತ್ತಿ ಗೋಪಾಲರಾಜೇ ಅರಸು **'ಕಮಲಾಚಲ ಮಹಾತ್ಮೆ'** ಎಂಬ ಕೃತಿಯನ್ನು ೧೭೪೦ರಲ್ಲಿ ರಚಿಸಿದ್ದಾಗಿ ತಿಳಿದು ಬರುತ್ತದೆ. 'ವೆಂಕಟೇಶ್ವರ ಪ್ರಬಂಧ' ಎಂಬ ಕನ್ನಡ ಕೃತಿಯನ್ನು ಬರೆದಿರುವ ಕವಿ ವೆಂಕಟ ಇಲ್ಲಿಯವನು. ಈ ದೇವಾಲಯದ ಪಶ್ಚಿಮದ ಎತ್ತರವಾದ ಬಂಡೆಯ ಮೇಲೆ ಗೋಪಾಲತೀರ್ಥ, ಶಂಖತೀರ್ಥ, ಚಕ್ರತೀರ್ಥ, ಗದಾತೀರ್ಥ, ಇತ್ಯಾದಿ ಪವಿತ್ರಕೊಳಗಳಿವೆ. ಅಲ್ಲದೇ ಕೆಳಗಿನ ಕಣಿವೆಯಲ್ಲಿ ಹಂಸತೀರ್ಥ, ತೊಟ್ಟಿಲುತೀರ್ಥ, ಪಣಕದ ಕೊಳ, ಸಾರಂಗ ತೀರ್ಥ ಹಾಗೂ ಪದ್ಮಾತೀರ್ಥಗಳಿವೆ. ಹಂಸತೀರ್ಥದ ಬಳಿ ಸಾಧುಗವಿ ಇದ್ದು, ಗದಾತೀರ್ಥದ ಹಿಂಬದಿಯಲ್ಲಿ ರೇವಣಸಿದ್ಧೇಶ್ವರ ಲಿಂಗವಿದೆ. ಆ ತೀರ್ಥದ ಬಳಿ ಇರುವ ಒಂದು ಶಾಸನ, ಈ ಕೊಳದಲ್ಲಿ ಕಾಗೆ ಸ್ನಾನ ಮಾಡಿದರೂ ಹಂಸವಾಗುತ್ತದೆಂದು ಉತ್ಪ್ರೇಕ್ಷಿಸಿದೆ. ಇಮ್ಮಡಿ ರಾವುತರಾಯ ಮಾಧವ ದಂಡನಾಯಕ ಇಲ್ಲಿಂದ ಬಿದ್ದು ಗತಿಸಿದನೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ದೇವರ ವಾರ್ಷಿಕ ಜಾತ್ರೆಯು ಫಾಲ್ಗುಣ ಮಾಸದ ಯುಗಾದಿ ಹಬ್ಬಕ್ಕೆ ಮುನ್ನ ಆರು ದಿನಗಳ ಕಾಲ ವಿಜೃಂಭಣೆಯಿಂದ ಜರಗುತ್ತದೆ.

**ಗೋಪಿನಾಥಂ:** ತಾಲೂಕು ಕೇಂದ್ರ ಕೊಳ್ಳೇಗಾಲದಿಂದ ಸುಮಾರು ೭೦ ಕಿ.ಮೀ. ದೂರದಲ್ಲಿರುವ ಗಡಿಯಂಚಿನ ಗ್ರಾಮವಾಗಿದ್ದು, ಮಲೆಮಹದೇಶ್ವರ ಬೆಟ್ಟದಾಚೆಗೆ ಇದೆ. ಮಲೆಮಹದೇಶ್ವರ ಬೆಟ್ಟದಿಂದ ಪಾಲಾರ್-ಪುದೂರು ಮಾರ್ಗವಾಗಿ ಈ ಗ್ರಾಮಕ್ಕೆ ಇರುವ ರಸ್ತೆಯು ಗಿರಿಕಾನನದ ನಡುವೆ ಇರುವುದರಿಂದ ಪ್ರಯಾಣಿಕರಿಗೆ ಮುದ ನೀಡುತ್ತಿದ್ದು, ಪ್ರವಾಸಿ ತಾಣವಾಗಿ ರೂಪುಗೊಳ್ಳಲು ಬೇಕಾದ ಸುಂದರ ಪರ್ವತಶ್ರೇಣಿ, ವರ್ಷದುದ್ದಕ್ಕೂ ತುಂಬಿರುವ ಕೆರೆ, ಸಸ್ಯಗಳು, ಗೋಪಿನಾಥಂ ಡ್ಯಾಂ, ಪಕ್ಷಿಗಳ ಕಲರವ, ಅಲ್ಲಿರುವ ಲಂಬಾಣಿ ಜನಪದರು, ಸಣ್ಣಪುಟ್ಟ ಗುಡಿಗಳು, ಗಮನ ಸೆಳೆಯುತ್ತವೆ. ಈ ಕೆರೆಯ ದಂಡೆಯ ಮೇಲೆ ಕಾಣಸಿಗುವ ಸೂರ್ಯೋದಯ, ಸೂರ್ಯಾಸ್ತಮ ದೃಶ್ಯಗಳನ್ನು ಕಣ್ತುಂಬಿಕೊಳ್ಳುವುದೇ ಒಂದು ವಿಶಿಷ್ಟ ಅನುಭವವಾಗಿರುತ್ತದೆ. ಈ ಊರಲ್ಲಿ ನಾರಾಯಣ ಪೆರುಮಾಳ ದೇವರ ಕಿರುಗುಡಿ ಇದೆ. ಆದರೆ ಅದಕ್ಕೂ ಮಿಗಿಲಾಗಿ ಊರ ಹೊರವಲಯದಲ್ಲಿ ಸುಮಾರು ೧೦ ಎಕರೆ ಪ್ರದೇಶವನ್ನು ಒಳಗೊಂಡಿರುವ ಇಟ್ಟಿಗೆಯ ಕೋಟೆಯ ಅವಶೇಷಗಳಿಂದಾಗಿ ಚಾರಿತ್ರಿಕ ಮಹತ್ವ ಪಡೆದಿದೆ. ದಂತಚೋರ ವೀರಪ್ಪನ್ ಈ ಗ್ರಾಮದವನು. **ಹೊಗೆನಕಲ್ ಜಲಪಾತ:** ಗೋಪಿನಾಥಂ ಗ್ರಾಮಕ್ಕೆ ೧೨ ಕಿ.ಮೀ. ದೂರದಲ್ಲಿರುವ ಹೊಗೇನಕಲ್ ಜಲಪಾತವು ಕರ್ನಾಟಕ ತಮಿಳುನಾಡು ಗಡಿ ಭಾಗದಲ್ಲಿದ್ದು, ಅದನ್ನು ಇಲ್ಲಿಂದ ಸುಲಭವಾಗಿ ತಲುಪಲು ಉತ್ತಮ ರಸ್ತೆ ಇದೆ. ನಾಗಮಲೈ: ಮಲೆಮಹದೇಶ್ವರರು ತಾತ್ಕಾಲಿಕವಾಗಿ ಇಲ್ಲಿ ತಂಗಿ ತಪಸ್ಸು ಮಾಡಿದ್ದರಿಂದ ಮಹತ್ವ ಪಡೆದಿರುವ ಈ ಬೆಟ್ಟವನ್ನು ಗೋಪಿನಾಥಂನಿಂದಲೂ ಕಾಡುಹಾದಿಯ ಮೂಲಕ ಕಾಲ್ನಡಿಗೆಯಲ್ಲಿ ತಲುಪಬಹುದಾಗಿದೆ. ಇಲ್ಲೊಂದು ಅಣೆಯನ್ನು ೧೯೮೩ರಲ್ಲಿ ನಿರ್ಮಿಸಲಾಗಿದ್ದು,

ಸಮೀಪದ ಬಯಲಲ್ಲಿ ಹಳೆಯ ತೂಬಿನ ಬಾಗಿಲ ಮೇಲೆ ಅಪ್ರಕಟಿತ ತಮಿಳು ಶಾಸನವೊಂದಿದೆ. ನಾಗಮಲ್ಯೆಗೆ ಚಾರಣಪ್ರಿಯರು ಮೇಲಿಂದ ಮೇಲೆ ಹೋಗುವುದು ಇತ್ತೀಚೆಗೆ ಸಾಮಾನ್ಯವಾಗಿದೆ.

**ಚಾಮರಾಜನಗರ(೬೦,೫೫೮):** ಇಂದು ಜಿಲ್ಲಾ ಕೇಂದ್ರವಾಗಿರುವ ಚಾಮರಾಜನಗರ(೧೯೯೭)ವು ೧೮೭೪ರಷ್ಟು ಹಿಂದಿನಿಂದಲೇ ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಒಂದು ತಾಲೂಕು ಕೇಂದ್ರವಾಗಿತ್ತು. ರಾಜಧಾನಿ ಬೆಂಗಳೂರಿನಿಂದ ದಕ್ಷಿಣಕ್ಕೆ ೨೦೦ ಕಿ.ಮೀ ದೂರದಲ್ಲಿರುವ ಇದನ್ನು ೧೮೨೮ಕ್ಕೆ ಮೊದಲು 'ಅರಕೊತಾರ, ಅರೆಕುತಾರ, ಅರೆಕೊಟ್ಟರಾ ಅರಕೊಟಾರ, ಅರಕುತಾರ ಎಂದೆಲ್ಲಾ ಕರೆಯುತ್ತಿದ್ದುದ್ದಕ್ಕೆ ಶಾಸನಾಧಾರಗಳಿದ್ದು, ಚಾಮರಾಜನಗರದ ೧೧೧೬ರ ಜೈನ ಶಾಸನದಲ್ಲಿ 'ಅರ ಕೊತಾರ' ದ ಮೊದಲ ಉಲ್ಲೇಖ ದೊರೆಯುತ್ತದೆ. ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೧–೧೮೬೮) ತಮ್ಮ ತಂದೆ ಚಾಮರಾಜ ಒಡೆಯರ (ಜನನ ೧೭೭೬) ಜನ್ಮಸ್ಥಳವಾದ 'ಅರಿಕೊತಾರ'ದಲ್ಲಿ ಅವರ ಹೆಸರಲ್ಲಿ ಚಾಮರಾಜೇಶ್ವರ ದೇವಾಲಯವನ್ನು ನಿರ್ಮಿಸಿ ಊರನ್ನು 'ಚಾಮರಾಜನಗರ' ಎಂದೇ ಕರೆದ ಅಂಶ ಚಾಮರಾಜನಗರದ ೧೮೨೮ರ ಶಾಸನದಿಂದ ಸ್ಪಷ್ಟವಾಗುತ್ತದೆ. ಇಲ್ಲಿಂದ ಈವರೆಗೆ ವಿವಿಧ ಕಾಲಾವಧಿಗೆ ಸೇರಿದ ೬೩ಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ. ಮೂಡಲಪುರ (ಚಾಮರಾಜನಗರ ತಾ.)ದ ೧೪೧೮ರ ಶಾಸನದಲ್ಲಿ ಅರಿಕೊತಾರದ ಚನ್ನರಾಜವೊಡೆಯರ ಉಲ್ಲೇಖವಿದೆ. ನೆರೆಯ ಮಲ್ಲಯ್ಯನಪುರದ ೧೫೩೨ರ ಶಾಸನದಿಂದ, ಅಚ್ಯುತರಾಯನ ಅಧಿಕಾರಿ ಪೆರುಮಾಳನು ಅರಕೊಟಾರದ ಪ್ರಭು ವೀರಭದ್ರನಾಯಕರಿಗೆ, ಅರಕೊಟಾರ ಸ್ಥಳಕ್ಕೆ ಸೇರಿದ ಮಲ್ಲಯ್ಯನಪುರವನ್ನು ಪ್ರಭುಗೊಡಗೆಯಾಗಿ ಉಂಬಳಿ ನೀಡಿದ್ದನ್ನು ದಾಖಲಿಸುತ್ತದೆ. ಉಡಿಗಾಲದ ೧೫೫೧ರ ಶಾಸನ ಅರಕೋತಾರದ ನಾಯಕನಿಗೆ ಇದನ್ನು ಉಂಬಳಿ ನೀಡಿದ್ದನ್ನು ದಾಖಲಿಸಿದೆ. ಇದೇ ರೀತಿ ಮೊದಲು ನೆರೆಯ ಸೋಮ ಸಮುದ್ರದ ೧೫೪೯ರ ಶಾಸನದಲ್ಲಿ ಅರಕೊಟ್ಟಾರದ ಪ್ರಭು ವೀರಭದ್ರನಾಯಕನ ಮಗ ಭಾಳಲೋಚನ ನಾಯಕನು ಸೋಮಸಮುದ್ರದ ಕೆರೆಯನ್ನು ದುರಸ್ತಿ ಮಾಡಿಸಿದ್ದ ವಿವರವಿದೆ. ಗಾಳಿಪುರದ ೧೬೬೭ರ ಇನ್ನೊಂದು ಶಾಸನ, ಅರಕೊಟಾರದ ಹಿರಿಚನ್ನರಾಜನ ಧರ್ಮಕಾರ್ಯವನ್ನು ಅರುಹುತ್ತದೆ. ಇದರಿಂದ ಹಿಂದೆ ಇದು ಸ್ಥಳೀಯ ನಾಯಕಪ್ರಭುಗಳ ಅಧೀನದಲ್ಲಿದ್ದ ಅಂಶ ವೇದ್ಯವಾಗುತ್ತದೆ. ಸುಮಾರು ೧೦ನೇಯ ಶತಮಾನಕ್ಕೆ ಸೇರಿದ ನೆರೆಯ ಗಣಿಗನೂರಿನ ಗಂಗ ಶಾಸನ ಅರಕುಟ್ಟಿ ಎಂಬ ಅಧಿಕಾರಿಯ ಧರ್ಮಕಾರ್ಯವನ್ನು ದಾಖಲಿಸಿದ್ದು, ಆ ವ್ಯಕ್ತಿಗೂ ಚಾಮರಾಜನಗರಕ್ಕಿರುವ 'ಅರೆಕೊತಾರ' ಎಂಬ ಪ್ರಾಚೀನ ಹೆಸರಿಗೂ ಏನಾದರೂ ಸಂಬಂಧವಿದೆಯೋ ಎಂದು ವಿವೇಚಿಸುವ ಅಗತ್ಯವಿದೆ.

ಚಾಮರಾಜನಗರದಲ್ಲಿರುವ ಹೊಯ್ಸಳರ ಕಾಲದ ವಿಜಯಪಾರ್ಶ್ವನಾಥ ಬಸದಿ, ಲಕ್ಷ್ಮೀಕಾಂತ ಹಾಗೂ ಭುಜಂಗೇಶ್ವರ ದೇವಾಲಯ; ಮೈಸೂರು ಅರಸರ ಕಾಲದ ಚಾಮರಾಜೇಶ್ವರ, ವೀರಭದ್ರ, ಹಾಗೂ ನಾರಾಯಣಸ್ವಾಮಿ ದೇವಾಲಯಗಳು; ಟಿಪ್ಪು ಕಾಲದ ಜಾಮಿಯಾ ಮಸೀದಿ; ಹಾಗೂ ನಂತರದ ಕಾಲಕ್ಕೆ ಸೇರಿದ ಸಂತಪಾಲ್ ಚರ್ಚುಗಳು ಉಲ್ಲೇಖಾರ್ಹವಾಗಿವೆ.

ಊರಿನ ಪ್ರಾಚೀನ ದೇಗುಲವಾದ ತ್ರಿಕೂಟ (ವಿಜಯ ಪಾರ್ಶ್ವನಾಥ) ಬಸದಿಯನ್ನು ಹೊಯ್ಸಳ ವಿಷ್ಣುವರ್ಧನನ ಸೇನಾನಿ ಇಮ್ಮಡಿ ಪುಣಿಸ ದಂಡನಾಯಕನು ೧೧೧೬ರಲ್ಲಿ ನಿರ್ಮಿಸಿ, ಅಣ್ಣ ಮಾರಯ್ಯನ ಕೆರೆಯ ಕೆಳಗೆ ಹತ್ತು ಖಂಡುಗ ಗದ್ದೆ, ಹೆಗ್ಗೆರೆ ಕೆಳಗೆ ಐದು ಖಂಡುಗ ಗದ್ದೆ ಎರಡು ಖಂಡುಗ ಹೊಲ, ಒಂದು ಖಂಡುಗ ತೋಟ, ಗಾಣದಲ್ಲಿ ಒಮ್ಮಾನ ಎಣ್ಣೆಯನ್ನು ದತ್ತಿ ಬಿಟ್ಟ ಅಂಶ ಅಲ್ಲೇ ಇರುವ ಶಿಲಾಶಾಸನದಿಂದ ವೇದ್ಯವಾಗುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನ, ಹೊಯ್ಸಳ ಮುಮ್ಮಡಿ ನರಸಿಂಹನ ಆಳ್ವಿಕೆಗೆ ಸೇರಿದ್ದು,

೧೨೮೧ರಲ್ಲಿ ಅರೆಕುತಾರದ ಇದೇ ಬಸದಿಗೆ ಊರ ಸಮಸ್ತ ಗೌಡವೊಕ್ಕಲು ನೀರುಕೂಲಿ, ಮನೆವಣ, ಮಂಡೆ ಗದ್ಯಾಣ ಮುಂತಾದ ತೆರಿಗೆಗಳಿಂದ ಬರುವ ಆದಾಯವನ್ನು ದತ್ತಿಬಿಟ್ಟಿದ್ದನ್ನು ದಾಖಲಿಸುತ್ತದೆ. ಇದೊಂದು ತ್ರಿಕೂಟಾಲಯವಾಗಿದ್ದು, ಮೂರು ಗರ್ಭಗೃಹಗಳಿಗೂ ಸೇರಿದಂತೆ ನಡುವೆ ಒಂದೇ ನವರಂಗವನ್ನು ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿರುವ ಈ ಬಸದಿಯು ನಿರಾಡಂಬರವಾಗಿದ್ದು, ಪ್ರಧಾನ ಗರ್ಭಗೃಹದಲ್ಲಿ ಪದ್ಮಾಸೀನ ಪಾರ್ಶ್ವನಾಥ ತೀರ್ಥಂಕರನ ಮುದ್ದಾದ ಶಿಲ್ಪವಿದೆ. ಇದನ್ನು ಬೇರೆಲ್ಲಿಂದಲೋ ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದೆಯೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ನವರಂಗದ ಕಂಬಗಳು ದುಂಡಾಕಾರದವಾಗಿದ್ದು, ನವರಂಗದಲ್ಲಿ ಧರಣೇಂದ್ರ, ಪದ್ಮಾವತಿ, ಹಾಗೂ ಕೂಷ್ಮಾಂಡಿನಿ ಯಕ್ಷ ಯಕ್ಷಿಯರ ಶಿಲ್ಪಗಳಿವೆ. ನವರಂಗದ ಮುಂದಣ ಸಭಾಮಂಟಪ ಹಾಗೂ ಮುಖಮಂಟಪಗಳು ವಿಜಯನಗರ ಕಾಲದ ಸೇರ್ಪಡೆಯಾಗಿದ್ದು, ವಿಜಯನಗರ ಕಾಲದ ಕಂಬಗಳನ್ನಿಲ್ಲಿ ಕಾಣಬಹುದಾಗಿದೆ. ಇದಕ್ಕೆದುರಾಗಿ ಉಯ್ಯಾಲೆ ಮಂಟಪವಿದ್ದು, ದೇವಾಲಯದ ಹಿಂಬದಿಯಲ್ಲಿ ಮಹಿಷಮರ್ಧಿನಿ, ದುರ್ಗಿ ಶಿಲ್ಪಗಳ ಜೊತೆಗೆ ನಿಶಿಧಿ ಕಲ್ಲನ್ನೂ ಸಂರಕ್ಷಿಸಿಡಲಾಗಿದೆ. ಸುಮಾರು ೧೪ನೇ ಶತಮಾನಕ್ಕೆ ಸೇರಿದ ಈ ನಿಶಿಧಿ ಶಾಸನ, ಅನಂತಕೀರ್ತಿದೇವರ ಶಿಷ್ಯ ಬೊಪ್ಪಯ್ಯನು ಸನ್ಯಾಸನ ವಿಧಿಯಿಂದ ನಿರ್ವಾಣ ಹೊಂದಿದ ಅಂಶವನ್ನು ದಾಖಲಿಸಿದೆ. ಅಲ್ಲೇ ಇರುವ ೧೫೧೮ರ ಇನ್ನೊಂದು ಶಾಸನ, ಅರಿಕೊತಾರ ಗ್ರಾಮದ ಮಹಾಪ್ರಭು ಕಾಮೆಯನಾಯ್ಕನ ಮಗ ವೀರಯ್ಯನಾಯಕನು ಮಣಚಣಹಳ್ಳಿಯನ್ನು ವಿಜಯನಾಥ ದೇವರಿಗೆ ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಈ ದೇವಾಲಯದ ಪ್ರಾಕಾರಕ್ಕಿರುವ ದ್ವಾರಮಂಟಪವು ನಂತರದ ಸೇರ್ಪಡೆಯಾಗಿದೆ. ಈ ಬಸದಿಯು ಮೈಸೂರು ಅರಸರ ಕಾಲದಲ್ಲಿ ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಗುಡಿಯು ಸುತ್ತಮುತ್ತ ಮನೆಗಳಿಂದ ಆವರಿಸಲ್ಪಟ್ಟಿದೆ.

ಇಲ್ಲಿಯ ಲಕ್ಷ್ಮೀಕಾಂತ ದೇವಾಲಯವೂ ಹೊಯ್ಸಳರ ಕಾಲದ ರಚನೆಯಾಗಿದ್ದು, ದೇವಾಲಯದ ಅಧಿಷ್ಠಾನ, ಭಿತ್ತಿಗಳ ಮೇಲೆ ತಮಿಳು ಶಾಸನವಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಲಕ್ಷ್ಮೀಕಾಂತನ ಸುಂದರ ಶಿಲ್ಪವಿದೆ. ಈ ದೇವಾಲಯದ ಶ್ರೀವೈಷ್ಣವರು ಗ್ರಾಮವೊಂದನ್ನು ಸ್ಥಾನಾಚಾರ್ಯನಿಗೆ ದತ್ತಿ ಕೊಟ್ಟ ಅಂಶವನ್ನು ಅದೇ ಗುಡಿಯ ಮೇಲಿರುವ ಮುಮ್ಮಡಿ ಬಲ್ಲಾಳನ ಕಾಲದ ೧೩೪೦ರ ತಮಿಳು ಶಾಸನ ತಿಳಿಸುತ್ತಿದ್ದು, ಆ ದಾನವನ್ನು ಪಡೆದಾತ 'ನಾನೂರ್ವರ್ ಮಂಟಪ' ಎಂಬ ಮಹಾಮಂಟಪವೊಂದನ್ನು ನಿರ್ಮಿಸಿದ್ದನ್ನೂ ದಾಖಲಿಸಿದೆ. ಈ ದೇವಾಲಯವೂ ಸಾಕಷ್ಟು ಜೀರ್ಣೋದ್ಧಾರಗೊಂಡಿದೆ. ಇಲ್ಲಿಯ ಭುಜಂಗೇಶ್ವರ ದೇವಾಲಯವು ಪುರಾತನದ್ದಾದರೂ, ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಸಾಧಾರಣ ಗುಡಿಯಾಗಿ ಉಳಿದಿದೆ. ಈ ದೇವಾಲಯಕ್ಕೆ ಅರಕೊಟಾರದ ಸಮಸ್ತ ಗೌಡರು ನೀರುಕೂಲಿ, ಮನೆವಣ, ಮಂಡೆಗದ್ಯಾಣ ಮುಂತಾದ ತೆರಿಗೆಗಳನ್ನು ದತ್ತಿ ನೀಡಿದ್ದನ್ನು ಅಲ್ಲೇ ಇರುವ ಮುಮ್ಮಡಿ ನರಸಿಂಹನ ಕಾಲದ ೧೨೮೧ರ ಶಾಸನವೊಂದು ದಾಖಲಿಸಿದೆ. ಈ ದೇವಾಲಯವು ಪುನ್ನಾಟ ಅರಸ ಭುಜಂಗನ ಹೆಸರಲ್ಲಿ ನಿರ್ಮಾಣಗೊಂಡಿದ್ದಿರಬಹುದಾದ ಸಾಧ್ಯತೆಯನ್ನು ವಿವೇಚಿಸುವ ಅಗತ್ಯವಿದೆ.

ಚಾಮರಾಜನಗರದ ಹೃದಯ ಭಾಗದಲ್ಲಿ ಸುಮಾರು ೨೩೨×೧೯೫ ಅಡಿ ಪ್ರದೇಶದಲ್ಲಿರುವ ಚಾಮರಾಜೇಶ್ವರ ದೇವಾಲಯ ಸಂಕೀರ್ಣವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ತಂದೆ ಚಾಮರಾಜ ಒಡೆಯರ ಸ್ಮರಣಾರ್ಥವಾಗಿ ನಿರ್ಮಿಸಿದ್ದು, ಅದನ್ನು ಸದರಿ ದೇವಾಲಯದ ಮುಖಮಂಟಪದಲ್ಲಿ ಹೊಂದಿಸಿರುವ ೧೮೨೮ರ ಶಾಸನವೂ ನಿವೇದಿಸುತ್ತದೆ. ಅದರಂತೆ ಮುಮ್ಮಡಿ ಕೃಷ್ಣರಾಜ ಒಡೆಯರು ಚಾಮರಾಜ ನಗರವನ್ನು ರೂಪಿಸಿ, ಊರ ನಡುವೆ ಸುವರ್ಣಕಳಸಯುಕ್ತ ದ್ವಾರಗೋಪುರವನ್ನುಳ್ಳ ವಿಶಾಲವಾದ ಪ್ರಾಕಾರದೊಳಗೆ ಚಾಮರಾಜೇಶ್ವರ ದೇವಾಲಯವನ್ನು ನಿರ್ಮಿಸಿ, ಚಾಮೇಶ್ವರ ಶಿವಲಿಂಗವನ್ನು ಪ್ರತಿಷ್ಠಾಪಿಸಿ, ಅದರ ಸುತ್ತ

ಹಲವಾರು ಕಿರುಗುಡಿಗಳನ್ನು ನಿರ್ಮಿಸಿದ್ದು ಗೊತ್ತಾಗುತ್ತದೆ. ಅಲ್ಲದೇ ಇದೇ ಗುಡಿಯ ಆವರಣದಲ್ಲಿ ಶ್ರೀದೇವಿ–ಭೂದೇವಿ ಸಮೇತವಿರುವ ನಾರಾಯಣನಿಗಾಗಿ ದೇವಾಲಯವನ್ನೂ ಹಾಗೂ ಚಾಮರಾಜೇಶ್ವರ ಗುಡಿಯ ಬಲಭಾಗದಲ್ಲಿ ಚಾಮುಂಡೇಶ್ವರಿ ಗುಡಿ, ಎಡಭಾಗದಲ್ಲಿ ತಾಯಿ ಕೆಂಪನಂಜಾಂಬ ಅಮ್ಮನವರ (ಪಾರ್ವತಿ) ಗುಡಿಗಳನ್ನೂ ಕಟ್ಟಿಸಿದ್ದು ಗೊತ್ತಾಗುತ್ತದೆ. ಈ ದೇವಾಲಯದ ಗೋಪುರದ ಒಳ ಮೇಲ್ಭಾಗದಲ್ಲಿರುವ ೧೮೨೭ರ ಶಾಸನ, ಚಾಮರಾಜೇಶ್ವರ ದೇವಾಲಯಕ್ಕೆ ಗೋಪುರ ಕಟ್ಟಿಸಿ ಸುವರ್ಣ ಕಳಸ ಪ್ರತಿಷ್ಠೆ ಮಾಡಿಸಿದ್ದನ್ನು ದಾಖಲಿಸುತ್ತದೆ. ಈ ದೇವಾಲಯದ ನವರಂಗ, ಮುಖಮಂಟಪಗಳ ಭಿತ್ತಿಯ ಮೇಲೆ ಪಾರ್ವತಿಕಲ್ಯಾಣ, ಮಹಿಷಮರ್ಧಿನಿ, ದುರ್ಗಿಯರ ವರ್ಣಚಿತ್ರಗಳಿವೆ. ಇಲ್ಲಿರುವ ಚಂಡಿಕೇಶ್ವರನ ಕಿರುಗುಡಿಯಲ್ಲಿ ಭಕ್ತಾದಿಗಳು ದೇವರ ದರ್ಶನದ ವರದಿ ಸಲ್ಲಿಸುವ ಸಂಪ್ರದಾಯ ಇಂದಿಗೂ ಇದೆ.

ದ್ರಾವಿಡ ಶಿಖರವನ್ನು ಹೊಂದಿರುವ ಚಾಮರಾಜೇಶ್ವರ ದೇವಾಲಯದ ಪ್ರಧಾನ ಗರ್ಭಗೃಹದಲ್ಲಿರುವ ಶಿವಲಿಂಗವು ಮೂಲತಃ ಶೃಂಗೇರಿಯ ನರ್ಮದಾ ಲಿಂಗವೆಂದೂ, ಅದನ್ನು ಶೃಂಗೇರಿ ಗುರುಗಳ ಆಶೀರ್ವಾದದೊಂದಿಗೆ ಇಲ್ಲಿಗೆ ತಂದು ಪ್ರತಿಷ್ಠಾಪಿಸಿ, ಅದಕ್ಕೆ ಚಾಮರಾಜೇಶ್ವರ ಎಂದು ಕರೆಯಲಾಯಿತೆಂದೂ ತಿಳಿದು ಬರುತ್ತದೆ. ೧೮೨೭ರಲ್ಲಿ ಈ ದೇವರ ಸೇವೆಗೆಂದು ಶೃಂಗೇರಿ ಮಠದವರು ರಥವನ್ನು ನೀಡಿದ ಅಂಶವನ್ನು ಅಲ್ಲೇ ಇರುವ ೧೮೨೭ರ ಇನ್ನೊಂದು ಶಾಸನ ತಿಳಿಸುತ್ತದೆ. ಗರ್ಭಗೃಹದ ಮುಂದಣ ಅರ್ಧಮಂಟಪವು ಹಿರಿದಿದ್ದು, ವಿಶಾಲವಾದ ನವರಂಗದ ಕಂಬಗಳು ಆಕರ್ಷಕವಾಗಿದ್ದು, ಚಿತ್ತಾಕರ್ಷಕ ಉಬ್ಬುಶಿಲ್ಪಗಳಿಂದ ಕೂಡಿವೆ. ನವರಂಗದ ದಕ್ಷಿಣ ಭಾಗದ ಕೋಷ್ಟಗಳಲ್ಲಿ ರಾಜಕುಟುಂಬದ ಸದಸ್ಯರ ಪ್ರತಿಮೆಗಳಿವೆ. ನವರಂಗದ ಒಳಾಂಗಣದಲ್ಲಿ ಸೂರ್ಯ, ಚಂದ್ರರ ಸುಂದರ ಶಿಲ್ಪಗಳಿವೆ. ಚಾಮರಾಜೇಶ್ವರ ಗುಡಿಯ ಬಲಬದಿಯ ಕಿರುಗುಡಿಯಲ್ಲಿ ಮುಮ್ಮಡಿ ಕೃಷ್ಣರಾಜರು, ನಾಲ್ವರು ರಾಣಿಯರು ಹಾಗೂ ದಳವಾಯಿ ನಂಜರಾಜನ ಲೋಹದ ಅಂಜಲಿಬದ್ಧ ಭಕ್ತ ಪ್ರತಿಮೆಗಳಿದ್ದು, ಪೀಠದ ಮೇಲೆ ಅವರವರ ಹೆಸರುಗಳಿವೆ.

ಈ ದೇವಾಲಯದ ಬಲಭಾಗದಲ್ಲಿರುವ ಚಾಮುಂಡೇಶ್ವರಿ ಗುಡಿಯ ಗರ್ಭಗುಡಿಯಲ್ಲಿ ಮೈಸೂರರಸರ ಕುಲದೇವತೆಯಾದ ಚಾಮುಂಡೇಶ್ವರಿಯ ಶಿಲ್ಪವಿದೆ. ಮುಂದಣ ನವರಂಗ ಹಾಗೂ ಮುಖಮಂಟಪಗಳ ಭಿತ್ತಿಯನ್ನೂ ಸಾಂಪ್ರದಾಯಿಕ ಮೈಸೂರು ಶೈಲಿಯಲ್ಲಿ ರಚಿಸಿರುವ ಚಾಮುಂಡೇಶ್ವರಿ ಹಾಗೂ ದುರ್ಗಿಯರ ವರ್ಣಚಿತ್ರಗಳಿಂದ ಅಲಂಕರಿಸಲಾಗಿದೆ. ಪ್ರಾಕಾರದ ಒಳ ಕೈಸಾಲೆ ಮಂಟಪದಲ್ಲಿರುವ ಕಿರುಗುಡಿಗಳಲ್ಲಿ ಶಿವಲಿಂಗ ಹಾಗೂ ವಿವಿಧ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಪ್ರಾಕಾರದ ದಕ್ಷಿಣ ಭಾಗದಲ್ಲಿ ೬೩ ಪುರಾತನರ ಶಿಲ್ಪಗಳಿದ್ದರೆ, ಉತ್ತರ ಭಾಗದವುಗಳಲ್ಲಿ ಶಿವನ ಪಂಚವಿಂಶತಿ (೨೫) ಲೀಲಾಮೂರ್ತಿಗಳಿದ್ದು, ಪಶ್ಚಿಮ ಭಾಗದಲ್ಲಿ ಸಹಸ್ರ ಲಿಂಗಯುಕ್ತವಾದ ಸಾಲು ಶಿವಲಿಂಗಗಳಿವೆ. ಇಲ್ಲಿಯ ಕೆಲವು ಶಿವಲೀಲಾಮೂರ್ತಿಗಳು ಶಿಲ್ಪಿಯ ಕಲಾನೈಪುಣ್ಯತೆಗೆ ಉತ್ತಮ ನಿದರ್ಶನವಾಗಿವೆ. ಪ್ರಾಕಾರದ ಸುತ್ತಗಲಕ್ಕೂ ಮೇಲ್ತುದಿಯನ್ನೂ ಅಲಂಕರಿಸಿರುವ ಬಹುಕೋನಾಕಾರದ ವಿನ್ಯಾಸವುಳ್ಳ ಕಿರುಕೋಷ್ಟಗಳಲ್ಲಿ ಸುಡಾವೆ ಮಣ್ಣಿನಿಂದ ಮಾಡಿದ ಶಿವನ ಲೀಲಾಮೂರ್ತಿ ಹಾಗೂ ೨೫ ಬಗೆಯ ಗಣೇಶ ಮೂರ್ತಿಗಳನ್ನು ಕಲಾತ್ಮಕವಾಗಿ ರೂಪಿಸಲಾಗಿದ್ದು, ಪ್ರತಿಮಾಶಾಸ್ತ್ರದ ಅಧ್ಯಯನಕ್ಕೆ ಉತ್ತಮ ಮಾದರಿಗಳಾಗಿವೆ. ಈ ಎಲ್ಲಾ ಕಿರು ಮೂರ್ತಿಗಳ ನಾಮಾಂಕಿತವನ್ನು ಬುಡದಲ್ಲಿ ಕಾಣಿಸಲಾಗಿದೆ. ಈ ದೇವರ ಸೇವೆಗೆಂದು ಮುಮ್ಮಡಿ ಕೃಷ್ಣರಾಜರು ಉಮ್ಮತ್ತೂರು, ನವಿಲೂರು, ಮೂಡ್ಲಗ್ರಹಾರ, ಬೇಡರಪುರ ಕಟ್ಟೇಪುರ, ಶಿವಪುರ ಯಲಕ್ಕೂರು, ಹರದನಹಳ್ಳಿ, ಸಪ್ಪೆಯನಪುರ, ಹಂಡ್ರಕನಹಳ್ಳಿ, ಬೆಂಡರವಾಡಿ, ಮುತ್ತಿಗೆ ಮತ್ತು ಹೆಗ್ಗೋಠಾರ ಎಂಬ ೧೩ ಹಳ್ಳಿಗಳಿಂದ ಆದಾಯವಾಗಿ ಬರುತ್ತಿದ್ದ ೪,೯೦೦ ಕಂಠಿ ರಾಯಿ ವರಾಹವನ್ನು

ಈ ದೇವರ ಸೇವೆಗೆಂದು ಉಂಬಳಿ ನೀಡಿದ್ದು, ಈ ಅಂಶವನ್ನು ಅಲ್ಲೇ ಇರುವ ೧೮೨೮ರ ಶಾಸನ ದಾಖಲಿಸಿದೆ. ಈ ದೇವರ ರಥೋತ್ಸವು ಪ್ರತೀ ವರ್ಷ ಆಷಾಡ ಮಾಸದ ಶುಕ್ಲ ಪೂರ್ಣಿಮೆಯಂದು ಮಧ್ಯಾಹ್ನ ಬಹು ವಿಜೃಂಭಣೆಯಿಂದ ಜರುಗುತ್ತದೆ.

ಈ ದೇವಾಲಯ ಪರಿಸರದಲ್ಲಿರುವ ಸುಮಾರು ೫೦ಕ್ಕೂ ಹೆಚ್ಚು ಶಾಸನಗಳು ಮುಮ್ಮಡಿ ಕೃಷ್ಣರಾಜರು, ರಾಣಿಯರು, ರಾಣಿವಾಸದವರು ಹಾಗೂ ಆಸ್ಥಾನಿಕರು ಈ ದೇವಾಲಯಕ್ಕೆ ಸಂಬಂಧಿಸಿದಂತೆ, ಮಾಡಿದ ಧರ್ಮಕಾರ್ಯಗಳನ್ನು ಬಿಂಬಿಸುತ್ತವೆ. ಅದರಲ್ಲೂ ವಿವಿಧ ಗುಡಿಗಳಿಗೆ ಹಿತ್ತಾಳೆ ಬಾಗಿಲ ಚೌಕಟ್ಟು-ಗುಬ್ಬಿ ಕದಗಳ ಸೇವೆಯ ಉಲ್ಲೇಖವು ಸುಮಾರು ೩೬ ಶಾಸನಗಳಲ್ಲಿ ಕಂಡು ಬರುತ್ತದೆ. ಚಾಮರಾಜೇಶ್ವರ ದೇವಾಲಯ ಸಂಕೀರ್ಣದ ಹಿಂಭಾಗದಲ್ಲಿ ಅರಮನೆ ಪ್ರದೇಶ ಎಂದು ಕರೆಯಲಾಗುವ ಪ್ರದೇಶದಲ್ಲಿರುವ 'ಚಾಮರಾಜ ಜನ್ಮ ಮಂಟಪ'ವನ್ನು ಮುಮ್ಮಡಿ ಕೃಷ್ಣರಾಜರು ತಮ್ಮ ತಂದೆ ಚಾಮರಾಜ ಒಡೆಯರು ಜನಿಸಿದ ಸ್ಥಳದಲ್ಲಿ ಅವರ ನೆನಪಾಗಿ ನಿರ್ಮಿಸಿದ್ದು, ಶಾಸನವನ್ನೂ ಬರೆಸಿದ್ದಾರೆ. ಅದರ ಭಿತ್ತಿಯನ್ನು ಸಾಂಪ್ರದಾಯಿಕ ಮೈಸೂರು ಶೈಲಿಯ ವೈವಿಧ್ಯಮಯ ಕಥನವನ್ನಾಧರಿಸಿದ ಪೌರಾಣಿಕ ವರ್ಣಚಿತ್ರ, ಅನ್ನಪೂರ್ಣೇಶ್ವರಿ, ಮಹಿಷಮರ್ಧಿನಿ, ಮುಂತಾದ ದೇವತಾ ವರ್ಣಚಿತ್ರಗಳಿಂದ ಅಲಂಕರಿಸಲಾಗಿದೆಯಾದರೂ ಇಂದು ಶಿಥಿಲಾವಸ್ಥೆಯಲ್ಲಿದ್ದು ಸಂರಕ್ಷಿಸುವ ಅಗತ್ಯವಿದೆ.

ಹಳೆ ಬಸ್‌ನಿಲ್ದಾಣದ ಬಳಿಯಿರುವ ವೀರಭದ್ರ ದೇವಾಲಯವು ಇನ್ನೊಂದು ಪ್ರಾಚೀನ ಗುಡಿಯಾಗಿದೆ. ಅಲ್ಲೇ ಮಹಾದ್ವಾರದ ಜಗಲಿಯ ಮೇಲಿರುವ ೧೬೦೫ರ ಶಾಸನ, ಅರೆಕುತಾರ ಸ್ಥಳದ ಚಂದ್ರಶೇಖರ ಒಡೆಯ ಹಾಗೂ ಕಮ್ಮರವಳ್ಳಿಯ ಮಲರಾಜವೊಡೆಯರು ಸಂಯುಕ್ತವಾಗಿ 'ಹಂಗರೆಯಪುರ' ಗ್ರಾಮವನ್ನು ವೀರಭದ್ರ ದೇವರ ಸೇವೆಗೆಂದು ಸರ್ವಮಾನ್ಯವಾಗಿ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಗರ್ಭಗುಡಿಯಲ್ಲಿ ವೀರಭದ್ರನ ಶಿಲ್ಪವಿದ್ದು, ನವರಂಗದ ಕಂಬಗಳು ತಾಂಡವಶಿವ, ವೀರಭದ್ರ, ಗಣಪತಿ, ಬೇಡರ ಕಣ್ಣಪ್ಪ, ಷಣ್ಮುಖ, ತುಂಬುರ, ಭಿಕ್ಷಾಟನಾ ಶಿವ ಮುಂತಾದ ದೇವಾನುದೇವತಾ ಕೆತ್ತನೆಗಳೊಂದಿಗೆ ಲೌಕಿಕ ವಿಷಯಗಳನ್ನೊಳಗೊಂಡ ವೈವಿಧ್ಯಮಯ ಉಬ್ಬುಶಿಲ್ಪಗಳಿಂದ ಕೂಡಿವೆ. ವೀರಭದ್ರನ ಗುಡಿಯ ಬಲಕ್ಕಿರುವ ಭದ್ರಕಾಳಿಯ ಗುಡಿಗೆ ಶಿಖರವಿದ್ದು, ಅರ್ಧಮಂಟಪಕ್ಕೆ ತೋರಣಾಲಂಕಾರವಿದ್ದು, ನವರಂಗದ ಕಂಬಗಳೂ ಆಕರ್ಷಕವಾಗಿವೆ. ಈ ದೇವಾಲಯವು ಮೂಲದಲ್ಲಿ ಜೈನಬಸದಿಯಾಗಿತ್ತೆಂಬುದಕ್ಕೆ ಸಾಕಷ್ಟು ಕುರುಹುಗಳಿವೆ.

ಗುಂಡ್ಲುಪೇಟೆ ರಸ್ತೆಯಲ್ಲಿರುವ ನಾರಾಯಣಸ್ವಾಮಿ ದೇವಾಲಯವೂ ಮುಮ್ಮಡಿ ಕೃಷ್ಣರಾಜರ ಕಾಲದ ರಚನೆಯಾಗಿದ್ದು, ಪ್ರಾಕಾರ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ನಾರಾಯಣ ಶಿಲ್ಪವಿದೆ. ಈ ದೇವಾಲಯದ ಆಗಮಿಕರ ಬಳಿಯಿರುವ ೧೬೭೫ರ ತಾಮ್ರಶಾಸನ, ಚಿಕ್ಕದೇವರಾಜವೊಡೆಯರು ತಮ್ಮ ತಂದೆ ದೊಡ್ಡದೇವರಾಜ ಒಡೆಯರಿಗೆ ವೈಕುಂಠ ಪ್ರಾಪ್ತಿಯಾಗಲೆಂದು ತೆ-ರಕಣಾಂಬಿ ಸ್ಥಳಕ್ಕೆ ಸೇರಿದ ಕಬ್ಬಿಗನಪುರ ಹಾಗೂ ಹುಲ್ಲಾನ ಗ್ರಾಮಗಳನ್ನು ಅಗ್ರಹಾರವನ್ನಾಗಿಸಿ, ಚಿಕ್ಕದೇವರಾಜಪುರ ಹಾಗೂ ಕೃಷ್ಣಾಪುರ ಎಂಬ ಅಭಿದಾನವನ್ನು ನೀಡಿ ಶ್ರೀ ಕೃಷ್ಣದೀಕ್ಷಿತರಿಗೆ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲದೇ ದತ್ತಿ ಬಿಟ್ಟ ಗ್ರಾಮಗಳ ಗಡಿಯನ್ನು ಹೇಳುತ್ತ ಶೀಲವಂತಪುರದ ವಡ್ಡರಗುಡಿ, ನಾಯಿಂದರ ಕಟ್ಟೆ, ನಾಯಿಂದರ ಗುಡಿಗಳನ್ನು ಸಾಂದರ್ಭಿಕವಾಗಿ ಹೆಸರಿಸಲಾಗಿದೆ. ಇತ್ತೀಚೆಗೆ ಊರ ನಡುವೆ ಜೈನಕೇರಿಯಲ್ಲಿ, ಇರುವ ಪಾರ್ಶ್ವನಾಥ ಬಸದಿಯ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದ್ದು, ಅಮೃತ ಶಿಲೆಯನ್ನಿಲ್ಲಿ ಧಾರಾಳವಾಗಿ ಬಳಸಲಾಗಿದೆ.

ಚಾಮರಾಜೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿರುವ ಈಶ್ವರ ದೇವಾಲಯದ ಗರ್ಭಗೃಹ ಅಂತರಾಳಗಳಷ್ಟೇ ಉಳಿದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಗುಡಿಯ ಆವರಣದಲ್ಲಿ ವೀರಗಲ್ಲು ಹಾಗೂ ರಾವಳೇಶ್ವರ ಶಿಲ್ಪಗಳಿವೆ. ನೂತನ ಬಸ್‌ಸ್ಟಾಂಡ್ ಬಳಿಯಿರುವ ಪ್ರಾಚೀನ ಕೊಳವನ್ನು ಸಂರಕ್ಷಿಸಲಾಗಿದ್ದು, ಬಳಿಯ ಆಲದ ಮರದ ಬುಡದಲ್ಲಿ ದಶಶಿರವನ್ನುಳ್ಳ ರಾವಳೇಶ್ವರನ ಸುಂದರ ಶಿಲ್ಪವಿದೆ. ಬದಿಯಲ್ಲೇ ಹನುಮಂತನ ಗುಡಿಯೂ ಇದೆ.

ಊರಲ್ಲಿರುವ ಮೂರು ಮಸೀದಿಗಳಲ್ಲಿ ಪೇಟೆಬೀದಿಯ ಜಾಮಿಯಾ ಮಸೀದಿ ಆಕರ್ಷಕವಾಗಿದ್ದು, ಟೀಪು ಕಾಲದ್ದೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಇಲ್ಲಿಯ ಸಂತ ಪಾಲ್ ಚರ್ಚು ೧೯೬೬ರಲ್ಲಿ ನಿರ್ಮಾಣಗೊಂಡಿದ್ದು, ಸರಳವಾಗಿದ್ದರೂ ಆಕರ್ಷಕವಾಗಿದೆ. ಊರಲ್ಲಿ ಶ್ರೀ ರಾಮಮಂದಿರ, ಸುತ್ತೂರು ಶಾಖಾಮಠ, ಶ್ರೀ ರಾಘವೇಂದ್ರಮಠ, ಲಕ್ಷ್ಮೀದೇವಿ ಗುಡಿ, ಮಾರಮ್ಮನ ಗುಡಿ, ಮುಂತಾದ ನವೀನ ಗುಡಿಗಳಿವೆ. ಚಾಮರಾಜನಗರಕ್ಕೆ ಅನತಿ ದೂರದಲ್ಲಿರುವ ಸಿದ್ಧರಬೆಟ್ಟವು ಧಾರ್ಮಿಕ ಕೇಂದ್ರವಾಗಿದ್ದು, ಬೆಟ್ಟದ ಮೇಲೆ ಸಿದ್ಧೇಶ್ವರ ದೇವಾಲಯವಿದೆ. **ಹರಳುಕೋಟೆ:** ರಾಮಸಮುದ್ರ ಎಂದೂ ಕರೆಯಲ್ಪಡುತ್ತಿದ್ದ ಇದಿಂದು ಚಾಮರಾಜನಗರ ಪುರಸಭೆಯ ವ್ಯಾಪ್ತಿಗೊಳಪಟ್ಟಿದೆ. ಪಟ್ಟಣದಿಂದ ಸುಮಾರು ಐದು ಕಿ.ಮೀ. ಅಂತರದಲ್ಲಿರುವ ಹರಳುಕೋಟೆಯನ್ನು ಪೌರಾಣಿಕವಾಗಿ ಅರ್ಜುನನ ರಾಣಿ ಚಿತ್ರಾಂಗದೆ ಇದ್ದ ಮಣಿಪುರ, ಬಭ್ರುವಾಹನ ಕ್ಷೇತ್ರವೆಂದೂ ಸ್ಥಳೀಯವಾಗಿ ನಂಬಲಾಗಿದೆ. ಚಾರಿತ್ರಿಕವಾಗಿ ಈ ಊರಿನ ಪ್ರಾಚೀನತೆಯನ್ನು ಹೊಯ್ಸಳರ ಕಾಲಕ್ಕೆ ಗುರುತಿಸಬಹುದಾಗಿದ್ದು, ಇಲ್ಲಿಯ ಜನಾರ್ದನ ದೇವಾಲಯದ ಬಳಿಯಿರುವ ಶಾಸನ, ಹೊಯ್ಸಳ ಒಂದನೆಯ ನರಸಿಂಹನು ೧೧೬೮ರಲ್ಲಿ ಅಲ್ಲೊಂದು ಅಗ್ರಹಾರವನ್ನು ಸ್ಥಾಪಿಸಿದ ಅಂಶವನ್ನು ದಾಖಲಿಸುತ್ತಿದ್ದು, ಶಾಸನದಲ್ಲಿ ಊರ ಹೆಸರು, 'ಹಟ್ಟಲೂರು ಕೇರಳಾಂತಕ ಚತುರ್ವೇದಿ ಮಂಗಲ' ಎಂದು ದಾಖಲಾಗಿದೆ. ಗುಂಡ್ಲುಪೇಟೆಯ ೧೩೮೨ರ ಶಾಸನದಲ್ಲಿ ಹಟಾಲಕೋಟೆ ಎಂಬ ಉಲ್ಲೇಖ ದೊರೆಯುತ್ತದೆ. ತ್ರಿಯಂಬಕಪುರದ ೧೪೧೮ರ ರ ತಾಮ್ರಶಾಸನದಲ್ಲಿ 'ಹಟ್ಟಲಕೋಟೆ' ಎಂದು ಉಲ್ಲೇಖಿತಗೊಂಡಿದ್ದು, ಹರಳುಕೋಟೆಯ ೧೫೨೩ರ ಇನ್ನೊಂದು ಶಾಸನದಲ್ಲಿ ಊರ ಹೆಸರನ್ನು 'ಹಟ್ಟಲಕೋಟೆ' ಎಂದು ಉಲ್ಲೇಖಿಸಲಾಗಿದ್ದು, ಹಟ್ಟಲಕೋಟೆ ನಾಮಪದವು ಮುಂದೆ 'ಹರಳಕೋಟೆ' ಎಂದು ರೂಪಾಂತರಗೊಂಡಿದೆ.

ಚಾಮರಾಜನಗರದಿಂದ ರಾಮಸಮುದ್ರ ಮಾರ್ಗದಲ್ಲಿ ತೆರಳಿ, ರಾಮಸಮುದ್ರ ಗ್ರಾಮದ ಹೊರ ಅಂಚಲ್ಲಿ ಸುಮಾರು ಮೂರು ಕಿ.ಮೀ. ಮಣ್ಣಿನ ರಸ್ತೆಯಲ್ಲಿ ಸಾಗಿ ಹರಳುಕೋಟೆಯ ದೇವಾಲಯ ಪರಿಸರವನ್ನು ತಲುಪಬಹುದಾಗಿದೆ. ಅಲ್ಲಿರುವ ಮೂರ್‍ನಾಲ್ಕು ದೇವಾಲಯಗಳಲ್ಲಿ ಜನಾರ್ದನ ದೇವಾಲಯವು ಹೊಯ್ಸಳ ಒಂದನೆಯ ನರಸಿಂಹನ ಕಾಲದ (೧೧೬೭)ರಚನೆಯಾಗಿದೆ. ಹಟ್ಟಲೂರಿನ ಪ್ರಭು ನಾಗದೇವನ ಮಗನಾದ ಸಾಮಂತ ಮಲ್ಲಿದೇವ ಮಾರಯ್ಯನು ಈ ವಿಷ್ಣು ದೇವಾಲಯವನ್ನು ನಿರ್ಮಿಸಿ ಎಣ್ಣೆನಾಡಲ್ಲಿದ್ದ ಹಟ್ಟಲ ತಿಬ್ಬನಹಳ್ಳಿ ಬೆಳ್ಳಿಗೆರೆಗಳನ್ನು ಕೇಶವ ದೇವರಿಗೆ ದತ್ತಿ ಬಿಟ್ಟ ವಿವರವನ್ನು ಅಲ್ಲೇ ಇರುವ ೧೧೬೮ರ ಶಾಸನವು ಒದಗಿಸುತ್ತದೆ. ಇಲ್ಲಿಯ ಜನಾರ್ದನ ದೇವಾಲಯವು ಪೂರ್ವಾಭಿಮುಖನಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿರುವ ಜನಾರ್ದನನ ಶಿಲ್ಪವನ್ನು ಶಾಸನದಲ್ಲಿ 'ಕೇಶವ ದೇವ' ಎಂದು ಕರೆಯಲಾಗಿದೆ. ನವರಂಗದ ಕಂಬಗಳು ಬಹುಕೋನದವಾಗಿದ್ದು, ಆಕರ್ಷಕ ಶಿಲ್ಪಗಳಿಂದ ಕೂಡಿವೆ. ಈ ದೇವಾಲಯದ ಬಲಹಿಂಭಾಗದಲ್ಲಿರುವ ಲಕ್ಷ್ಮೀ ಗುಡಿಯು ಪಾಳು ಬಿದ್ದಿದ್ದು, ಮುಕ್ಕಾದ ಲಕ್ಷ್ಮೀ ಶಿಲ್ಪವಷ್ಟೇ ಇಂದಿದ್ದು, ಬದಿಯಲ್ಲೇ ಇರುವ ಗುರುಕುಲವೆಂದು ಗುರುತಿಸಬಹುದಾದ ಕಟ್ಟಡ ಶಿಥಿಲಾವಸ್ಥೆಯಲ್ಲಿದೆ. ಇಲ್ಲಿಯ ಆಂಜನೇಯ ಗುಡಿ ಬಳಿಯಿರುವ ಸುಮಾರು ೧೪ನೆಯ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಬಹಳ

ತ್ರುಟಿತಗೊಂಡಿದ್ದು, ಒಂದನೆಯ ಬುಕ್ಕನ ಕುಮಾರ, ಚಿಕ್ಕಕಂಪಣ ಒಡೆಯನನ್ನು ಹೆಸರಿಸಿದ್ದು, ಉಳಿದ ವಿವರಗಳು ಹಾಳಾಗಿದೆ. ಇಲ್ಲಿಯ ೧೫೨೩ರ ಶಾಸನ ವಿಜಯನಗರದ ಅರಸ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ನೀಡಲ್ಪಟ್ಟಿದ್ದು, ರಾಜ್ಯಪಾಲ ಸಾಳುವ ಗೋವಿಂದರಾಜನ ಅನುಮತಿಯೊಂದಿಗೆ ಸ್ಥಳೀಯ ಅಧಿಕಾರಿ ಜಡೆಯಾರು ಮೊದಲಿಯಾರು ಎಂಬ ಮಾಗಣಿಕಾರನು ತನ್ನ ಮಾಗಣಿಯ ಹಟ್ಟಲಕೋಟೆ ಗ್ರಾಮದಲ್ಲಿ ವೀರಭದ್ರ ದೇವಾಲಯವನ್ನು ನಿರ್ಮಿಸಿ ಹಟ್ಟಲ, ಮರಳ್ಳಿ, ಹೆಬ್ಬಸೂರು, ಮೊರಗದಳ್ಳಿ ಹಾಗೂ ತಿಬ್ಬಹಳ್ಳಿಗಳಲ್ಲಿ ಸ್ಥಾನಿಕ ಅಲ್ಲಪ್ಪನಿಗೆ ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಆದರೆ ಇಂದು ಪೂರ್ಣ ಜೀರ್ಣೋದ್ಧಾರಗೊಂಡಿರುವ ಕಿರುಗುಡಿಯಲ್ಲಿ ವೀರಭದ್ರನ ಶಿಲ್ಪವಿದೆ. ಇಲ್ಲಿಯ ಮಾರವ್ವನ ಗುಡಿ ಇಂದು ಬಹಳ ಜನಪ್ರಿಯವಿದ್ದು, ಗುಡಿಯ ಆಸುಪಾಸಲ್ಲಿ ಗಣಪತಿ, ರಾವಳೇಶ್ವರ, ದುರ್ಗಾ ಶಿಲ್ಪ ಹಾಗೂ ವೀರಗಲ್ಲುಗಳಿವೆ. ಸಮೀಪದ ಗದ್ದೆ ಬಯಲಲ್ಲೂ ಮುಕ್ಕಾದ ದುರ್ಗಾಶಿಲ್ಪ ಹಾಗೂ ಮೂರ್‍ನಾಲ್ಕು ವೀರಗಲ್ಲುಗಳಿವೆ. ಇದು ಹಿಂದೆ ಇಲ್ಲಿ ನಡೆದಿರಬಹುದಾದ ಸಂಘರ್ಷವನ್ನೂ ಸೂಚಿಸುವಂತಿದೆ. ಈ ಗುಡಿಗೆ ಹೋಗುವ ಮಾರ್ಗದಲ್ಲಿರುವ ರಾಮಸಮುದ್ರದ ಹೊರವಲಯದಲ್ಲಿರುವ ಕಿರುಕೆರೆಯ ದಂಡೆಯ ಮೇಲೆ ಅರ್ವಾಚಿನ ಕಾಲಕ್ಕೆ ಸೇರಿದ ಈಶ್ವರನ ಗುಡಿ ಇದೆ.

**ಚಿಕ್ಕಾಲೂರು(೩,೧೮೩):** ತಾಲೂಕು ಕೇಂದ್ರ ಕೊಳ್ಳೇಗಾಲದಿಂದ ೨೬ ಕಿ.ಮೀ. ದೂರದಲ್ಲಿರುವ ಇದು ಸಿದ್ಧಪ್ಪಾಜಿಯ ಗದ್ದುಗೆಯಿಂದಾಗಿ ಪ್ರಾಮುಖ್ಯತೆ ಪಡೆದಿದೆ. ಬೊಪ್ಪೇಗೌಡನಪುರದ ಮಂಟೇಸ್ವಾಮಿಯ ಇಬ್ಬರು ಹಿರಿಯ ಶಿಷ್ಯರಲ್ಲೊಬ್ಬನಾದ ಸಿದ್ಧಪ್ಪಾಜಿಯು ಮಂಟೇಸ್ವಾಮಿ ಪರಂಪರೆಯನ್ನು ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆ ಹಾಗೂ ನೆರೆಯ ತಮಿಳು ನಾಡಿನಲ್ಲೂ ಪ್ರಚಾರ ಮಾಡುವ ಮೂಲಕ ಅಸಂಖ್ಯಾತ ಶಿಷ್ಯರನ್ನು ಹೊಂದಿದ್ದು, ಅದರಿಂದಾಗಿ ದೂರದೂರುಗಳಿಂದ ಅಸಂಖ್ಯಾತ ಭಕ್ತಾದಿಗಳು ಪ್ರತೀ ವರ್ಷ ಮಕರ ಸಂಕ್ರಾಂತಿ ನಂತರದ ಪೌರ್ಣಿಮೆಯಲ್ಲಿ ಆರು ದಿನ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

**ತಮ್ಮಡಿಹಳ್ಳಿ (೨,೬೮೮):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೧೫ ಕಿ.ಮೀ. ದೂರದಲ್ಲಿರುವ ಇದು ೧೨ನೇ ಶತಮಾನಕ್ಕೆ ಸೇರಿದ ಹೊಯ್ಸಳ ತಮಿಳು ಶಾಸನದಲ್ಲಿ 'ತಮ್ಮಡಿಪಳ್ಳಿ' ಎಂದೇ ಉಲ್ಲೇಖಿತಗೊಂಡಿದೆ. ಊರ ಸೋಮೇಶ್ವರ ಗುಡಿ ಮುಂದಿರುವ ೧೧೩೫ರ ತಮಿಳು ಶಾಸನ, ಸಗರ ಕುಲದ ಮುಡುಗೌಡ, ಲಚ್ಚಗೌಡ, ಮಂಚಗೌಡ, ಹಾಗೂ ಮಾರಗೌಡರು ಏಕಸ್ಥರಾಗಿ, ಸೋಮನಾಥ ದೇವರನ್ನು ಪ್ರತಿಷ್ಠಾಪಿಸಿ, ಸ್ಥಾನಾಚಾರ್ಯ ದೇವರಾಸಿಪಂಡಿತರಿಗೆ ಎರಡು ವೇಲಿ ಭೂಮಿಯನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಅಲ್ಲೇ ಇರುವ ೧೨೩೯ರ ಇನ್ನೊಂದು ತಮಿಳು ಶಾಸನ, ದಾಸಗೌಡನು ತಮ್ಮಡಿಹಳ್ಳಿಯ ಸೋಮನಾಥ ದೇವರ ನಂದಾ ದೀಪಕ್ಕೆಂದು ನಗದು ದಾನ ನೀಡಿದ್ದನ್ನು ತಿಳಿಸುತ್ತದೆ. ಆದರೆ ಶಾಸನೋಕ್ತ ಸೋಮೇಶ್ವರ ಗುಡಿಯಿಂದು ಶಿಥಿಲಾವಸ್ಥೆಯಲ್ಲಿದೆ.

**ತ್ರಯಂಬಕಪುರ(೪೪೨):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ೧೪ ಕಿ.ಮೀ. ಹಾಗೂ ಹೋಬಳಿ ಕೇಂದ್ರ ತೆರಕಣಾಂಬಿಯಿಂದ ಎರಡು ಕಿ.ಮೀ. ಅಂತರದಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ ಚಾರಿತ್ರಿಕ ಮಹತ್ವದ ಸ್ಥಳ. ವಿಜಯನಗರ ಕಾಲದ ವಿಶಾಲವಾದ ತ್ರಿಯಂಬಕೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿ ಈವರೆಗೆ ಸುಮಾರು ೨೦ ಶಾಸನಗಳು ದೊರೆತಿವೆ. ಅವುಗಳಲ್ಲಿ ಗ್ರಾಮದ ಪಶ್ಚಿಮದ ಹೊಲವೊಂದರಲ್ಲಿರುವ ೧೩೧೦ರ ಶಾಸನ ಪೆರುಮಾಳೆ ದಂಡನಾಯಕನ ಮಗ ವೀರಮಾಧವ ದಂಡನಾಯಕನು ತೆರಕಣಾಂಬಿಯ ಗಡಿಯಲ್ಲಿ ಪೆರುಮಾಳೆಪುರವನ್ನು ನಿರ್ಮಿಸಿ ಪುರವಾಗಿಸಿ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಅಲ್ಲದೆ ಗೋವಿಂದದಾಸ, ಶ್ರೀರಾಮದಾಸ, ಶ್ರೀರಂಗದಾಸ ಮುಂತಾದವರಿಗೆ ಭೂ ದಾನ ನೀಡಿದ್ದನ್ನು ದಾಖಲಿಸಿದೆ. ೧೩೫೫ರ ಇನ್ನೊಂದು ಶಾಸನ ಭೂ ಕ್ರಯ ದಾಖಲೆಯಾಗಿದ್ದು, ಭೂಮಿಯನ್ನು ಖರೀದಿಸಿ ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಇಮ್ಮಡಿ ಬುಕ್ಕನ ಕಾಲದ ನಿರ್ಮಾಣವೆಂದು ಹೇಳಲಾಗುವ ಇಲ್ಲಿಯ ತ್ರಿಯಂಬಕೇಶ್ವರ ಗುಡಿಯ ಅರ್ಚಕರ ಬಳಿ ಹಿಂದೆ ಇದ್ದ ಸುಮಾರು ೧೪೧೭ಕ್ಕೆ ಸೇರಿದ್ದೆಂದು ಹೇಳಲಾಗಿರುವ ತಾಮ್ರಶಾಸನ ಇಮ್ಮಡಿ ಬುಕ್ಕನ ಸೋದರ, ಒಂದನೇ ದೇವರಾಯನ ಮಗನಾದ ಹರಿಹರನು ತ್ರಿಯಂಬಕೇಶ್ವರ ದೇವರ ಸೇವೆಗೆಂದು ೨,೮೪೨ ಹೊನ್ನು ೨೫೭ ಖಂಡುಗ ಗದ್ದೆ ಹಾಗೂ ೯,೩೦,೦೦೦ ಅಡಕೆಯನ್ನು ದಾನ ನೀಡಿದ್ದನ್ನು ದಾಖಲಿಸಿದೆ. ಅಲ್ಲೇ ಹಿಂದೆ ಇದ್ದ ೧೪೯೨ರ ಇನ್ನೊಂದು ತಾಮ್ರಶಾಸನ, ಉಮ್ಮತ್ತೂರಿನ ವೀರನಂಜರಾಜೊಡೆಯನ ಮಹಾಪ್ರಧಾನ ಪರ್ವತಯ್ಯನು ತನ್ನ ತಂದೆ ದೇವರಾಯನು ಬೊಮ್ಮನಹಳ್ಳಿಯಲ್ಲಿ ಪುರವನ್ನು ನಿರ್ಮಿಸಿ, ಅದರ ಗುತ್ತಿಗೆ ಹಣ, ಗದ್ಯಾಣ ೧೨ ಹೊನ್ನನು ತ್ರಿಯಂಬಕದೇವರ ಭಂಡಾರಕ್ಕೆ ಸಲ್ಲಿಸುತ್ತಿದ್ದು, ಅದನ್ನು ಒಡೆಯರ ಆರೋಗಣೆಗೆಂದು ವಿನಿಯೋಗಿಸುವ ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ. ಅಲ್ಲದೇ ಮೈಸೂರಿನಲ್ಲಿದ್ದ ದೇವರಾಯರಾಜ ಮಠದ ಬಗೆಗೂ ಉಲ್ಲೇಖಿಸುತ್ತದೆ. ಗುಡಿಯ ಮಹಾದ್ವಾರದ ಬಳಿಯಿರುವ ೧೫೧೩ ಶಿಲಾಶಾಸನ, ವಿವಿಧ ತೆರಿಗೆಗಳನ್ನು ಸಾಳುವ ಗೋವಿಂದರಾಜನು ಕೃಷ್ಣದೇವರಾಯರಿಗೆ ಪುಣ್ಯವಾಗಲೆಂದು ತ್ರಿಯಂಬಕದೇವರ್ಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ಊರ ಉತ್ತರಕ್ಕೆ ಕಣವೆಬಾವಿ ಬಳಿಯಿರುವ ೧೬೫೪ರ ಶಾಸನ ಮೂಲತಃ ೧೬೦೪ರಲ್ಲಿ ಶಂಕರಯ್ಯನು ಈ ದೇವರಿಗೆಂದು ಗುಡಿಯ ಆಗ್ನೇಯಕ್ಕೆ ನೂತನವಾಗಿ ನಿರ್ಮಿಸಿದ ಕೂಪವು ಶಿಥಿಲವಾಗಿದ್ದು, ಅದನ್ನು ಪುನಃ ಬೊಮ್ಮರಸರಾಜಯ್ಯನು ಕಂಠೀರವ ನರಸರಾಜರಿಗೆ ಪುಣ್ಯವಾಗಲೆಂದು ಜೀರ್ಣೋದ್ಧಾರ ಗೊಳಿಸಿದ್ದನ್ನು ದಾಖಲಿಸಿದೆ. ವಿಶಾಲವಾದ ಪ್ರಾಕಾರದ ಪೂರ್ವ-ದಕ್ಷಿಣ ಭಾಗದಲ್ಲಿರುವ ಮಹಾದ್ವಾರಗಳಿಗಿದ್ದ ಗೋಪುರವು ಶಿಥಿಲವಾಗಿದ್ದು ಅವುಗಳ ದುರಸ್ತಿ ಕಾರ್ಯ ಪ್ರಗತಿಯಲ್ಲಿತ್ತು. ಪೂರ್ವಾಭಿಮುಖನಾಗಿರುವ ಈ ಗುಡಿಯು ಗರ್ಭಗೃಹ, ಅಂತರಾಳ, ಹಾಗೂ ನವರಂಗಗಳನ್ನು ಹೊಂದಿದ್ದು, ದೇವಾಲಯದ ಭಿತ್ತಿಯನ್ನು ಅಲಂಕಾರಿಕ ಕಂಬ ಹಾಗೂ ದೇವಕೋಷ್ಟಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದಲ್ಲಿ ತ್ರಿಯಂಬಕೇಶ್ವರ ಲಿಂಗವಿದ್ದು, ಸುತ್ತ ಪ್ರದಕ್ಷಿಣಾಪಥವೂ ಇದೆ. ನವರಂಗದಲ್ಲಿ ವಿಜಯನಗರ ಶೈಲಿಯ ಬೃಹತ್ ಕಂಬಗಳಿದ್ದು, ದೇವಕೋಷ್ಟವೊಂದರಲ್ಲಿ ಕಾರ್ತಿಕೇಯ ಶಿಲ್ಪವಿದೆ. ನವರಂಗದ ಉತ್ತರ ಗೋಡೆಯಂಚಲ್ಲಿ ಅಡ್ಡಗಾಲಲ್ಲಿ ಕುಳಿತು, ಗ್ರಂಥವಾಚನದಲ್ಲಿ ತೊಡಗಿರುವ ಆಂಜನೇಯ ಹಾಗೂ ಅದನ್ನು ಆಲಿಸುತ್ತಿರುವ ಸೀತಾರಾಮರ ಶಿಲ್ಪಗಳಿವೆ. ಆದರೆ ಈ ವೇದಾಂಜನೇಯ ಶಿಲ್ಪವುಪ್ರಸ್ತುತ ಗುಂಡ್ಲುಪೇಟೆಯ ಕಲ್ಯಾಣಿ ಹೊಂಡದ ಬಳಿ ಇದೆ ಎಂಬ ಸ್ಥಳೀಯ ಅಭಿಪ್ರಾಯವಿದೆ. ಬಈ ಗುಡಿಯ ಬದಿಯಲ್ಲೇ ಪಾರ್ವತಿ (ತ್ರಯಂಬಕೇಶ್ವರಿ)ಯ ಗುಡಿಯೂ ಇದೆ. ಬದಿಯಲ್ಲೇ ಚಂಡಿಕೇಶ್ವರನಿಗಾಗಿ ನಿರ್ಮಿಸಿರುವ ಕಿರು ಗುಡಿಯೊಂದಿದ್ದು ಶಿಥಿಲವಾಗಿದ್ದ ಮೂಲ ಮೂರ್ತಿಯನ್ನು ಇತ್ತೀಚೆಗೆ ಬದಲಿಸಲಾಗಿದೆ. ಪ್ರಾಕಾರದ ಪೂರ್ವ ಮಹಾದ್ವಾರದ ಎದುರು ಮೂಲೆಯಲ್ಲಿರುವ ಸುಮಾರು ೧೫ ಅಡಿ ಎತ್ತರದ ಕಲ್ಯಾಣಮಂಟಪವೂ ಆಕರ್ಷಕವಾಗಿದ್ದು, ಕಂಬಗಳ ಮೇಲೆ ಸುಂದರ ಉಬ್ಬು ಕೆತ್ತನೆ ಇದೆ. ಅಲ್ಲದೇ ಇಲ್ಲಿ ದುರ್ಗಾ ಹಾಗು ಸಪ್ತಮಾತೃಕೆಯರ ಶಿಲ್ಪಗಳಿವೆ. ಪ್ರತೀ ವರ್ಷ ಶಿವರಾತ್ರಿ ಸಂದರ್ಭದಲ್ಲಿ ಇಲ್ಲಿ ಜಾತ್ರೆಯಾಗುತ್ತದೆ.

**ತೆರಕಣಾಂಬಿ(೭,೭೩೮):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ೧೨ ಕಿ.ಮೀ. ದೂರದಲ್ಲಿ, ಚಾಮರಾಜನಗರ ಮಾರ್ಗದಲ್ಲಿರುವ ಹೋಬಳಿ ಕೇಂದ್ರವಾಗಿದೆ. ಹದಿನಾಡು ರಾಜರು ಮತ್ತು ಉಮ್ಮತ್ತೂರು ಪಾಳೇಗಾರರ ಕಾಲದಲ್ಲಿ ಉಪರಾಜಧಾನಿಯಾಗಿ ಮೆರೆದಿರುವ ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿಂದ ಈವರೆಗೆ ೧೪ ಶಾಸನಗಳು ವರದಿಯಾಗಿವೆ. ಸುಮಾರು ೧೫-೧೬ನೇ ಶತಮಾನದ ಶಾಸನಗಳಲ್ಲಿ ತೆರುಕಣಾಂಬೆ, ತೆರುಕಣಂಬಿ ತಿರುಕಣಂಬೆ, ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು ಹಿಂದೆ 'ತೆರಕಣಾಂಬೆಯು 'ಸ್ಥಳ', 'ಸೀಮೆ', 'ರಾಜ್ಯ' ಎಂಬ ಆಡಳಿತ ಘಟಕದ ಕೇಂದ್ರವಾಗಿ ಹದಿನಾಡು, ಉಮ್ಮತ್ತೂರು ಹಾಗೂ ಮೈಸೂರು ಅರಸರ ಆಳ್ವಿಕೆಯಲ್ಲಿ ಪ್ರಾಮುಖ್ಯತೆ ಪಡೆದಿತ್ತು. ಆದರೆ ಈ ಗ್ರಾಮದ ಪ್ರಾಚೀನತೆಯನ್ನು ಊರ ಈಶಾನ್ಯ ಭಾಗದ ಹೊಲವೊಂದರಲ್ಲಿರುವ ಸುಮಾರು ೯-೧೦ನೇ ಶತಮಾನಕ್ಕೆ ಸೇರಿದ ಕನ್ನಡ ಶಾಸನದಿಂದ, ಗಂಗರ ಕಾಲಕ್ಕೆ ಗುರುತಿಸಬಹುದಾಗಿದ್ದು, ಆ ಶಾಸನದಲ್ಲಿ ಇದನ್ನು 'ಸಿರಿಯೂರು' ಎಂದು ಹೆಸರಿಸಲಾಗಿದೆ. ಊರ

ಪ್ರವಾಸಿ ಮಂದಿರದ ಬಳಿ ಬಿದ್ದಿರುವ ಪಾರ್ಶ್ವನಾಥ ತೀರ್ಥಂಕರ ಪೀಠ(ಇಂದು ಕಾಣೆಯಾಗಿದೆ)ದ ಮೇಲಿನ ಶಾಸನದಿಂದ ಹಿಂದೆ (ಸುಮಾರು ೧೪ನೇ ಶತಮಾನ) ಇದೊಂದು ಜೈನ ಕೇಂದ್ರವಾಗಿದ್ದು, ಹನಸೋಗೆಯ ಲಲಿತಕೀರ್ತಿ ಭಟಾರಕರು ಈ ಶಿಲ್ಪವನ್ನು ಪ್ರತಿಷ್ಠಾಪಿಸಿದ ಅಂಶ ವೇದ್ಯವಾಗುತ್ತದೆ. ತೆರಕಣಾಂಬಿ, ಸ್ಥಳನಾಮ ನಿಷ್ಪತ್ತಿಗೆ ಸಂಬಂಧಿಸಿದಂತೆ, ತ್ರಿನೇತ್ರ ಕದಂಬನು ಇಲ್ಲಿ ತ್ರಿಕದಂಬ ಗುಡಿಯನ್ನು ನಿರ್ಮಿಸಿದ್ದು, ತ್ರಿಕದಂಬವೇ 'ತೆರಕಣಾಂಬಿ' ಆಯಿತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಆದರೆ ನೆರೆಯ ದಾಸನಪುರದ ೧೫೩೬ರ ಶಾಸನದಿಂದ ತೆರಕಣಾಂಬೆಗೆ ಕುಡುಗುಲೂರು ಎಂಬ ಪ್ರತಿನಾಮಧೇಯವಿದ್ದ ಅಂಶ ಗೊತ್ತಾಗುತ್ತದೆ. ನೆರೆ-ಯ ತ್ರಿಯಂಬಕಪುರದ ೧೩೧೧ರ ಶಾಸನದಿಂದ ಪದಿನಾಲ್ಕು ನಾಡನ್ನು ತೆರಕಣಾಂಬೆಯಿಂದ ಮಾಧವ ದಂಡನಾಯಕನು ಆಳುತ್ತಿದ್ದ ಅಂಶ ಗೊತ್ತಾಗುತ್ತದೆ. ೧೫೦೪ರ ಶಾಸನ ಉಮ್ಮತ್ತೂರು ಅರಸರ ಆಳ್ವಿಕೆಯನ್ನು ಸೂಚಿಸಿದರೆ ರಾಜ ಒಡೆಯರ್ ಇದನ್ನು ೧೬೭೪ರಲ್ಲಿ ವಶಪಡಿಸಿಕೊಂಡಿದ್ದನ್ನು ಇನ್ನೊಂದು ದಾಖಲೆ ತಿಳಿಸುತ್ತದೆ.

ಹೊಯ್ಸಳ ಶೈಲಿಯಲ್ಲಿರುವ ಇಲ್ಲಿಯ ಮೂಲಸ್ಥಾನೇಶ್ವರ ದೇವಾಲಯವು ಪ್ರಾಚೀನ ಗುಡಿಯಾಗಿದ್ದು, ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದ್ದು, ನವರಂಗಕ್ಕೆ ಅರ್ಧಮಂಟಪವನ್ನು ಉಮ್ಮತ್ತೂರು ಪಾಳೇಗಾರರ ಕಾಲದಲ್ಲಿ ಸೇರಿಸಲಾಗಿದೆ. ಅಲ್ಲೇ ಇರುವ ೧೫೦೪ರ ಶಾಸನ, ಮೂಲ ಸ್ಥಾನೆಶ್ವರ ದೇವರಿಗೆ ಉಮ್ಮತ್ತೂರಿನ ಒಡೆಯ ವೀರ ನಂಜರಾಜನು ಬಿಟ್ಟ ದತ್ತಿಯನ್ನು ದಾಖಲಿಸಿದೆ. ಅಲ್ಲದೇ ತೆರಕಣಾಂಬಿ ನಾಡೊಳಗೆ ತೇರಕಾಣಿಕೆಯನ್ನು ದೇವರ ರಥೋತ್ಸವಕ್ಕೆಂದು ದತ್ತಿ ನೀಡಿದ್ದನ್ನು ದಾಖಲಿಸಿದೆ. ನವರಂಗದಲ್ಲಿಟ್ಟಿರುವ ಉಮಾಮಹೇಶ್ವರರ ಎರಡು ಶಿಲ್ಪಗಳಲ್ಲಿ ಒಂದನ್ನು ಊರಾಚಿನ ಪಾಳು ಸೋಮೇಶ್ವರ ಗುಡಿಯಿಂದ ತಂದು ಇಲ್ಲಿ ಇರಿಸಲಾಗಿದೆ. ಈ ಗುಡಿಗೆ ಎದುರು ಮುಖನಾಗಿರುವ ವೀರಭದ್ರನ ಗುಡಿಯಲ್ಲಿ ವೀರಭದ್ರನ ಶಿಲ್ಪ ಹಾಗೂ ಶಾಸನಗಳಿವೆ.

ನೆರೆಯ ದಾಸನಪುರದ ೧೫೩೬ರ ಶಾಸನದಿಂದ ಅಚ್ಯುತರಾಯನ ನಿರೂಪದಂತೆ ಸ್ಥಳೀಯ ಅಧಿಕಾರಿಯು ತೆರಕಣಾಂಬೆಯ ತಿರುಮಲ ದೇವರ ಸೇವೆಗೆಂದು ತಿಮ್ಮಪ್ಪನಪುರ ಗ್ರಾಮವನ್ನು ಪಂಪಾ ಕ್ಷೇತ್ರದ ವಿಠಲೇಶ್ವರ ಸನ್ನಿಧಿಯಲ್ಲಿ ದಾನ ನೀಡಿದ್ದನ್ನು ದಾಖಲಿಸುತ್ತಿದ್ದು, ಇದರಿಂದ ಹಿಂದೆ ತಿರುಮಲ ದೇವರ ಗುಡಿ ಇಲ್ಲಿದ್ದ ಅಂಶ ವೇದ್ಯವಾಗುತ್ತದೆ.

ಇಲ್ಲಿಯ ಲಕ್ಷ್ಮೀವರದರಾಜಸ್ವಾಮಿ ದೇವಾಲಯವು ವಿಶಾಲವಾಗಿದ್ದು, ಎರಡು ಹಂತದ ನಿರ್ಮಾಣಗಳಿಂದ ಕೂಡಿದ್ದು ಇತ್ತಈಚೆಗೆ ಜೀರ್ಣೋದ್ಧಾರಗೊಂಡಿದೆ. ನೆರೆಯ ಕೊತ್ತಲವಾಡಿಯ ೧೩೦೫ರ ಶಾಸನ, ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಮಾಧವ ದಂಡನಾಯಕ-ಕೇತೆಯ ದಂಡನಾಯಕ ಸೋದರರು, ತೆರಕಣಾಂಬಿಯಲ್ಲಿ ವರದರಾಜ-ಅಲ್ಲಾಳನಾಥ ದೇವರ ಗುಡಿ ನಿರ್ಮಿಸಿ, ಮೂರ್ತಿ ಪ್ರತಿಷ್ಠಾಪಿಸಿ ದತ್ತಿ ನೀಡಿದ ಅಂಶವನ್ನು ದಾಖಲಿಸುತ್ತದೆ. ಈ ದೇವಾಲಯದ ಉತ್ತರದ ಜಗತಿ ಮೇಲಿರುವ ೧೫೨೪ರ ಶಾಸನ, ತೆರಕಣಾಂಬಿಯ ಅಲ್ಲಾಳನಾಥ ದೇವರಿಗೆ ಮಹಾಮಂಡಳೇಶ್ವರ, ಉಮ್ಮತ್ತೂರ ವೀರನಂಜರಾಜೊಡೆಯನು ಆಳ್ವಾರು ದೇವರ ತೇರ ಕಾಣಿಕೆಗೆಂದು ೨೯ ಹೊನ್ನನ್ನು ವರ್ಷಂಪ್ರತಿ ನೀಡುವ ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ. ಇದರ ಗರ್ಭಗೃಹ, ಅಂತರಾಳ, ನವರಂಗ ಭಾಗವು ಹೊಯ್ಸಳ ಕಾಲದ್ದಾಗಿದ್ದು, ಅಲಂಕಾರಿಕ ಸ್ತಂಭ, ದೇವಕೋಷ್ಠ, ಉತ್ತರಾಂಗಗಳು ಹೊಯ್ಸಳ ವಾಸ್ತುಶಿಲ್ಪ ಲಕ್ಷಣವನ್ನು ಹೊಂದಿದೆ. ಗರ್ಭಗೃಹದಲ್ಲಿರುವ ಸುಮಾರು ೧.೫ ಮೀ ಎತ್ತರದ ವರದರಾಜ ಮೂರ್ತಿಯ ಪ್ರಭಾವಳಿಯ ಮೇಲೆ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಇಲ್ಲಿದ್ದ ಮೂಲ ಶಿಲ್ಪವನ್ನು ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ಗುಡಿಗೆ ಸ್ಥಳಾಂತರಿಸುವ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾಗಿ ತಿಳಿದು ಬರುತ್ತದೆ. ಆದರೆ ಅದಕ್ಕೂ ಮೊದಲು

ಈ ದೇವಾಲಯವು ಸುಮಾರು ೧೬ನೇ ಶತಮಾನದಲ್ಲಿ ಮಹಾಮಂಡಳೇಶ್ವರ ಕೊಂಡೆದೇವ ಚೋಳ ಮಹಾ ಅರಸನಿಂದ ಜೀರ್ಣೋದ್ಧಾರಗೊಂಡಿರುವ ಅಂಶ ಅಲ್ಲೇ ಇರುವ ಇನ್ನೊಂದು ಶಾಸನದಿಂದ ವೇದ್ಯವಾಗುತ್ತದೆ. ಈ ದೇವರ ರಥೋತ್ಸವವು ಕಳೆದ ನಾಲ್ಕು ವರ್ಷಗಳಿಂದ ವಿಜೃಂಭಣೆಯಿಂದ ಜರಗುತ್ತಿದೆ.

ವರದರಾಜ ಗುಡಿಯ ದಕ್ಷಿಣಕ್ಕಿರುವ ಲಕ್ಷ್ಮೀಗುಡಿಯ ಗರ್ಭಗೃಹದಲ್ಲಿ ಲಕ್ಷ್ಮೀದೇವಿಯ ಆಸೀನ ಶಿಲ್ಪವಿದ್ದು, ಪ್ರದಕ್ಷಿಣಾಪಥವಿದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ನೆರೆಯ ಪಾಳು ಶಿವಾಲಯದಿಂದ ತಂದ ಶಿಲ್ಪಗಳನ್ನಿಲ್ಲಿ ಇಡಲಾಗಿದೆ. ಅಲ್ಲದೆ ಯಶೋಧೆ ಕೃಷ್ಣ, ಪಾರ್ಥಸಾರಥಿ, ಬಲರಾಮ ಮುಂತಾದ ಕಂಚಿನ ಮೂರ್ತಿಗಳಿಲ್ಲಿವೆ. ನವರಂಗದ ಮುಂಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಿಸ್ತರಿಸಲಾಗಿದ್ದು, ಅಲ್ಲಿಯ ಅಮ್ಮನವರ ಉತ್ಸವ ಮೂರ್ತಿ ಪೀಠದ ಮೇಲಿರುವ ಸುಮಾರು ೧೯ನೇ ಶತಮಾನದ ಶಾಸನ ಇದನ್ನು ಖಚಿತಪಡಿಸುತ್ತದೆ.

ಇಲ್ಲಿಯ ಗೋಪಾಲಸ್ವಾಮಿ ದೇವಾಲಯವು ಉತ್ತರಾಭಿಮುಖನಾಗಿದ್ದು, ಸ್ಥಳೀಯವಾಗಿ ಇದನ್ನು ಹಂಡೆ ಗೋಪಾಲಸ್ವಾಮಿ ಎಂದೂ ಕರೆಯಲಾಗುತ್ತದೆ. ಶಿಥಿಲಗೊಂಡಿದ್ದ ಈ ದೇವಾಲಯವನ್ನುಸುಮಾರು ನಲವತ್ತು ವರ್ಷಗಳ ಹಿಂದೆ ಜೀರ್ಣೋದ್ಧಾರ ಮಾಡಲಾಗಿದೆ. ನೆರೆಯ ಕೀಲಗೆರೆಯ ೧೩೧೮ರ ಶಾಸನದಿಂದ ಇಲ್ಲಿಯ ಗೋಪಿನಾಥ ದೇವರನ್ನು ಅಲ್ಲಪ್ಪ ದಂಡನಾಯಕನ ಮಡದಿ ಚಾಮವ್ವೆಯು ಪ್ರತಿಷ್ಠಾಪಿಸಿದಾಗ ಮಾಧವ ದಂಡನಾಯ್ಕನು ಕೆಲ್ಲಿಗೆರೆ ಬೆಲಕುಪ್ಪೆಗಳನ್ನು ದತ್ತಿ ನೀಡಿದ ಅಂಶ ಗೊತ್ತಾಗುತ್ತದೆ. ಇದು ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದ್ದು, ಗರ್ಭಗೃಹದ ಪ್ರದಕ್ಷಿಣೆಗೆಂದೇ ಪ್ರದಕ್ಷಿಣಾಪಥವಿದ್ದು, ಹೊರಭಿತ್ತಿಯು ಅಲಂಕಾರಿಕ ಸ್ತಂಭ, ದೇವಕೋಷ್ಟಗಳಿಂದ ಕೂಡಿದೆ. ಗರ್ಭಗುಡಿಯಲ್ಲಿರುವ ಗೋಪಾಲಕೃಷ್ಣನ ಮೂರ್ತಿಯು ಹೊಯ್ಸಳ ಶೈಲಿಯದಾಗಿದ್ದು, ಇಲ್ಲಿಯ ಸುಗ್ರೀವನ ದೇವಾಲಯವು ವಿಜಯನಗರ ಕಾಲದ ಕಿರು ನಿರ್ಮಾಣವಾಗಿದ್ದು, ಗರ್ಭಗುಡಿಯಲ್ಲಿರುವ ಎರಡು ಮೀ. ಎತ್ತರದ ಸುಗ್ರೀವನ ಮೂರ್ತಿಯು ಆಕರ್ಷಕವಾಗಿದ್ದು, ಮುಂದಿನ ತೆರೆದ ಮಂಟಪವನ್ನು ಹೊತ್ತು ನಿಂತಿರುವ ಕಂಬಗಳು, ವೈವಿಧ್ಯಮಯ ಉಬ್ಬುಶಿಲ್ಪಗಳಿಂದ ಕೂಡಿವೆ. ಇಲ್ಲಿಯ ಹನುಮಂತ ಮಂಟಪವನ್ನು ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಕೆಂಪನರಸಿಂಹಸೆಟ್ಟಿ ಎಂಬ ವ್ಯಾಪಾರಿಯು ತೆರಕಣಾಂಬಿಯ ನಡುಕೇರಿಯಲ್ಲಿ ನೂತನವಾಗಿ ನಿರ್ಮಿಸಿ ಹನುಮಂತನನ್ನು ಪ್ರತಿಷ್ಠಾಪಿಸಿ, 'ಉತ್ತನಪುರ' ಗ್ರಾಮವನ್ನು ದತ್ತಿ ಬಿಟ್ಟಿರುವ ಅಂಶ ಅಲ್ಲೇ ಇರುವ ೧೬೪೦ರ ಶಾಸನವೊಂದರಿಂದ ವೇದ್ಯವಾಗುತ್ತದೆ.

ತೆರಕಣಾಂಬಿ ಪಟ್ಟಣದ ಆಗ್ನೇಯ ಭಾಗದಲ್ಲಿ ನೆಲೆಸಿದ್ದು, ಪ್ರಸಿದ್ಧವಾಗಿದ್ದ ಸೋಮಯ್ಯ-ದೇವರ ಗುಡಿಯ ಪೂಜಾವಿಧಿಗಳಿಗೆಂದು ಹಿಂದೆ ಕೇತಯ್ಯ ದಂಡನಾಯಕನು ಉಂಬಳಿ ನೀಡಿದ್ದ ಶೆಟ್ಟಿಹಳ್ಳಿ ಗ್ರಾಮವನ್ನು ಪುನರ್ದತ್ತಿ ನೀಡಿದ ಅಂಶವನ್ನು ಉಮ್ಮತ್ತೂರ ಅರಸನ ಸೋದರ ನಂಜರಾಜ ಒಡೆಯನ ಕಾಲಕ್ಕೆ ಸೇರಿದ ಶೆಟ್ಟಿಹಳ್ಳಿ ಶಾಸನ (೧೪೮೮) ದಾಖಲಿಸಿದೆ. ಇದರಿಂದ ತೆರಕಣಾಂಬಿಯಲ್ಲಿ ಸುಮಾರು ೧೩ನೇ ಶತಮಾನಕ್ಕೆ ಸೇರಿದ ಸೋಮೇಶ್ವರ ದೇವಾಲಯವಿದ್ದ ಅಂಶ ವೇದ್ಯವಾಗುತ್ತದೆ.

ಊರ ಬಸ್ ಸ್ಟಾಂಡ್ ಹಿಂಭಾಗದಲ್ಲಿರುವ ನವರಂಗವು ಹಿಂದೆ ಅಲ್ಲಿದ್ದ ಶ್ರೀರಾಮದೇವಾಲಯದ ಭಾಗವೆಂದು ಹೇಳಲಾಗುತ್ತಿದ್ದು, ಕಂಬಗಳ ಮೇಲೆ ಭಕ್ತ ಶಿಲ್ಪಗಳಿವೆ. ಹಿಂದೆ ಅಲ್ಲೇ ಇದ್ದ ಈ ರಾಮಭದ್ರ ದೇವಾಲಯದ ಪಾತಾಳಂಕಣದ ಬಳಿಯಿರುವ ೧೪೮೯ರ ಶಾಸನ ತೆರಕಣಾಂಬೆಯನ್ನು ವೀರನಂಜರಾಯವೊಡೆಯನು ಆಳುತ್ತಿದ್ದಾಗ, ತೆರಕಣಾಂಬೆಯ ಚೆನ್ನಪ್ಪ ಶೆಟ್ಟರ ಮಗ ದಾಸಕೇತಪ್ಪಶೆಟ್ಟಿ ಎಂಬ ಅಧಿಕಾರಿಯು ವೈಕುಂಠನಾಥ, ರಾಮಚಂದ್ರ ಹಾಗೂ ಆಳ್ವಾರ ದೇವರ ಪೂಜಾವಿಧಿ ರಥೋತ್ಸವಗಳಿಗೆಂದು ಹೆಡಿಯಾಲ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ಅದೇ ಶಾಸನಕಲ್ಲಿನ ಹಿಮ್ಮುಖದಲ್ಲಿರುವ ೧೫೨೧ರ ಶಾಸನ ಕೃಷ್ಣದೇವರಾಯನ

ಆಳ್ವಿಕೆಯಲ್ಲಿ ರಾಜ್ಯಪಾಲ ಸಾಳುವ ಗೋವಿಂದರಾಜನು ಚಕ್ರವರ್ತಿಗೆ ಪುಣ್ಯ ಪ್ರಾಪ್ತಿಯಾಗಲೆಂದು ತೆರಕಣಾಂಬೆಯ ಆಳ್ವಾರು ದೇವರ ರಥೋತ್ಸವಕ್ಕೆಂದು ತೆರಕಣಾಂಬಿ ಸ್ಥಳಕ್ಕೆ ಸೇರಿದ ಗ್ರಾಮ, ಊರು, ಪುರಗಳಿಂದ ಎರಡೆರಡು ಹಣವನ್ನು ದತ್ತಿ ನೀಡಿದ್ದನ್ನು ತಿಳಿಸುತ್ತದೆ.

ಉಳಿದಂತೆ ಊರಲ್ಲಿ ವೀರಭದ್ರ, ಸೋಮೇಶ್ವರ, ಗಣಪತಿ (ಎರಡು) ಮಾರಮ್ಮ ಮುಂತಾದ ಗುಡಿಗಳೂ ಸೇರಿದಂತೆ ಮಂಟೇಸ್ವಾಮಿ ಗದ್ದುಗೆಯೂ ಇದ್ದು, ಹಾಳುಬಿದ್ದ ಮಂಟಪ, ಕಂಬ ಮುಂತಾದ ಪುರಾತನ ವಸ್ತುಗಳು ಎಲ್ಲೆಂದರಲ್ಲಿ ಬಿದ್ದಿದೆ. ಸುಮಾರು ೧೫ನೇ ಶತಮಾನದಲ್ಲಿದ್ದ ಕವಿ ಬೊಮ್ಮರಸನು ತೆರಕಣಾಂಬಿಯವನಾಗಿದ್ದು, 'ಸನತಕುಮಾರ ಚರಿತೆ' ಹಾಗೂ 'ಜೀವಂಧರ ಸಾಂಗತ್ಯ'ಗಳನ್ನು ರಚಿಸಿದ್ದಾನೆ. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿದ್ದ ಪ್ರಸಿದ್ಧ ಕವಿ ಚಿಕ್ಕುಪಾಧ್ಯಾಯನೂ ಇದೇ ಊರಿನವನು.

**ದೊಡ್ಡಸಂಪಿಗೆ:** ಚಾಮರಾಜನಗರ ರಸ್ತೆಯಲ್ಲಿರುವ ಇದು ಬಿಳಿಗಿರಿರಂಗನ ಬೆಟ್ಟದಿಂದ ೧೦ ಕಿ.ಮೀ. ಒಳಕ್ಕಾದಂತೆ ಕಾಡುಹಾದಿಯಲ್ಲಿ ಭಾರ್ಗವಿ ಎಂಬ ಕಿರುತೊರೆಯ ಎಡದಂಡೆಯ ಮೇಲಿರುವ ಸ್ಥಳ. ಮಾತೃಹತ್ಯಾದೋಷ ಪರಿಹಾರಕ್ಕಾಗಿ ಇಲ್ಲಿ ತಪವನ್ನಾಚರಿಸಿದ ಪರಶುರಾಮನು ಬಿಳಿಗಿರಿರಂಗನ ಪಾದಗಳನ್ನು ತೊಳೆದ ನೀರಿನಿಂದ ಹುಟ್ಟಿದ ನದಿಯೇ ಈ ಭಾರ್ಗವಿ ಎಂಬ ನಂಬಿಕೆ ಇದೆ. ಅಲ್ಲದೆ ಜಮದಗ್ನಿ ಋಷಿಗಳ ಪತ್ನಿ ಹಾಗೂ ಪರಶುರಾಮನ ತಾಯಿಯಾದ ರೇಣುಕೆಯೇ ಭಾರ್ಗವಿ ನದಿಯಾಗಿ ಇಲ್ಲಿ ನೆಲಸಿರುವಳೆಂಬ ಸ್ಥಳೀಯ ಐತಿಹ್ಯವೂ ಇದೆ. ಇಲ್ಲಿಯ ವನದಲ್ಲಿ ಚಂಪಕ ವೃಕ್ಷಗಳು ಅಧಿಕ ಸಂಖ್ಯೆಯಲ್ಲಿದ್ದು, ಇನ್ನಿತರೆ ಮರಗಳಿಂದಾಗಿ ಈ ಪ್ರದೇಶವು ದಟ್ಟವಾದ ಅರಣ್ಯವೆಂದೆನಿಸಿದೆ. ನದಿಯ ಎಡದಂಡೆಯ ಮೇಲಿರುವ ದೊಡ್ಡ ಸಂಪಿಗೆ ಮರವು ಸುಮಾರು ೧೩೦ ಅಡಿ ಎತ್ತರವಿದ್ದು, ಅದರ ಖಾಂಡ ಭಾಗವು ಸುಮಾರು ೧೩೦ ಮೀ ದಪ್ಪವಿದ್ದು, ಏಪ್ರಿಲ್ ತಿಂಗಳಲ್ಲಿ ಕೆಂಪು ಹಾಗೂ ಹಳದಿ ಬಣ್ಣದ ಸಂಪಿಗೆ ಹೂ ಸಮೃದ್ಧವಾಗಿ ಈ ಮರದಲ್ಲಿ ಕಂಡು ಬರುತ್ತದೆ. ಈ ಮಹಾವೃಕ್ಷದ ಮೂರು ದೊಡ್ಡ ಕೊಂಬೆಗಳನ್ನು ಬ್ರಹ್ಮ-ವಿಷ್ಣು-ಮಹೇಶ್ವರರ ಸಂಕೇತವೆಂದು ಭಾವಿಸಿ ಪೂಜಿಸಲಾಗುತ್ತದೆ. ಈ ಮರದ ಪೂರ್ವಕ್ಕಿರುವ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರುವ ನೂರಾರು ಶಿವಲಿಂಗಗಳು, ಭಕ್ತರಿಂದ ಆರಾಧಿಸಲ್ಪಡುತ್ತಿದ್ದು, ಉತ್ತಮ ಪ್ರವಾಸಿ ತಾಣವಾಗುವ ಎಲ್ಲಾ ವಿಶೇಷವನ್ನು ಈ ಸ್ಥಳ ಹೊಂದಿದೆ.

**ನರಸಮಂಗಲ(೫೪೧):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೨೮ ಕಿ.ಮೀ. ದೂರದಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ ಇದನ್ನು ಅಂಚವಾಡಿ ಮಾರ್ಗವಾಗಿ ತಲುಪಬಹುದಾಗಿದೆ. ಗಂಗರ ಕಾಲದ ರಾಮೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿರುವ ಈ ಊರು ಹಿಂದೊಂದು ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ವರದಿಯಾಗಿರುವ ೧೪ನೇ ಶತಮಾನಕ್ಕೆ ಸೇರಿದ ಐದು ಶಾಸನಗಳಲ್ಲಿ ಮೂರರಲ್ಲಿ 'ನರಸಿಂಹಮಂಗಲ' ಎಂದೇ ಉಲ್ಲೇಖಿತಗೊಂಡಿದೆ. ಇಲ್ಲಿಯ ಐದೂ ಶಾಸನಗಳು, ರಾಮನಾಥ ದೇವರಿಗೆ ನೀಡಿದ ದತ್ತಿಗಳಾಗಿದ್ದು, ೧೩೩೭ರ ಶಾಸನ, ಬಿಲ್ಲಚೊಕ್ಕಯ್ಯ, ಭೋಗಯ್ಯ ಮುಂತಾದ ಪ್ರಮುಖ ದಂಡನಾಯಕರು, ನರಸಿಂಹ ಮಂಗಲದ ರಾಮನಾಥ ದೇವರ ಶ್ರೀಕಾರ್ಯಕ್ಕೆಂದು ನರಸಿಂಹಮಂಗಲವನ್ನು ಸರ್ವಮಾನ್ಯವಾಗಿ ದಾನ ನೀಡಿದ್ದನ್ನು ದಾಖಲಿಸಿದರೆ, ೧೪ನೇ ಶತಮಾನದ ಪೂರ್ವಾರ್ಧಕ್ಕೆ ಸೇರಿದ ಇನ್ನೊಂದು ಶಾಸನ, ಪೆರುಮಾಳೆ ದೇವ ದಂಡನಾಯಕನು ನರಸಿಂಹ ಮಂಗಲದ ಜನಾರ್ದನ ಪೆರುಮಾಳಿಗೆ ರಾಮಸಮುದ್ರದಲ್ಲಿ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ನೆರೆಯ ಕೂತನಪುರದ ೧೫೧೧ರ ಶಾಸನ, ಅಪುತ್ರಿಕಧನವನ್ನು ಅರಸರು ಸ್ವಾಧೀನ ಪಡಿಸಿಕೊಂಡು ಅದನ್ನು ಮಾರಿ, ಖರೀದಿಸಿದಾತನು ನರಸಮಂಗಲದ ಗುಡಿಗೆ ಪ್ರತಿ ವರ್ಷ ೧೧ ಗದ್ಯಾಣ ಹಾಗೂ ಮೂರು

ವರ್ಷಕ್ಕೊಮ್ಮೆ ಹೆಚ್ಚುವರಿ ೫ ಗದ್ಯಾಣ ನೀಡುವಂತೆ ದಾಖಲಿಸಿದೆ. ಇಲ್ಲಿಯ ರಾಮೇಶ್ವರ ದೇವಾಲಯವು ಸುಮಾರು ೯ನೆಯ ಶತಮಾನದ ರಚನೆ ಎಂಬ ಅಭಿಪ್ರಾಯವಿದೆ. ಇದು ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದ್ದು, ಕಟ್ಟಡವು ಗಂಗ-ಪಲ್ಲವ ವಾಸ್ತು ಲಕ್ಷಣದಿಂದ ಕೂಡಿದೆ. ಗರ್ಭಗುಡಿಯು ವಿಶಾಲವಾಗಿದ್ದು, ಒಳಗೆ ರಾಮೇಶ್ವರ ಲಿಂಗವಿದ್ದು, ಪಲ್ಲವ ಶೈಲಿಯ ಸುಡಾವೆ ಮಣ್ಣಿನ ಶಿಖರವನ್ನು ಹೊತ್ತು ನಿಂತಿದೆ. ಶಿಖರವನ್ನು ಅಲಂಕರಿಸಿರುವ ನಂದಿ, ಶಿವ, ವಾಮನ, ಉಗ್ರನರಸಿಂಹ, ನೃತ್ಯಬ್ರಹ್ಮ, ಆಸೀನ ಭೈರವಿ, ಮುಂತಾದ ಗಾರೆ ಶಿಲ್ಪಗಳು ಆಕರ್ಷಕವಾಗಿದೆ. ಅಂತರಾಳದ ಚಾವಣಿಯು ಸರ್ಪದೊಂದಿಗಾಡುತ್ತಿರುವ ಯಕ್ಷ, ಹಾಗೂ ಯೋಗಾಸೀನ ಯಕ್ಷ, ವಾದ್ಯವೃಂದ ಹಾಗೂ ಸಾಮಾಜಿಕ ದೃಶ್ಯಗಳಿಂದ ಅಲಂಕೃತಗೊಂಡಿದೆ. ನವರಂಗದ ಕಂಬಗಳು ವೃತ್ತಾಕಾರದವಾಗಿದ್ದು, ವಿಶಿಷ್ಟ ಉಬ್ಬುಕೆತ್ತನೆಗಳಿಂದಾಗಿ ಆಕರ್ಷಕವಾಗಿವೆ. ಇಲ್ಲಿರುವ ಶಿಲ್ಪಗಳಲ್ಲಿ ಆಸೀನ ಅರಸ ಹಾಗೂ ಬಳಿಯಲ್ಲೇ ನಿಂತಿರುವ ರಾಣಿಯರ ಶಿಲ್ಪ ಆಕರ್ಷಕವಾಗಿವೆ. ನವರಂಗದ ತೊಲೆಗಳನ್ನು, ನರ್ತಿಸುತ್ತಿರುವ, ಚಲನೆಯಲ್ಲಿರುವ, ಕಾದಾಟದಲ್ಲಿ ತೊಡಗಿರುವ ಯಕ್ಷರ ವೈವಿಧ್ಯಮಯ ಕೆತ್ತನೆಗಳಿಂದ ಅಲಂಕರಿಸಲಾಗಿದ್ದು, ಕೆಲವೊಮ್ಮೆ ಯಕ್ಷರ ಶಿರವನ್ನು ಮಂಗ, ಗಜ ಮಾದರಿಯಲ್ಲಿ ರಚಿಸಲಾಗಿದೆ. ನವರಂಗದ ನಡುವಣ ಛತ್ತಲ್ಲಿ ಶಿವತಾಂಡವ ನಟರಾಜನನ್ನು ಆವೃತ್ತವಾಗಿರುವ ಅಷ್ಟದಿಕ್ಪಾಲಕರ ಆಕರ್ಷಕ ಭುವನೇಶ್ವರಿ ಇದೆ. ನವರಂಗದ ಉತ್ತರದಂಚಿನ ತ್ರುಟಿತ ಪೀಠದ ಮೇಲಿರುವ ಪರಶುರಾಮನ ಶಿಲ್ಪಕ್ಕೆ ಎರಡು ಶಿರಗಳಿವೆ. ಈ ಗುಡಿಯ ನೈಋತ್ಯ ಭಾಗದ ಕಿರುಗುಡಿಯಲ್ಲಿ ಸಪ್ತಮಾತೃಕಾ, ದ್ವಿಬಾಹು ಕಾರ್ತಿಕೇಯ, ದಕ್ಷ, ವೀಣಾಧಾರಿ ಶಿವ, ಸೂರ್ಯ ಹಾಗೂ ಪಾರ್ಶ್ವನಾಥ ಶಿಲ್ಪಗಳಿವೆ. ಕೇಂದ್ರ ಪುರಾತತ್ವ ಇಲಾಖೆಯು ಈ ದೇವಾಲಯವನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ. ಆದರೆ ಇಂದು ಕೆಲವು ಶಿಲ್ಪಗಳು ಕಣ್ಮರೆಯಾಗಿವೆ.

**ಪಾಳ್ಯ(೬,೦೦೨):** ತಾಲೂಕು ಕೇಂದ್ರ ಕೊಳ್ಳೇಗಾಲದಿಂದ ನಾಲ್ಕು ಕಿ.ಮೀ. ಈಶಾನ್ಯಕ್ಕೆ ಇದ್ದು, ಅಲ್ಲಿರುವ ಮರುಳೇಶ್ವರ, ಮಹದೇಶ್ವರ, ಸಂಗಮೇಶ್ವರ, ವೀರಭದ್ರ, ಪೋತರಾಜೇಶ್ವರ, ಉಪ್ಪರಿಗೆ ಬಸವೇಶ್ವರ, ಗೋಪಾಲಸ್ವಾಮಿ, ವಿನಾಯಕ, ಕಾಳಮ್ಮ ಮುಂತಾದ ದೇವಾಲಯಗಳಿಂದಾಗಿ ಪ್ರೇಕ್ಷಣೀಯವಾಗಿದೆ. ಭಾಗಶಃ ಹಾಳಾಗಿದ್ದು, ಜೀರ್ಣೋದ್ಧಾರಗೊಂಡಿರುವ ಮರುಳೇಶ್ವರ ಗುಡಿಯು ಚೋಳರ ಕಾಲದ ತಮಿಳು ಶಾಸನವನ್ನು ಹೊಂದಿದೆ. ಸಂಗಮೇಶ್ವರ ಗುಡಿಯು ವಿಜಯನಗರ ಶೈಲಿಯಲ್ಲಿದೆ. ಗ್ರಾಮದೇವತೆ ಸೀಗೆಮಾರಮ್ಮನ ಜಾತ್ರೆಯು ಮೂರ್‍ನಾಲ್ಕು ವರ್ಷಗಳಿಗೊಮ್ಮೆ ಜರುಗುತ್ತಿದ್ದು, ಆಗ ಕೆಲವು ಅಪರೂಪದ ಆಚರಣೆಗಳನ್ನು ಮಾಡಲಾಗುತ್ತದೆ. ಊರಲ್ಲಿ ಕೋಟೆ ರಾಮಸ್ವಾಮಿ, ಸಿದ್ಧರಾಮೇಶ್ವರ ಮುಂತಾದ ಕಿರುಗುಡಿಗಳಿದ್ದು, ಮಸೀದಿಯೂ ಇದೆ. ಜಗತ್ಪ್ರಸಿದ್ಧ ಶಿವನಸಮುದ್ರ-ಮಧ್ಯರಂಗಗಳು ಸತ್ತೇಗಾಲಕ್ಕೆ ಮೂರು ಕಿ.ಮೀ. ಸಮೀಪದಲ್ಲಿದ್ದು, ಪಾಳ್ಯಕ್ಕೆ ಮೂರು ಕಿ.ಮೀ. ದೂರದಲ್ಲಿರುವ ಹಳೆಯ ಅಣೆಯನ್ನು ಧನಗೆರೆ ಬಳಿ ಕಾವೇರಿ ನದಿಗೆ ಕಟ್ಟಲಾಗಿದ್ದು, ಅದನ್ನು ಈಗಲೂ ನೋಡಬಹುದಾಗಿದೆ.

**ಬಂಡೀಪುರ ರಾಷ್ಟ್ರೀಯ ಅಭಯಾರಣ್ಯ:** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೨೦ ಕಿ.ಮೀ. ದೂರಕ್ಕಾದಂತೆ, ಮೈಸೂರು-ನೀಲಗಿರಿ ಹೆದ್ದಾರಿಯಲ್ಲಿರುವ ಇದು ಊಟಿಗೆ ೮೦ ಕಿ.ಮೀ. ದೂರದಲ್ಲಿದ್ದು, ಸಮುದ್ರ ಮಟ್ಟದಿಂದ ೯೭೫-೧೨೨೫ ಮೀಟರ್ ಎತ್ತರದಲ್ಲಿದೆ. ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಇದರ ಸುಮಾರು ೮೮೦ ಚ.ಕಿ.ಮೀ. ಅರಣ್ಯಪ್ರದೇಶವನ್ನು ೧೯೩೮ರಷ್ಟು ಹಿಂದೆ-ಯೇ ಬಂಡೀಪುರ ರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಲಾಗಿದ್ದು, ೧೯೭೪ರಲ್ಲಿ ಅದನ್ನು 'ಬಂಡೀಪುರ ರಾಷ್ಟ್ರೀಯ ಉದ್ಯಾನ'ವೆಂದು ಗುರುತಿಸಿ, ಅಲ್ಲಿರುವ ಸಸ್ಯ ಪ್ರಾಣಿ ಸಂಕುಲದ ಸಂರಕ್ಷಣೆಗೆ ಅದರಲ್ಲೂ ವಿಶೇಷವಾಗಿ ಹುಲಿರಕ್ಷಣೆ ಯೋಜನೆಗೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗಿದೆ. ಇದಕ್ಕೆ ೧೯೯೮ರಲ್ಲಿ 'ಶ್ರೀ ರಾಜೀವಗಾಂಧಿ

ಅಭಯಾರಣ್ಯ' ಎಂದು ಹೆಸರಿಡಲಾಗಿದೆ. ಹುಲಿ ಸಂರಕ್ಷಣೆ ಯೋಜನೆಯಡಿ ದೇಶದಲ್ಲಿ ಆಯ್ಕೆ ಮಾಡಿರುವ ೧೧ ಅಭಯಾರಣ್ಯಗಳಲ್ಲಿ ಬಂಡೀಪುರವೂ ಒಂದಾಗಿದೆ. ಈ ರಾಷ್ಟ್ರೀಯ ಉದ್ಯಾನವು ಮಧುಮಲೈ ವೈನಾಡು ಹಾಗೂ ನಾಗರಹೊಳೆ ವನ್ಯ ಮೃಗಧಾಮಗಳಿಂದ ಸುತ್ತುವರಿದಿದ್ದು, ಈ ಎಲ್ಲವೂ ಸೇರಿದ ಸುಮಾರು ೫೫೦೦ ಚ.ಕಿ.ಮೀ ವ್ಯಾಪ್ತಿಯ ಪ್ರದೇಶವನ್ನು ನೀಲಗಿರಿ ಜೀವವೈವಿಧ್ಯ ಕೋಶಾಗಾರವೆಂದೂ ಪರಿಗಣಿಸಲಾಗಿದ್ದು, ಇದು ಹುಲಿ, ಆನೆ ಮುಂತಾದ ವನ್ಯಮೃಗಗಳ ಸಂರಕ್ಷಣೆಗೆ ಮೀಸಲಾದ ವಿಶೇಷ ಅರಣ್ಯವಲಯವೆನಿಸಿದೆ. ಈ ವಲಯವು ಗಂಡಾನೆಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿಯ ಭೂಮಿ ಸಮತಟ್ಟಾಗಿದ್ದು, ಕಾಡಿನ ಪೊದೆ–ಗಿಡಗಳೂ ಹೆಚ್ಚು ದಟ್ಟವಾಗಿಲ್ಲ. ಆದರೆ ವೃಕ್ಷಗಳ ನಡುವೆ ಚಿಕ್ಕಪುಟ್ಟ ಹುಲ್ಲುಮಾಳಗಳಿದ್ದು, ತಾವರೆಕಟ್ಟೆ, ಕರೀಗೌಡನಕಟ್ಟೆ, ಅರಳೀಕಟ್ಟೆ, ಬೈಸ್ನಾಪುರಕೆರೆ, ಮೂಲಾಪುರಕೆರೆ ಮುಂತಾದ ಕೆರೆಕಟ್ಟೆ ನೀರ್ಗುಂಡಿಗಳು ವನ್ಯಮೃಗಗಳಿಗೆ ಜಲಾಸರೆಯನ್ನೊದಗಿಸಿದ್ದು, ಇಲ್ಲಿ ಮರಗಳ ಕಡಿಯುವಿಕೆಯನ್ನು ನಿಷೇಧಿಸಿದ್ದು, ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ವನ್ಯಮೃಗಗಳ ವೀಕ್ಷಣೆಗೆ ಪ್ರವಾಸಿಗರಿಗೆ ವಾಹನ, ಆನೆ ಸವಾರಿ ಸೌಕರ್ಯವಿದ್ದು, ಸುಸಜ್ಜಿತ ವಸತಿಗೃಹಗಳೂ ಇವೆ. ಬಂಡೀಪುರಕ್ಕೆ ಭೇಟಿ ನೀಡಲು ಏಪ್ರಿಲ್–ಜೂನ್ ಅವಧಿಯು ಹೆಚ್ಚು ಪ್ರಶಸ್ತವಾಗಿದೆ. **ಬಂಡೀಪುರ (೧೮೭):** ಅಭಯಾರಣ್ಯದಿಂದಾಗಿ ವಿಶ್ವಖ್ಯಾತಿ ಪಡೆದಿರುವ ಇದು ನಾಡಿನ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲೊಂದಾಗಿದೆ. ಇಲ್ಲಿಯ ತಾವರೆಕಟ್ಟೆ ತೂಬಿನ ಬಳಿಯಿರುವ ೧೨೪೯ರ ತಮಿಳು ಶಾಸನ, ಸೋಮೇಶ್ವರನ ಆಳ್ವಿಕೆಯಲ್ಲಿ ಧರ್ಮಚಿತ್ತ ಕೊಲ್ಲಗೌಡನು ೫೦೦ ಹೊನ್ನನ್ನು ವ್ಯಯಿಸಿ, ಕೆರೆ, ಹೂತೋಟ, ಸತ್ರಗಳನ್ನು ನಿರ್ಮಿಸಿ, ಗತಿಸಿದ ಧನಂಜಯನಿಗಾಗಿ ವೀರಗಲ್ಲನ್ನು ಹಾಕಿಸಿದ್ದನ್ನು ದಾಖಲಿಸಿದೆ. ಕಾಡಿನ ಚಿಕ್ಕಾಟಿ ಮುಖದ ವೀರರ ಗುಡಿ ಕಲ್ಲಿನ ಮೇಲಿರುವ ತಮಿಳು ಶಾಸನದ ವಿವರ ಅಸ್ಪಷ್ಟವಾಗಿದ್ದು, ಆ ಕಲ್ಲು ಕೂಡ ಇಂದು ಕಣ್ಮರೆಯಾಗಿದೆ. ಇಲ್ಲಿಯ ಕರಡಿಕಲ್ ಬೆಟ್ಟದ ಗುಲಗಂಜಿ ಬೋರೆ, ಬಲ್ಲೂರಮ್ಮನ ಗುಡಿ ಹಾಗೂ ಬೆಣಚುಕಲ್ಲು ಬೋರೆಗಳ ಬಳಿಯಲ್ಲಿ ಚಿಕ್ಕದೇವರಾಜ ಒಡೆಯರ ಉಲ್ಲೇಖವಿರುವ ಎಲ್ಲೆಕಲ್ಲುಗಳಿವೆ.

**ಬಾಗಳಿ(೨,೭೦೫):** ಜಿಲ್ಲಾಕೇಂದ್ರ ಚಾಮರಾಜನಗರದಿಂದ ತಿ.ನರಸೀಪುರ ರಸ್ತೆಯಲ್ಲಿ ಸುಮಾರು ನಾಲ್ಕು ಕಿ.ಮೀ. ಒಳಕ್ಕಾದಂತೆ ಇರುವ ಈ ಗ್ರಾಮದ ಪ್ರಾಚೀನತೆಯನ್ನು ಸುಮಾರು ೧೦ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಊರಾಚಿನ ಭುಜಂಗೇಶ್ವರ ದೇವಾಲಯದ ಬಳಿಯಿರುವ ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ಶಾಸನದಲ್ಲಿ ಇದು 'ಬಾಳ್ಗಳಿಯೂರು' ಎಂದು ಉಲ್ಲೇಖಗೊಂಡಿದ್ದರೂ, ೧೦೪೭ ರ ಇನ್ನೊಂದು ಶಾಸನದಲ್ಲಿ ಊರ ಹೆಸರು 'ಬಾಗುಳಿ' ಎಂದೇ ದಾಖಲಾಗಿದೆ.

ಊರಾಚೆ ಇರುವ ಭುಜಂಗೇಶ್ವರ ದೇವಾಲಯವು ಪುರಾತನ ರಚನೆಯಾಗಿದ್ದು, ಅಲ್ಲಿರುವ ಮೂರು ಶಾಸನಗಳಲ್ಲಿ ಒಂದು ಸುಮಾರು ಹತ್ತನೆಯ ಶತಮಾನದ ಲಿಪಿಯನ್ನು ಹೊಂದಿದ್ದು, ಕಚ್ಚೆಗ ನಿರ್ಗುಂದದೇವನ ಭೂದಾನವನ್ನು ದಾಖಲಿಸುತ್ತದೆ. ನೀರ್ಗುಂದದ ಕೂಚಿ ಭಟಾರನನ್ನು ಭುಜಂಗೇಶ್ವರ ದೇವಾಲಯದ ಮೊದಲ ಅರ್ಚಕನನ್ನಾಗಿ ನೇಮಿಸಿ ಹತ್ತು ಮಂದಿ ಪಾತ್ರದವರ ಯೋಗಕ್ಷೇಮವೂ ಸೇರಿದಂತೆ ದೇವಾಲಯದ ಆಡಳಿತ ನಿರ್ವಹಣೆಯನ್ನು ಅವನಿಗೆ ದಾನಿಗಳು ವಹಿಸಿದ್ದ ಅಂಶ ಈ ಶಾಸನದಲ್ಲಿದೆ. ಅಲ್ಲೇ ಇರುವ ಇದೇ ಕಾಲದ ಇನ್ನೊಂದು ಶಾಸನ ಪುನ್ನಾಡು ೬೦೦೦ವನ್ನು ಉಲ್ಲೇಖಿಸುತ್ತಾ ತಲಕಾಡು, ಮಾಲಂಗಿ, ಪೊಸವಳ್ಳಿಗಳನ್ನು ಹೆಸರಿಸುತ್ತಾ, ಯುದ್ಧದಲ್ಲಿ ಮಡಿದ ಸೋದರದ್ವಯರನ್ನು ಹೆಸರಿಸುತ್ತದೆ. ಅಲ್ಲೇ ಇರುವ ೧೧೪೨ರ ಇನ್ನೊಂದು ಶಾಸನ, ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ, ಬಾಗುಳಿಯ ಭೀಮಗೌಂಡನ ಮಗನೂ ನಿರ್ಗುಂದ ನಾಡಿನ ಅಧಿಪತಿಯ ಸೇನಾನಿಯೂ ಆಗಿದ್ದ ಯೋಧನೊಬ್ಬನು 'ನೀಲಗಿರಿ ಬೆಟ್ಟದ ಕೊಳ್ಳಲ್ಲ ಕೋಟೆ'ಯ ಮುತ್ತಿಗೆಯ ಸಂದರ್ಭದಲ್ಲಿ ಗತಿಸಿದ ಅಂಶವನ್ನು ನಿವೇದಿಸುತ್ತದೆ. ಅಲ್ಲೇ ಇರುವ ೧೨೭೮ರ ಶಾಸನ ಹೊಯ್ಸಳ ಮುಮ್ಮಡಿ

ನರಸಿಂಹನ ಆಳ್ವಿಕೆಯಲ್ಲಿ ಈ ದೇವಾಲಯದ ನಂದಾದೀಪದ ಸೇವೆಗೆಂದು ಸಮಸ್ತ ಗೌಡಪ್ರಜೆಗಳು ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಗರ್ಭಗೃಹ ಹಾಗೂ ವಿಶಾಲವಾದ ನವರಂಗವನ್ನು ಹೊಂದಿರುವ ಇಲ್ಲಿಯ ಭುಜಂಗೇಶ್ವರ ದೇವಾಲಯವು ಹೊಯ್ಸಳರ ಕಾಲದ ರಚನೆಯಾಗಿದ್ದು, ಮೈಸೂರರಸರ ಕಾಲದಲ್ಲಿ ಅದರ ಶಿಖರವು ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಗುಡಿಯ ಮುಂಭಾಗದ ಬಲಿಪೀಠದ ಬಳಿ ಸೂರ್ಯನ ಸುಂದರ ಶಿಲ್ಪವಿದೆ. ನೆರೆಯ ದೇಮಳ್ಳಿಯ ೧೫೧೭ರ ಶಾಸನ, ಪುರಹರ ಭುಜಂಗೇಶ್ವರ ದೇವರಿಗೆ ಬಾಗುಳಿ ಸ್ಥಳವನ್ನು ಸರ್ವಮಾನ್ಯವಾಗಿ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ಈ ದೇವಾಲಯವನ್ನು ಕೂಚಿಭಟಾರರ ಗುರುಗಳ ಗುರುಗಳಾದ ಬಾಲಬೊಂಜಂಗರ ಹೆಸರಲ್ಲಿ ನಿರ್ಮಿಸಿರುವಂತೆ ತೋರುತ್ತದೆ.

ಊರ ಪ್ರವೇಶದಲ್ಲೇ ಇರುವ ಖರಗೇಶ್ವರ ದೇವಾಲಯವು ವಿಭಿನ್ನ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ, ನವರಂಗಗಳಿಂದ ಕೂಡಿದೆ. ಗರ್ಭಗೃಹದಲ್ಲಿ ವೀರಗಲ್ಲನ್ನು ನಿಲ್ಲಿಸಲಾಗಿದ್ದು, ಗುಡಿಯ ಸುತ್ತಲೂ ಹಲವಾರು ವೀರಗಲ್ಲುಗಳನ್ನು ಕಾಣಬಹುದಾಗಿದೆ. ಈ ವೀರಗಲ್ಲುಗಳನ್ನು ಪರಿವಾರ ಜನಾಂಗದವರು ಈಗಲೂ ನಿಗದಿತ ದಿನದಂದು ಪೂಜಿಸುವ ವಾಡಿಕೆ ಇದೆಯಂತೆ. ಬದಿಯಲ್ಲೇ ಇರುವ ಮುದ್ದಗಲ್ಲಮ್ಮನ ಗುಡಿ ಬಳಿ ಪ್ರತೀ ವರ್ಷ ಓಕುಳಿಯಾಟವನ್ನು ಆಡಲಾಗುತ್ತದೆ. ಊರಾಚೆ ಇರುವ ಮಲಗರಸಮ್ಮನ ಗುಡಿಯು ಮೂಲತಃ ಸಪ್ತಮಾತೃಕಾ ದೇವಾಲಯವಾಗಿದ್ದು, ಗರ್ಭಗುಡಿಯಲ್ಲಿ ಇರುವ ವೈಷ್ಣವಿಯನ್ನೇ ಮಲಗರಸಮ್ಮನೆಂದು ಆರಾಧಿಸಲಾಗುತ್ತದೆ. ಈ ಗುಡಿಯನ್ನು ಗಂಗರ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದೆಂದು ತೋರುತ್ತದೆ. ಅಲ್ಲದೇ ಈ ಊರಲ್ಲಿ ಕಿಕ್ಕೇರಿ ಮಾರಮ್ಮನ ನವೀನ ದೇವಾಲಯವೂ ಇದೆ. ಇಲ್ಲಿಯ ನಾರಾಯಣಸ್ವಾಮಿ ಗುಡಿ ಮುಂದಿರುವ ಸುಮಾರು ೧೧-೧೨ನೇ ಶತಮಾನದ ಶಾಸನದ ವಿವರ ಹಾಳಾಗಿದ್ದರೂ, ಮೂರು ಕೊಳಗದ ಭೂಮಿಯನ್ನು ದಾನ ನೀಡಿದ್ದ ಅಂಶ ಗೊತ್ತಾಗುತ್ತದೆ.

**ಬಿಳಿಗಿರಿ ರಂಗನ ಬೆಟ್ಟ(೨,೨೭೦):** ತಾಲೂಕು ಕೇಂದ್ರ ಯಳಂದೂರಿನಿಂದ ಆಗ್ನೇಯಕ್ಕೆ ೨೪ ಕಿ.ಮೀ. ದೂರದಲ್ಲಿರುವ ಈ ಗಿರಿತಾಣವು ಸಮುದ್ರ ಮಟ್ಟದಿಂದ ಸುಮಾರು ೧೫೫೨ ಮೀಟರ್ ಎತ್ತರದಲ್ಲಿದೆ. ಪ್ರಕೃತಿಯ ಐಸಿರಿಯನ್ನು ಆಸ್ವಾದಿಸಲು ಪ್ರಶಸ್ತವಾದ ಸ್ಥಳವಾಗಿದ್ದು, ಅಲ್ಲಿರುವ ರಂಗನಾಥನ ದೇವಾಲಯದಿಂದಾಗಿ ಧಾರ್ಮಿಕ ಮಹತ್ವವನ್ನೂ ಪಡೆದಿದೆ. ಇಲ್ಲಿ ಪತ್ತೆಯಾಗಿರುವ ಶಿಲಾಯುಗ ಸಂಸ್ಕೃತಿಗೆ ಸೇರಿದ ಅವಶೇಷಗಳಿಂದ ಹಿಂದೆ ಇದು ಬೃಹತ್ ಶಿಲಾಯುಗ ಮಾನವರ ನೆಲೆಯಾಗಿದ್ದ ಅಂಶ ವೇದ್ಯವಾಗುತ್ತದೆ. ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೪೯ ಕಿ.ಮೀ. ದೂರದಲ್ಲಿರುವ ಇದನ್ನು ತಲುಪಲು ಚಾಮರಾಜನಗರದಿಂದ ಇರುವ ಮಾರ್ಗವು ಗಿರಿ-ಕಾನನ ಮಧ್ಯ ಸಾಗುವುದರಿಂದಾಗಿ ಪ್ರವಾಸಿಗರಿಗೆ ಮುದ ನೀಡುತ್ತದೆ. ಅದರಲ್ಲೂ ಯಳಂದೂರಿನಿಂದ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಬೆಟ್ಟದ ತಪ್ಪಲಿನಲ್ಲಿರುವ ಕೆರೆಯ ಬದಿಯಲ್ಲಿ ಗಂಗಾಧರೇಶ್ವರನ ಗುಡಿಯಿದ್ದು, ಶಿವರಾತ್ರಿಯಂದು ಜಾತ್ರೆಯಾಗುತ್ತದೆ. ಇಲ್ಲಿಯ ಬೆಟ್ಟದ 'ಶ್ರವಣ ಅರೆ' ಎಂಬಲ್ಲಿರುವ ೧೯೦೦ರ ಶಾಸನ ಬಹಳ ಹಾಳಾಗಿದ್ದು, ಹೊಯ್ಸಳ ಇಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ್ದ ಅಂಶವಷ್ಟೇ ವೇದ್ಯವಾಗುತ್ತದೆ. ಆದರೆ ಈ ಶಾಸನದಿಂದ ಹಿಂದೆ ಇದೊಂದು ಜೈನ ನೆಲೆಯಾಗಿದ್ದ ಅಂಶ ಸ್ಪಷ್ಟವಾಗುತ್ತದೆಯಾದರೂ ಇಂದು ಅಲ್ಲಿ ಯಾವುದೇ ಜೈನಾವಶೇಷ ಕಂಡು ಬಂದಿಲ್ಲ. ಆದರೆ ೧೬೬೭ರ ತಾಮ್ರಶಾಸನ, ಹದಿನಾಡು ರಾಜ್ಯದ ಮುದ್ದುರಾಜಯ್ಯನ ಕಾಲದ್ದಾಗಿದ್ದು, ಅದರಲ್ಲಿ ಈ ಸ್ಥಳವನ್ನು 'ಬಿಳಿಕಲ್ಲು' ಎಂತಲೂ ರಂಗನಾಥನನ್ನು 'ತಿರುವೆಂಕಟನಾಥ' ನೆಂತಲೂ ಕರೆದಿದ್ದು, ಈ ದೇವರ ಸೇವೆಗೆಂದು ೩೦ ವರಹಾ ಪುದುವಟ್ಟಿನಿಂದ ಬರುವ ಬಡ್ಡಿಯನ್ನು ದೇವರ ಮಹಾನವಮಿಯ ಸೇವೆಗೆಂದು ಬಿಟ್ಟ ಅಂಶವನ್ನು ತಿಳಿಸುತ್ತದೆ. ಇದೇ ಶಾಸನದಲ್ಲಿ 'ಬಿಳಿಗಿರಿ ಸ್ವಾಮಿ' ಉಲ್ಲೇಖವೂ ಇದೆ. ಈ ಬೆಟ್ಟವನ್ನು ಸಂಸ್ಕೃತದಲ್ಲಿ 'ಶ್ವೇತಗಿರಿ' ಎಂದೂ ಕರೆಯಲಾಗಿದೆ. ಬೇಟೆಗೆಂದು ಇಲ್ಲಿಗೆ ಬಂದಿದ್ದ ಟಿಪ್ಪುವಿಗೆ

ವೆಂಕಟೇಶನ ಈ ಗುಡಿಯನ್ನು ರಂಗನಾಥನ ಗುಡಿಯೆಂದು ಪರಿಚಯಿಸಿದ ಕಾರಣ, ಇದು 'ಬಿಳಿಗಿರಿ ರಂಗನಾಥ' ನೆಂದೇ ಹೆಚ್ಚು ಜನಪ್ರಿಯವಾಯಿತೆಂದು ಹೇಳಲಾಗುತ್ತದೆ. ದಿವಾನ್ ಪೂರ್ಣಯ್ಯನವರೂ ಈ ದೇವರ ಸೇವೆಗೆಂದು ಎರಡು ಗ್ರಾಮಗಳನ್ನು ದತ್ತಿ ನೀಡಿದ್ದರು. ಬೆಟ್ಟದ ಮೇಲಿರುವ ವೆಂಕಟನಾಥನ ಗುಡಿಯಿಂದಾಗಿ ಹುಟ್ಟಿಕೊಂಡಿರುವ ಆಲಯಾಶ್ರಿತ ಗ್ರಾಮ ಇದಾಗಿದ್ದು, ಆಸುಪಾಸಲ್ಲಿರುವ ಗಿರಿಜನರು ಸೋಲಿಗರಾಗಿದ್ದು, ರಂಗನಾಥನು ಸೋಲಿಗಕನ್ಯೆ ಕುಸುಮಾಲೆಯನ್ನು ವರಿಸಿದ್ದರಿಂದ ಅವನನ್ನು ಅವರು ರಂಗಭಾವನೆಂದೇ ಕರೆಯುತ್ತಾರೆ.

ಬೆಟ್ಟದ ಮೇಲೆ ವಿಶಾಲವಾದ ಪ್ರಾಕಾರದ ನಡುವೆ ಇರುವ ಈ ದೇವಾಲಯದ ಮರದ ಪ್ರಧಾನ ದ್ವಾರಬಾಗಿಲು ವೈವಿಧ್ಯಮಯ ಸಾಮಾಜಿಕ ದೃಶ್ಯ ಕೆತ್ತನೆ ಹಾಗೂ ಚಿತ್ತಾಕರ್ಷಕವಾದ ಮಿಥುನ ಶಿಲ್ಪಗಳಿಂದ ಕೂಡಿದ ಕುಸುರಿ ಕೆತ್ತನೆಗಳಿಂದಾಗಿ ಪ್ರವಾಸಿಗರ ಗಮನ ಸೆಳೆಯುತ್ತದೆ. ಗರ್ಭಗೃಹದಲ್ಲಿರುವ ಪ್ರಧಾನ ಶಿಲ್ಪವು ಒಂದು ಮೀಟರ್ ಎತ್ತರವಿದ್ದು, ಶಂಖ, ಚಕ್ರ, ಅಭಯ, ಹಾಗೂ ವರದ ಮುದ್ರೆಯಲ್ಲಿರುವ ವೆಂಕಟೇಶನದಾಗಿದ್ದು, ಆಕರ್ಷಕವಾಗಿದೆ. ಈ ಶಿಲ್ಪವನ್ನು ವಶಿಷ್ಠ ಮಹರ್ಷಿಗಳು ಪ್ರತಿಷ್ಠಾಪಿಸಿದ್ದೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ನವರಂಗದ ಸ್ತಂಭಗಳು ದಶಾವತಾರ ಕೆತ್ತನೆಯೂ ಸೇರಿದಂತೆ, ವೈಷ್ಣವ ಉಬ್ಬುಶಿಲ್ಪಗಳಿಂದ ಕೂಡಿದ್ದು, ಆಕರ್ಷಕವಾಗಿವೆ. ನವರಂಗದ ಬಲಭಾಗದ ಮೂರು ಕಿರುಕೋಷ್ಠಗಳಲ್ಲಿ ಶ್ರೀನಿವಾಸ, ಹನುಮಂತ ಹಾಗೂ ಶ್ರೀವೈಷ್ಣವ ಗುರು ಮನವಾಲ ಮಹಾಮುನಿಯ ಲೋಹದ ಪ್ರತಿಮೆಗಳಿವೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಬಲಭಾಗದಲ್ಲಿರುವ ಅಲಮೇಲ ಮಂಗಮ್ಮನ ಗುಡಿಯು ಗರ್ಭಗೃಹ, ವಿಶಾಲವಾದ ನವರಂಗ ಹಾಗೂ ಅರ್ಧಮಂಟಪಗಳನ್ನು ಹೊಂದಿದೆ. ಗರ್ಭಗುಡಿಯ ಇಕ್ಕೆಲದ ಕಿರುಕೋಷ್ಠಗಳಲ್ಲಿ ಆಳ್ವಾರ್ ಹಾಗೂ ಶ್ರೀದೇವಿ–ಭೂದೇವಿಯುಕ್ತ ಶ್ರೀನಿವಾಸನ ಮೂರ್ತಿಗಳಿವೆ. ಇಲ್ಲಿ ಪ್ರತಿವರ್ಷ ಸಂಕ್ರಾಂತಿಯ ಮಾರನೆಯ ದಿನ ಚಿಕ್ಕಜಾತ್ರೆಯಾಗುತ್ತಿದ್ದು, ಸಮೀಪದ ಬೂದಿತಿಟ್ಟು ಗ್ರಾಮದ ನಿಮ್ನ ಸಮಾಜದವರು ಸುಮಾರು ಒಂದೂ ಮುಕ್ಕಾಲು ಅಡಿಯ ದೊಡ್ಡ ಪಾದರಕ್ಷೆಯನ್ನು ಮೂರು ವರ್ಷಕ್ಕೊಮ್ಮೆ ದೇವರಿಗೆ ಅರ್ಪಿಸುವ ಸಂಪ್ರದಾಯ ಈಗಲೂ ಇದೆ. ಅದನ್ನು ಭಕ್ತಿಯಿಂದ ಭಕ್ತರು ತಲೆ ಮೇಲಿಟ್ಟುಕೊಳ್ಳುತ್ತಾರೆ. ವೈಶಾಖ ಚೌತಿಯಂದು ಇಲ್ಲಿ ವಿಜೃಂಭಣೆಯಿಂದ ಜರುಗುವ ರಂಗನಾಥನ ರಥೋತ್ಸವವು ದೊಡ್ಡ ಜಾತ್ರೆ ಎನಿಸಿಕೊಳ್ಳುತ್ತದೆ. ದೇವಾಲಯದ ಹಿಂಬದಿಯಲ್ಲಿ ಅನತಿ ದೂರದಲ್ಲೇ ಇರುವ ಪ್ರವಾಸಿ ವೀಕ್ಷಣಾ ವೇದಿಕೆಯು ಸುತ್ತಮುತ್ತಲಿನ ರುದ್ರರಮಣೀಯ ನಿಸರ್ಗವನ್ನು ವೀಕ್ಷಿಸಲು ಪ್ರಶಸ್ತವಾಗಿದೆ. ಬೆಟ್ಟದ ಮೇಲೆ ಕಳೆದ ಶತಮಾನದಲ್ಲಿ ನಿರ್ಮಾಣಗೊಂಡಿರುವ ಶ್ರೀರಾಘವೇಂದ್ರ ಮಠವಿದೆ. ಚಾಮರಾಜನಗರಕ್ಕೆ ಸಾಗುವ ಮಾರ್ಗದಲ್ಲಿ ಬೆಟ್ಟದ ತಪ್ಪಲಿನಲ್ಲಿ ತೊಳಸಮ್ಮನ ವೃಂದಾವನವಿದ್ದು, ಅಲ್ಲಿಂದ ಸ್ವಲ್ಪ ಮೇಲಕ್ಕಾದಂತೆ ಇರುವ ಕನಕದಾಸ ಗವಿಯಲ್ಲಿ ಸ್ವಲ್ಪ ಕಾಲ ತಂಗಿದ್ದ ಕನಕದಾಸರು ಹಲವು ಕೀರ್ತನೆಗಳ ಮೂಲಕ ವೆಂಕಟೇಶನ ಗುಣಗಾನ ಮಾಡಿದರೆಂಬ ನಂಬಿಕೆಯಿದೆ.

**ಬಿಳಿಗಿರಿ ರಂಗಸ್ವಾಮಿ ವನ್ಯಮೃಗಧಾಮ:** ಸುಮಾರು ೫೪೦ ಚ. ಕಿ.ಮೀ. ಅರಣ್ಯ ಪ್ರದೇಶವನ್ನುಳ್ಳ ಇದನ್ನು ೧೮೯೪ರಷ್ಟು ಹಿಂದೆಯೇ ರಕ್ಷಿತ ಅರಣ್ಯಪ್ರದೇಶವೆಂದು ಘೋಷಿಸಲಾಗಿದ್ದು, ೧೯೭೩ರಲ್ಲಿ ಇದನ್ನು 'ಬಿಳಿಗಿರಿ ರಂಗಸ್ವಾಮಿ ವನ್ಯಮೃಗಧಾಮ'ವೆಂದು ಗುರುತಿಸಿ, ಅಲ್ಲಿಯ ವೈವಿಧ್ಯಮಯ ವನ್ಯಮೃಗ ಸಂಕುಲಗಳ ಪ್ರಾಮುಖ್ಯತೆಯನ್ನು ಅರಿತು ಅದರ ಸಂರಕ್ಷಣೆಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಕರಿಕಲ್ಲು ಗಣಿಗಾರಿಕೆಯಿಂದಾಗಿ ಈ ವಿಶಿಷ್ಟ ಜೀವ ವೈವಿಧ್ಯ ಕೋಶಾಗಾರ ಕ್ಷೀಣಿಸುವಂತಾಗಿದ್ದು, ಅದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಪ್ರದೇಶದಲ್ಲಿ ಸುಮಾರು ೨೫೪ ಜಾತಿಯ ಪಕ್ಷಿಗಳು, ೨೪೩ ಔಷಧಿಯುಕ್ತ ಗಿಡಮೂಲಿಕೆಗಳು, ೧೧೪ ಜಾತಿಯ ಚಿಟ್ಟೆಗಳು, ಹಾಗೂ ದೇಶದ ೧/೧೦ ಭಾಗದಷ್ಟು ಇರುವೆಗಳನ್ನು ಇಲ್ಲಿ ಗುರುತಿಸಬಹುದಾಗಿದೆಯೆಂಬ ಮಹತ್ವದ ಅಂಶ ವಿವಿಧ ಸಂಶೋಧನಾ ಸರ್ವೇಕ್ಷಣ ವರದಿಗಳಿಂದ ವೇದ್ಯವಾಗುತ್ತದೆ. ಇಲ್ಲಿಯ ಕ್ಯಾತೇದೇವರ ಗುಡಿ ಪರಿಸರದಲ್ಲಿ ೨೧೬ ಆನೆ ಹಾಗೂ ೩೦ಕ್ಕೂ ಅಧಿಕ ಹುಲಿಗಳಿದ್ದ ಅಂಶ ೨೦೦೫ರ ಪ್ರಾಣಿ ಗಣತಿಯಿಂದ ತಿಳಿದುಬರುತ್ತದೆ.

**ಬೀರಂಬಾಡಿ (೨,೮೮೭):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ೧೪ ಕಿ.ಮೀ. ದೂರದಲ್ಲಿ ಪಶ್ಚಿಮಘಟ್ಟ ಶ್ರೇಣಿಯ ತಪ್ಪಲಿನ ಆಯಕಟ್ಟಾದ ಸ್ಥಳದಲ್ಲಿರುವ ಊರು. ವಿಜಯನಗರ ಕಾಲದ ೧೫೬೨ರ ಶಾಸನದಲ್ಲಿ ಈ ಊರಿನ ಹೆಸರು 'ಬಿರೆಯಂಬಾಡಿ' ಎಂದು ದಾಖಲಾಗಿದೆ. ಊರ ಕೆರೆ ಏರಿಯ ಮೇಲೆ ಇರುವ ವೀರಗಲ್ಲುಗಳಲ್ಲಿ ಕೆಲವು ಶಾಸನವನ್ನೂ ಹೊಂದಿವೆ. ಊರ ಮಧ್ಯದಲ್ಲಿರುವ ವೀರಗಲ್ಲೊಂದರ ಮೇಲಿನ ಶಾಸನ, ಸುಮಾರು ೧೦ನೇ ಶತಮಾನದ ಲಿಪಿಲಕ್ಷಣದಿಂದ ಕೂಡಿದ್ದು, ಚಾವುಂಡ ಪೆರ್ಮಾನಡಿಯು ಆಲತ್ತೂರಿಗೆ ಮುತ್ತಿಗೆ ಹಾಕಿದಾಗ ಹೋರಾಡುತ್ತಾ ಮಡಿದ ಹಲಗೆಯರ ಲಕ್ಕನಾಯಕನ ವೀರಮರಣವನ್ನು ದಾಖಲಿಸುತ್ತದೆ. ಇನ್ನೆರಡು ವೀರಗಲ್ಲು ಶಾಸನಗಳು ತ್ರುಟಿತಗೊಂಡಿವೆ. ಪಾಳುಬಸವನ ಗುಡಿ ಮುಂದಿರುವ ೧೮೯೧ರ ಇನ್ನೊಂದು ವೀರಗಲ್ಲು ಶಾಸನ ಸುಕಗೌಡನ ವೀರ ಮರಣವನ್ನು ದಾಖಲಿಸುತ್ತಿದ್ದು, ಊರ ಗೌಡರು ಕೆರೆ ಕಟ್ಟಿಸಿ, ಗುಡಿ ನಿರ್ಮಿಸಿ, ವೀರಗಲ್ಲು ನಿಲ್ಲಿಸಿದ್ದನ್ನು ದಾಖಲಿಸಿದೆ. ಇಲ್ಲಿಯ ಮಾರಿಗುಡಿ ಬಳಿಯಿರುವ ಇನ್ನೊಂದು ಶಾಸನ, ಸುಮಾರು ೧೪ನೇ ಶತಮಾನದ್ದಾಗಿದ್ದು, ಪಾರ್ಶ್ವನಾಥ ತೀರ್ಥಂಕರ ಹಾಗೂ ಧರಣೇಂದ್ರ ಯಕ್ಷರನ್ನೂ ಸ್ತುತಿಸುತ್ತಿದ್ದು, ಹೆಚ್ಚಿನ ವಿವರ ಲಭ್ಯವಿಲ್ಲ. ಊರ ಚಾವಡಿ ಬಳಿಯಿರುವ ೧೫೬೨ರ ಶಾಸನ, ವಿಜಯಾಪುರ ಸೀಮೆಯೊಳಗಣ 'ಬಿರೆಯಂಬಾಡಿ' ಗ್ರಾಮವನ್ನು ತೆರಕಣಾಂಬಿಯ ಅರ್ಚಕ ಹೊನ್ನಪ್ಪನಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ. ಊರಲ್ಲಿ ಮಹಾದೇಶ್ವರ, ಕರಗಪ್ಪ, ಮಾರಿ ಮುಂತಾದ ಗುಡಿಗಳಿದ್ದು, ಮಹಾದೇಶ್ವರ ಗುಡಿಯು ಕೆರೆಯ ಬದಿಯಲ್ಲಿದೆ. **ದೇವರಹಳ್ಳಿ:** ಗೋಪಾಲಸ್ವಾಮಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿರುವ ಇದು ಬೀರಂಬಾಡಿಯ ಉಪಗ್ರಾಮವಾಗಿದ್ದು, ಬೀರಂಬಾಡಿಗೆ ಎರಡು ಕಿ.ಮೀ. ದೂರದಲ್ಲಿದೆ. ಇಲ್ಲಿಂದ ವರದಿಯಾಗಿರುವ ಸುಮಾರು ಎಂಟನೆಯ ಶತಮಾನಕ್ಕೆ ಸೇರಿದ ಶಾಸನ, ದುರ್ವಿನೀತ ಎರೆಯಪ್ಪನ ಸೈನ್ಯದ ಉಪ್ಪಗೊಲಗ್ರಾಮದ ೭೦ ಯೋಧರು, 'ಕೊಸರುಪುಲ್ಕಿ'ಯನ್ನು ಮುತ್ತಿದ ಶತ್ರು ಸೇನೆಯನ್ನು ಹಿಮ್ಮೆಟ್ಟಿಸುವಲ್ಲಿ ತೋರಿದ ಸಾಹಸವನ್ನು ಹೊಗಳುತ್ತಾ, ಪುಣಿಸೂರು ಗ್ರಾಮವನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಗಂಗ ವಂಶಾವಳಿಯನ್ನು ನೀಡುವ ಈ ಶಾಸನವನ್ನು ವಿದ್ವಾಂಸರು ಶ್ರೀಪುರುಷನ ಕಾಲಕ್ಕೆ ಗುರುತಿಸುತ್ತಾರೆ. ಮರವೊಂದರ ಬುಡದಲ್ಲಿರುವ ಮಹಿಷಮರ್ಧಿನಿಯ ಅಷ್ಟಭುಜ ಶಿಲ್ಪವು ಗಂಗ ಶಿಲ್ಪಲಕ್ಷಣದಿಂದ ಕೂಡಿದ್ದು, ಆಕರ್ಷಕವಾಗಿದೆ, ಊರ ಶನಿದೇವರಗುಡಿ ಬಳಿಯ ಆಲದ ಮರದ ಬಳಿ ಸುಂದರವಾದ ಸೂರ್ಯ ಶಿಲ್ಪವಿದೆ.

**ಬೆಳಚಲವಾಡಿ(೧,೯೧೬):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಉತ್ತರಕ್ಕೆ ೧೫ ಕಿ.ಮೀ. ದೂರದಲ್ಲಿರುವ ಈ ಊರಿನಿಂದ ವರದಿಯಾಗಿರುವ ಸುಮಾರು ೧೧ನೇ ಶತಮಾನದ ಶಾಸನದಿಂದ ಅದರ ಪ್ರಾಚೀನತೆಯನ್ನು ಚಾರಿತ್ರಿಕವಾಗಿ ೧೦ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಊರ ಹೊಲವೊಂದರಲ್ಲಿರುವ ಗಂಗ ನೀತಿಮಾರ್ಗ ಪೆರ್ಮಾಡಿಯ ಆಳ್ವಿಕೆಯ ೩೭ನೇ ವರ್ಷಕ್ಕೆ ಸೇರಿದ ಶಾಸನ (೧೦೧೩)ಮಾರಯ್ಯನಿಗೆ ನಾರಣಾಗಾರ ಎಂಬ ಗ್ರಾಮವನ್ನು ಜೇಡ ಎರೆಗೌಡ, ಕುರುವತ್ತಿ ಬೇಡಗೌಡರು ಉಂಬಳಿ ನೀಡಿದ್ದನ್ನು ದಾಖಲಿಸಿದೆ. ಊರ ರಾಮಲಿಂಗನಗುಡಿ ಬಳಿಯಿರುವ ೧೧೭೧ರ ಶಾಸನ ಒಂದನೇ ನರಸಿಂಹನ ಆಳ್ವಿಕೆಯಲ್ಲಿ ಪದಿನಾಡು ೨೦ರಲ್ಲಿದ್ದ ಬೆಳತುಲವಾಡಿಯನ್ನು ಕುಮಾರಿನಬೀಡಿನ ರಾಮನಾಥ ದೇವರ ಸೇವೆಗೆಂದು ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಸಾಂದರ್ಭಿಕವಾಗಿ ಉಲ್ಲೇಖಿತಗೊಂಡಿರುವ ಮೂಲಸ್ಥಾನ ದೇವರೇ ಪ್ರಸ್ತುತ ಇರುವ ರಾಮಲಿಂಗ ಗುಡಿಯಾಗಿದೆ. ಊರ ಬಾಗಿಲ ಬಳಿಯಿರುವ ೧೫೪೯ರ ಶಾಸನ ಗೋವಿಂದರಾಜ ಒಡೆಯನು ಹೊನ್ನಹಲಗೆ ಒಡೆಯರಿಗೆ ಭೂಮಿಯನ್ನು ಗುತ್ತಿಗೆಯಾಧಾರದ ಮೇಲೆ ನೀಡಿದ ಅಂಶವನ್ನು ದಾಖಲಸುತ್ತದೆ.

**ಬೊಮ್ಮಲಾಪುರ(೩,೩೫೨):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ದಕ್ಷಿಣಕ್ಕೆ ೧೨ ಕಿ.ಮೀ. ದೂರದಲ್ಲಿರುವ ಇದು ಒಂಭತ್ತನೆಯ ಶತಮಾನಕ್ಕೆ ಸೇರಿದ ಗಂಗ ಶಾಸನದಿಂದಾಗಿ, ಪ್ರಾಚೀನ ಊರಾಗಿದೆ. ಪೆರ್ಮಾಡಿ ಗೌಡನ ಕೋರಿಕೆಯಂತೆ, ಅರಸನು ಚಿನ್ನಯ್ಯನ ಮಗ ನರಸಿಂಗಯ್ಯನಿಗೆ ಭೂದಾನ ನೀಡಿದ್ದನ್ನು ಈ ಶಾಸನ ದಾಖಲಿಸುತ್ತದೆ. ಇಲ್ಲಿಯ ರಾಮೇಶ್ವರ ಗುಡಿಯ ಪಶ್ಚಿಮಕ್ಕೆ ಮಠದ ಆವರಣದಲ್ಲಿಟ್ಟಿರುವ ೧೩೧೮ರ ಶಿಲಾಶಾಸನ, ಇಮ್ಮಡಿ ರಾಹುತರಾಯ, ಮಾಧವದಂಡನಾಯ್ಕನ ಆಳ್ವಿಕೆಯಲ್ಲಿ ಕೆಂಪಣ್ಣನು, ಕುಡುಗುನಾಡ ಹೈಗೆಯಲ್ಲಿ ಮಾಧವ ಸಮುದ್ರವನ್ನು ನಿರ್ಮಿಸಿ, ಶ್ರೀರಾಮಯ್ಯ ದೇವರಿಗೆ, ಮೂಲಸ್ಥಾನದೇವರಿಗೆ, ಹಾಗೂ ಹೈಗೆಯ ಗ್ರಾಮದೇವತೆಗೆ ಭೂದಾನ ನೀಡಿದ್ದನ್ನು ದಾಖಲಿಸುತ್ತದೆ.

**ಮಂಗಲ(೬,೪೬೩):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಉತ್ತರಕ್ಕೆ ಹತ್ತು ಕಿ.ಮೀ. ದೂರದಲ್ಲಿರುವ ಇದು ಸುಮಾರು ೧೦ನೇ ಶತಮಾನದ ಶಾಸನಗಳಲ್ಲೂ 'ಮಂಗಲ' ಎಂದೇ ಉಲ್ಲೇಖಿತಗೊಂಡಿದೆ. ಇಲ್ಲಿಂದ ಈವರೆಗೆ ೧೨ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಊರ ಮನೆಯೊಂದರ ಮುಂದಿರುವ ೯೬೫ರ ಶಾಸನ ಗಂಗ ಇಮ್ಮಡಿ ಮಾರಸಿಂಹನ ಆಳ್ವಿಕೆಯಲ್ಲಿ ಪೆರ್ಗಡೆ ಮಾಚಯ್ಯನು ಮಂಗಲದ ಗಾವುಂಡಗೆರೆಯ ಮೆಟ್ಟಿಲು ಪಡಿಗಳ ನಿರ್ವಹಣೆಗೆಂದು ದತ್ತಿ ನೀಡಿದ್ದನ್ನು ದಾಖಲಿಸಿದೆ. ಬಸವೇಶ್ವರ ಗುಡಿಯ ನೆಲಹಾಸಲ್ಲಿರುವ ಸುಮಾರು ೧೦ನೇ ಶತಮಾನದ ತ್ರುಟಿತ ಶಾಸನ, ಮಂಗಲದ ಐವತ್ತೊಕ್ಕಲು ಬಿಟ್ಟ ದತ್ತಿಯನ್ನು ದಾಖಲಿಸಿದರೆ, ಊರ ಉತ್ತರದ ಹೊಲವೊಂದರಲ್ಲಿರುವ ಸುಮಾರು ೧೦ನೇ ಶತಮಾನದ ಇನ್ನೊಂದು ಶಾಸನ, ಮಂಗಲದ ಹನ್ನೆರಡು ಗೌಡಪ್ರಜೆಗಳು ಮಹಾಬಲಯ್ಯನ ಮಗಳಾದ ಗಾವುಂಡಬ್ಬೆಯು ನಿರ್ಮಿಸಿದ ಪೊಳಲುಸಮುದ್ರವೂ ಸೇರಿದಂತೆ ಮೂರು ಕೆರೆಗಳ ನಿರ್ವಹಣೆಗೆ ನಾಲ್ಕಂಡುಗ ಗದ್ದೆಯನ್ನು ಕೆರೆಗೂಡಗೆ ನೀಡಿದ್ದನ್ನು ದಾಖಲಿಸಿದೆ. ಜ್ಯೋತಿಕಲ್ಲು ಕೊಳದ ಬಂಡೆ ಮೇಲಿರುವ ಸು.೧೦–೧೧ನೇ ಶತಮಾನದ ನಿಸಿಧಿ ಶಾಸನ ಗುಣನಂದಿ ಭಟ್ಟಾರರು ಮೂವತ್ತೊಂದು ದಿವಸ ಸನ್ಯಾಸನಗೈದು ನಿರ್ವಾಣ ಹೊಂದಿದ್ದನ್ನು ದಾಖಲಿಸುತ್ತದೆ. ಆಲ್ಗೆರೆ ಕಟ್ಟೆಯ ಮೇಲಿರುವ ೧೦೫೦ರ ತಮಿಳು ಶಾಸನ, ಚೋಳ ಒಂದನೇ ರಾಜಾಧಿರಾಜನ ಆಳ್ವಿಕೆಯ ೩೨ನೇ ವರ್ಷದಲ್ಲಿ ನೀಡಲ್ಪಟ್ಟಿದ್ದು, ಶತ್ರುಗಳ ಮೇಲೆ ಗೆಲುವು ಪಡೆದ ಚೋಳ ರಾಜನು ಬ್ರಹ್ಮದೇಯದತ್ತಿ ನೀಡಿದ್ದನ್ನು ದಾಖಲಿಸಿದೆ. ಕೇತೆದೇವರ ಗುಡಿಯ ಧ್ವಜಸ್ತಂಭ ಶಾಸನ ಮಂಗಲದ ಮೂಲಸ್ತಾನ ನಾನಾ ದೇಶೀ ಈಶ್ವರ ದೇವರಿಗೆ ದಾನ ನೀಡಿದ್ದನ್ನು ದಾಖಲಿಸಿದರೆ, ಇನ್ನೊಂದು ಶಾಸನ, ಆ ದೇವರನ್ನು ತಿರುಮೂಲಸ್ಥಾನ ಒಡೆಯ ಮಾದೇವನೆಂದು ಹೆಸರಿಸಿದೆ.

ಇಲ್ಲಿಯ ಭೋಗೇಶ್ವರ ಗುಡಿಯ ತಳಪಾದಿ ಕಲ್ಲಿನ ಮೇಲಿರುವ ಸುಮಾರು ೧೧ನೇ ಶತಮಾನಕ್ಕೆ ಸೇರಿದ ಮೂರು ಸಾಲಿನ ಶಾಸನ, ಮಂಗಲದ ಗುಜ್ಜ ಭೋಗಗಾವುಂಡನು ಮೂಲಸ್ಥಾನವಾಗಿ ಶಿವಾಲಯವನ್ನು ನಿರ್ಮಿಸಿ ಭೂ ದಾನ ನೀಡಿದ ಅಂಶವನ್ನು ದಾಖಲಿಸಿದರೆ, ಅದೇ ಗುಡಿ ಮುಂದಿರುವ ಇದೇ ಕಾಲಕ್ಕೆ ಸೇರಿದ ತಮಿಳು ಶಾಸನ, ಇಡೈನಾಡ ಮಂಗಲದ ಕೋಯಿಲ್ (ಗುಡಿ) ಗೆ ೧೮ ದೇಶದ ೩೨ ಪಟ್ಟಣದ ವರ್ತಕರನ್ನೊಳಗೊಂಡ ಅಯ್ಯಾವೊಳೆ–೫೦೦ (೧೨೦೦) ಹಾಗೂ ನಾನಾದೇಶಿ (ನಾನ್ಗುದಿಶೆ) ಸಾವಿರದೈನೂರ್ವರು ಎರಡು ಹಣದ ಲೆಕ್ಕದಲ್ಲಿ ದಾನ ನೀಡಿದ್ದನ್ನು ದಾಖಲಿಸಿದೆ. ಈ ಶಾಸನಗಳಿಂದ ಈ ಗ್ರಾಮವು ಹಿಂದೆ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಅದರ ಕೀರ್ತಿ ಪ್ರತಿಷ್ಠೆಗಳು ೧೮ ನಾಡಿನ ೩೨ ಪಟ್ಟಣಗಳಲ್ಲಿ ಪ್ರಸಿದ್ಧವಾಗಿದ್ದ ಅಂಶ ವೇದ್ಯವಾಗುತ್ತದೆ. ಅಲ್ಲದೇ ಹಿಂದೆ ಇದೊಂದು ಅಗ್ರಹಾರವೂ ಆಗಿದ್ದು, ತಮಿಳಿನ ಮಂಗಲಮ್ ಅದನ್ನೇ ಸೂಚಿಸುತ್ತದೆ. ಇಲ್ಲಿಯ ಭೋಗೇಶ್ವರ ದೇವಾಲಯ ಸುಮಾರು ೧೧ನೇ ಶತಮಾನದ ನಿರ್ಮಾಣವಾಗಿದ್ದು, ಇಂದು ಶಿಥಿಲಾವಸ್ಥೆಯಲ್ಲಿದೆ. ಊರ ಉತ್ತರಕ್ಕೆ ಶಂಕರೇಶ್ವರ ಗುಡ್ಡದ ಗವಿಮಠದ ಶಾಸನ, ಮೈಸೂರು ಅರಸ

ಇಮ್ಮಡಿಕೃಷ್ಣರಾಜರು, ತಮ್ಮ ರಾಣಿ, ಬಾಳ್ವೆಅರಸಿಯರೊಂದಿಗೆ ಮಂಗಲದ ಬಳಿಯ ಬೆಟ್ಟದ ಶಂಕರೇಶ್ವರ ದೇವರ ಸೇವೆಗೆಂದು ಬಂದಿದ್ದಾಗ, ಭೂದಾನ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನ, ಮಂಗಲದ ಆರು ಸಾವಿರ ಸೀಮೆಯ ಸಮಸ್ತರು ಶಂಕರೇಶ್ವರ ದೇವರ ಗವಿಮಠಕ್ಕೆ ಗುಳಕ್ಕೆ ಹಾಗದ ಲೆಕ್ಕದಲ್ಲಿ ಸಂಗಯ್ಯನಕೊಪ್ಪಲಿನ ಜಮೀನಿನ ತೆರಿಗೆಯನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ.

**ಮದ್ದೂರು (೫,೯೫೯):** ತಾಲೂಕು ಕೇಂದ್ರ ಯಳಂದೂರಿನಿಂದ ೧೩ ಕಿ.ಮೀ. ದೂರದಲ್ಲಿರುವ ಇದರ ಮೊದಲ ಉಲ್ಲೇಖ, ಇಲ್ಲಿಯ ದೇಶೇಶ್ವರ ಗುಡಿ ಮುಂದಿರುವ ೯೮೨ರ ಕನ್ನಡ ಶಾಸನದಲ್ಲಿ ಮಲ್ದೂರು ರೂಪದಲ್ಲಿ ದೊರೆತರೆ ೧೩೨೮, ೧೩೮೧ರ ತಮಿಳು ಶಾಸನಗಳಲ್ಲಿ 'ಉಪೇಂದ್ರ ಪುರವಾದ ಮದ್ದೂರು, ಮರದೂರು ರೂಪದಲ್ಲೂ, ವೀರಗಲ್ಲೊಂದರಲ್ಲಿ 'ಪೆರುಮರುದೂರಾದ ಶ್ರೀ ಶವನಮಾದೇವಿ ಚತುರ್ವೇದಿ ಮಂಗಲ' ಹಾಗೂ ಪಂಚವಲಿ ಮಹಾದೇವಿ ಚತುರ್ವೇದಿ ಮಂಗಲವಾದ ಪೆರುಮರುದೂರು' ರೂಪದಲ್ಲೂ ಲಭಿಸುತ್ತದೆ. ಅದರಲ್ಲೂ ಊರ ಹೊಲವೊಂದರಲ್ಲಿರುವ ೧೩೨೮ರ ಶಾಸನ ಊರ ಬೆದ್ದಲು ಭೂಮಿಯಲ್ಲಿ ಉಪೇಂದ್ರಪಟ್ಟಣವನ್ನು ನಿರ್ಮಿಸಲು ಕ್ರಮ ಕೈಗೊಂಡು, ನೆಲೆಸಿದ ವಕ್ಕಲಿಗೆ ಮೊದಲ ಮೂರು ವರ್ಷ ಮನೆಗಂದಾಯದ ರಿಯಾಯ್ತಿ ನೀಡಿದ್ದನ್ನು ತಿಳಿಸುತ್ತದೆ. ಆರಂಭದಲ್ಲಿ ಸಣ್ಣ ಊರಾಗಿದ್ದ ಮದ್ದೂರು, ನಂತರದಲ್ಲಿ ಅಗ್ರಹಾರವಾಗಿ ಪಟ್ಟಣವಾಗಿ ಪ್ರಾಮುಖ್ಯತೆ ಗಳಿಸಿದ ಅಂಶ ಇದರಿಂದ ವೇದ್ಯವಾಗುತ್ತದೆ. ಇಲ್ಲಿಂದ ಈವರೆಗೆ ಲಭ್ಯವಿರುವ ಸುಮಾರು ೧೦-೧೬ನೇ ಶತಮಾನಕ್ಕೆ ಸೇರಿದ ೨೫ ಶಾಸನಗಳಲ್ಲಿ ಒಂದು ಕೂಟ ಶಾಸನವೂ ಸೇರಿದೆ.

ಇಲ್ಲಿಯ ದೇಶೇಶ್ವರ ಗುಡಿಯ ಉತ್ತರ ಗೋಡೆಯಲ್ಲಿ ಸೇರಿರುವ ೯೮೨ರ ಶಾಸನ, ಪೊಲ್ಲಯ್ಯನು ನಿರ್ಮಿಸಿದ ದೇಗುಲಕ್ಕೆ ಮಲ್ದೂರಿನ ಸಾವಿರ ಬ್ರಾಹ್ಮಣರು ಓರೆಗಾಲದಲ್ಲಿ ಹತ್ತು ಖಂಡುಗ ಗದ್ದೆಯನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಈ ಗುಡಿಯ ತಳಪಾದಿಕಲ್ಲ ಮೇಲಿರುವ ೧೩೮೧ ರ ಎರಡು ಶಾಸನಗಳು ದೇಶಿನಾಥದೇವರ ಸೇವೆಗೆಂದು ದಾನ ನೀಡಿದ್ದನ್ನು ತಿಳಿಸುತ್ತವೆ. ಅಲ್ಲದೇ ಸಾಂದರ್ಭಿಕವಾಗಿ ಕಲುಮಾಣಿಕದೇವರ ಉಲ್ಲೇಖವೂ ಇದೆ. ಅದೇ ಗುಡಿಯ ಕಂಬಗಳ ಮೇಲಿರುವ ನಾಲ್ಕು ಶಾಸನಗಳು ದಾನಿಗಳನ್ನು ಹೆಸರಿಸುತ್ತವೆ. ಈ ಶಾಸನಗಳಿಂದ ಮೂಲತಃ ೧೦ನೇ ಶತಮಾನದಲ್ಲಿ ನಿರ್ಮಾಣಗೊಂಡಿದ್ದ ಈ ಗುಡಿಯು ಹೊಯ್ಸಳರ ಕಾಲದಲ್ಲಿ ಜೀರ್ಣೋದ್ಧಾರದೊಂದಿಗೆ ವಿಸ್ತಾರಗೊಂಡಿರುವಂತೆ ತೋರುತ್ತದೆ.

ಇಲ್ಲಿಯ ಚಕ್ರಪಾಣಿ ಗುಡಿಯ ರಂಗಮಂಟಪದ ತೊಲೆಯ ಮೇಲಿರುವ ೧೨೪೩ರ ಶಾಸನ, ಶ್ರೀರಂಗದಂಡನಾಯ್ಕರ ಅಧಿಕಾರಿಯೊಬ್ಬ ಮಾಡಿಸಿದ ಭಾರವಡ್ಡಿಗೆ (ತೊರೆ)ಯನ್ನು ಉಲ್ಲೇಖಿಸಿದರೆ ಈ ದೇವಾಲಯದ ರಂಗಮಂಟಪದ ಕಂಬಗಳ ಮೇಲಿರುವ ಸುಮಾರು ೧೩ನೇ ಶತಮಾನಕ್ಕೆ ಸೇರಿದ ಕಿರು ಶಾಸನಗಳು, ತಲಾ ಮೂರು ಗದ್ಯಾಣ ವೆಚ್ಚದಲ್ಲಿ ಕಂಬಗಳನ್ನು ಮಾಡಿಸಿದ ದಾನಿಗಳನ್ನು ಹೆಸರಿಸುತ್ತವೆ. ಈ ಗುಡಿಯ ಇನ್ನೊಂದು ರಂಗಮಂಟಪದ ಮೇಲಿರುವ ೧೩೭೬ರ ಶಾಸನ, ಶಿಥಿಲವಾಗಿದ್ದ ನೀಲ ಮಾಣಿಕ್ಯ ದೇವಾಲಯವನ್ನು ಮಂತ್ರಿ ನಾಗರಸನ ಆದೇಶದಂತೆ, ಚಂದರಸನು ಜೀರ್ಣೋದ್ಧಾರ ಮಾಡಿಸಿ, ಒಳಗಣ ಕಲ್ಲಮಂಟಪ, ಮತ್ತು ಹೊರಗಣ ಮಾಳಿಗೆಯನ್ನು ಹೊಸದಾಗಿ ಮಾಡಿಸಿ ವಿವಿಧ ಸುಂಕಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಊರ ಅಂಗಡಿಯೊಂದರ ಮುಂದಿರುವ ಹೊಯ್ಸಳ ಇಮ್ಮಡಿ ನರಸಿಂಹನ ಕಾಲದ ಶಾಸನ, ದಂಡನಾಯಕ ಬಿಟ್ಟಮಯ್ಯನು ಕೆರೆಯನ್ನು ಅಗೆಸಿದ ಅಂಶವನ್ನು ತಿಳಿಸಿದರೆ, ಹೊಲವೊಂದರಲ್ಲಿ ಇರುವ ೧೩೩೬ರ ಶಾಸನ ಕುಶಲಕರ್ಮಿ ಕಂಚುಗಾರ ಮಂಬೋಜನ ವೃತ್ತಿ ಕೌಶಲ್ಯವನ್ನು ಮೆಚ್ಚಿನ ಉಪೇಂದ್ರಪುರದ

ಮಹಾಜನಗಳು ೧೮ ಗಡಿಬ (ಅಳತೆಗೋಲು) ದಲ್ಲಿ ೫೦ ಕಂಬ ಪ್ರಮಾಣದ ನಿವೇಶನವನ್ನು ಉಪೇಂದ್ರಪಟ್ಟಣದ ಪೂರ್ವಭಾಗದಲ್ಲಿ ಕಂಚುಗಾರ ಒಕ್ಕಲಿನವರಿಗಾಗಿ ಸರ್ವಮಾನ್ಯವಾಗಿ ದಾನ ನೀಡಿದ್ದನ್ನು ದಾಖಲಿಸುತ್ತದೆ. ಊರಾಚೆ ತೋಟವೊಂದರಲ್ಲಿರುವ ೧೫೮೩ರ ಶಾಸನ, ಉಪೇಂದ್ರಪುರದ ಸೋಮೇಶ್ವರ ದೇವರಿಗೆಂದು ಒಂದು ಖಂಡುಗ ಭೂಮಿಯನ್ನು ದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಇದರಿಂದ ಮೇಲಿನ ಶಾಸನೋಕ್ತ ನೀಲಮಾಣಿಕ್ಯ ಗುಡಿಯೇ ಶಾಸನವಿರುವ ಚಕ್ರಪಾಣಿ ಗುಡಿ ಎಂದು ಗುರುತಿಸಬಹುದಾಗಿದೆ.

**ಮಲೆಮಹದೇಶ್ವರ ಬೆಟ್ಟ (೧೦,೬೭೬):** ತಾಲೂಕು ಕೇಂದ್ರ ಕೊಳ್ಳೆಗಾಲದಿಂದ ಎಂಭತ್ತು ಕಿ.ಮೀ. ದೂರದಲ್ಲಿರುವ ಇದು ಆಲಯಾಶ್ರಿತ ಗ್ರಾಮವಾಗಿದೆ. ನಾಡಿನ ಪ್ರಮುಖ ತೀರ್ಥಕ್ಷೇತ್ರಗಳಲ್ಲಿ ಒಂದಾಗಿದ್ದು, ಅತ್ಯಂತ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿದೆ. ದಕ್ಷಿಣ ಭಾರತದ ವಿವಿಧ ಭಾಗಗಳಿಂದ ಭಕ್ತರನ್ನು ಅಧಿಕ ಸಂಖ್ಯೆಯಲ್ಲಿ ಆಕರ್ಷಿಸುತ್ತಿದೆ. ಮಹದೇಶ್ವರ ಬೆಟ್ಟ' ಮಹಾದೇಶ್ವರ ಮಲೈ', 'ಮಾದಯ್ಯನ ಗಿರಿ' ಎಂದೆಲ್ಲಾ ಕರೆಯಲ್ಪಡುವ ಇದು ಆನೆಮಲೈ, ಜೇನುಮಲೈ, ಕಾನುಮಲೈ, ಪಚ್ಚೆಮಲೈ, ಪವಳಮಲೆ, ಪೊನ್ನಾಚಿಮಲೆ ಹಾಗೂ ಕೊಂಗುಮಲೆ ಎಂಬ ಪುರಾಣೋಕ್ತ ಏಳು ಮಲೆಗಳ ಶ್ರೇಣಿಯಿಂದ ಕೂಡಿದೆ. ಮಹದೇಶ್ವರ ಬೆಟ್ಟ ಶ್ರೇಣಿಯಲ್ಲಿ ಮಹದೇಶ್ವರ ಹಾಗೂ ಪೊನ್ನಾಚಿಮಲೆಗಳು ಶ್ರೀಗಂಧದ ಮರಗಳಿಂದ ಕೂಡಿವೆ. ಕರ್ನಾಟಕದಿಂದ ಕೊಳ್ಳೇಗಾಲ–ಹನೂರು–ಕೌದಳ್ಳಿ ಮಾರ್ಗವಾಗಿಯೂ ತಮಿಳುನಾಡಿನಿಂದ ಮೆಟ್ಟೂರು–ಪಾಲಾರ್ ಮಾರ್ಗವಾಗಿಯೂ ಮಹದೇಶ್ವರ ಸನ್ನಿಧಿಯನ್ನು ತಲುಪಲು ಉತ್ತಮ ರಸ್ತೆ ಸೌಕರ್ಯವಿದೆಯಾದರೂ, ಘಟ್ಟರಸ್ತೆಯಾದ ಕಾರಣ ಅಂಕುಡೊಂಕಾದ ಮಾರ್ಗದಲ್ಲಿ ಸಾಗಬೇಕಾಗುತ್ತದೆ. ಕೌದಳ್ಳಿಯಿಂದ ೧೬ ಕಿ.ಮೀ. ದೂರದಲ್ಲಿರುವ ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟದ ತಪ್ಪಲು ಆರಂಭವಾಗುತ್ತಿದ್ದು, ಬೆಟ್ಟವೇರಲು ಸರ್ಪಮಾರ್ಗ ಮತ್ತು ಹೇರೆತ್ತಿನ ದಾರಿಗಳಿವೆ. ಸರ್ಪಮಾರ್ಗ ಮೋಟಾರುವಾಹನ ರಸ್ತೆಯಾಗಿದ್ದು, ಹೇರೆತ್ತಿನ ದಾರಿಯು ಕಾಲುದಾರಿಯಾಗಿದ್ದು, ಏಳು ಬೆಟ್ಟಗಳ ಮೂಲಕ ೧೨ ಕಿ.ಮೀ. ಸಾಗಿದರೆ, ನಿಸರ್ಗದ ಮಡಿಲಲ್ಲಿ ಮಹದೇಶ್ವರ ಗುಡಿಯಿರುವ ಸುಂದರ ಬಯಲು ಪ್ರದೇಶವನ್ನು ತಲುಪುತ್ತೇವೆ. ಏಳುಮಲೆ ಮಹದೇಶ್ವರನೆಂದೇ ಜನಪದ ಸಾಹಿತ್ಯದಲ್ಲಿ ಉಲ್ಲೇಖಿತನಾಗಿರುವ ಮಲೆಮಹದೇಶ್ವರ ಇಲ್ಲಿ ನೆಲೆಸಲು ಅಲ್ಲಿರುವ ಸದಾ ಹಸಿರಿನಿಂದ ಕೂಡಿದ ದಟ್ಟಡವಿಯೇ ಕಾರಣ ಎಂದು ಹೇಳಲಾಗುತ್ತದೆ. ಗಿರಿಜನವಾಸಿಗಳಾದ ಸೋಲಿಗ, ಜೇನುಕುರುಬ, ಕಾಡುಕುರುಬ, ಮುಂತಾದ ಬುಡಕಟ್ಟು ಜನರ ಕುಲದೈವ ಮಲೆಮಹದೇಶ್ವರನಾಗಿದ್ದು, ಅವರಲ್ಲದೇ ನಾಡಿನ ಇನ್ನಿತರೇ ಜನಾಂಗದವರೂ ಅವನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಚಾರಿತ್ರಿಕವಾಗಿ ಮಹದೇಶ್ವರಯತಿಯು ಸುಮಾರು ೧೫ನೇ ಶತಮಾನದಲ್ಲಿ ಹರದನಹಳ್ಳಿ ಮಠದ ಗುರುಪರಂಪರೆಯಲ್ಲಿ ಮೂರನೇ ಗುರುವಾಗಿದ್ದು, ಹರದನಹಳ್ಳಿ ಮಠದ ಎರಡನೇ ಗುರುವಾಗಿದ್ದ ಪ್ರಭುದೇವರು ಸ್ಥಾಪಿಸಿದ ಕುಂತೂರು ಮಠದ ಗುರುಶಾಂತಮಲ್ಲಿಕಾರ್ಜುನ ಸ್ವಾಮಿಗಳೊಂದಿಗೆ ಇಲ್ಲಿಗೆ ಬಂದರು. ಅದಾಗಲೇ ಮುಪ್ಪಿನ ಸ್ವಾಮಿಗಳು ಇಲ್ಲಿ ಆರಂಭಿಸಿದ್ದ ಆಧ್ಯಾತ್ಮಿಕ ಕೇಂದ್ರ 'ಪರ್ಣಶಾಲೆ' ಯ ಚಟುವಟಿಕೆಗಳಲ್ಲಿ ಕೈಜೋಡಿಸಿದರು. ಮುಂದೆ ಅಲ್ಲೊಂದು ಪವಿತ್ರಕೋಲನ್ನು ಪ್ರತಿಷ್ಠಾಪಿಸಿದ ಮಹದೇಶ್ವರರು ಆ ಕೇಂದ್ರವನ್ನು ಮಠವನ್ನಾಗಿ ಪರಿವರ್ತಿಸಿ, 'ಸಾಲೂರು ಮಠ' ವೆಂದು ಹೆಸರಿಟ್ಟರು. ಅಲ್ಲಿಂದೀಚೆಗೆ ಮಠವು ಅಭಿವೃದ್ಧಿ ಹೊಂದುವುದರ ಜೊತೆಗೆ ಕ್ಷೇತ್ರವನ್ನೂ ಬೆಳೆಸಿತು. ೨೦ನೇ ಶತಮಾನದ ಎರಡನೆಯ ದಶಕ (೧೯೧೫)ದಲ್ಲಿ ಗುರುಪೀಠದಲ್ಲಿದ್ದ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಈ ಗುಡಿಗೆ ಹೊರ ಪ್ರಾಕಾರವನ್ನು ನಿರ್ಮಿಸುವುದರ ಜೊತೆಗೆ ಬೆಟ್ಟಕ್ಕೆ ರಸ್ತೆ ಸೌಕರ್ಯವನ್ನು ಒದಗಿಸಲು ಮುಂದಾದರು. ಇವರ ನಂತರ ಪೀಠವನ್ನೇರಿದ ಮುದ್ದುವೀರಸ್ವಾಮಿಗಳು ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ, ದೇವರ ಸಾಂಪ್ರದಾಯಕ ಪೂಜಾಕ್ರಮವನ್ನು ಇನ್ನಷ್ಟು ಅಭಿವೃದ್ಧಿ

ಪಡಿಸಿದರು. ಇಲ್ಲಿಯ ಕಾಡುಕುರುಬರನ್ನು ಮಹದೇಶ್ವರರು ಲಿಂಗಧಾರಿಗಳನ್ನಾಗಿಸಿದರೆಂಬ ಅಭಿಪ್ರಾಯವಿದ್ದು, ಮಹದೇಶ್ವರರ ದೈನಂದಿನ ಪೂಜೆ ಪುರಸ್ಕಾರಗಳನ್ನು ಸ್ಥಳೀಯ ತಮ್ಮಡಿಗಳೇ ನಿರ್ವಹಿಸುತ್ತಾರೆ.

ವಿಜಯನಗರೋತ್ತರ ಕಾಲದ ರಚನೆಯಾದ ಈ ದೇವಾಲಯವನ್ನು ಯಾವಾಗ ಯಾರು ನಿರ್ಮಿಸಿದರೆಂಬುದರ ಬಗ್ಗೆ ಯಾವುದೇ ಶಾಸನಾಧಾರಗಳಿಲ್ಲ. ಆದರೆ ಮಹದೇಶ್ವರ ಬೆಟ್ಟಕ್ಕೆ ೧೦ ಕಿ.ಮೀ. ದೂರದಲ್ಲಿರುವ ಆಲಂಬಾಡಿ ಜುಂಜೇಗೌಡನು ಈ ದೇವಾಲಯ ಸಂಕೀರ್ಣವನ್ನು ನಿರ್ಮಿಸಿದನೆಂಬ ಸಾಂಪ್ರದಾಯಿಕ ಹೇಳಿಕೆಯಿದೆ. ವಿಶಾಲವಾದ ಪ್ರಾಕಾರದ ನಡುವೆ ಇರುವ ಈ ದೇವಾಲಯದ ಗರ್ಭಗುಡಿಯಲ್ಲಿ ಮಹದೇಶ್ವರರ ಗದ್ದುಗೆಯಿದ್ದು, ಗರ್ಭಗೃಹವು ವೇಸರ ಶಿಖರವನ್ನು ಹೊಂದಿದೆ. ಇದರ ಅಂತರಾಳ ಹಾಗೂ ನವರಂಗಗಳ ದ್ವಾರಬಂಧವು ಹೂಬಳ್ಳಿ, ರೇಖಾ ವಿನ್ಯಾಸಗಳಿಂದ ಅಲಂಕೃತಗೊಂಡಿವೆ. ಅಂತರಾಳದ ತೊಲೆಯೊಂದರ ಮೇಲೆ ಸುಮಾರು ೧೭ನೇ ಶತಮಾನದ ಲಿಪಿಯಲ್ಲಿರುವ ಶಾಸನವು ತ್ರುಟಿತಗೊಂಡಿದ್ದರೂ, ಗುರುವಸೆಟ್ಟಿ ಎಂಬ ಅಧಿಕಾರಿಯು ಕಲ್ಲಿನ ಗುಡಿ ಬಸ್ತಿ ಹಾಗೂ ರಂಗಮಂಟಪಗಳನ್ನು ನಿರ್ಮಿಸಿದ ಅಂಶವನ್ನು ದಾಖಲಿಸಿದೆ. ನವರಂಗದ ಕಂಬಗಳು ವಿಜಯನಗರೋತ್ತರ ಶೈಲಿಯಲ್ಲಿದ್ದು, ಮುಂಬದಿಯ ವಿಶಾಲವಾದ ತೆರೆದ ಮುಖಮಂಟಪದಲ್ಲಿ ವೀರಭದ್ರನ ಮೂರ್ತಿಯನ್ನು ಪೂಜಿಸಲಾಗುತ್ತದೆ. ಈ ಬೆಟ್ಟದಲ್ಲಿರುವ ಅಂತರಗಂಗೆಯು ಪಾವಿತ್ರ್ಯತೆಗೆ ಹೆಸರಾಗಿದ್ದು, ಭಕ್ತರು ಅಲ್ಲಿ ಮುಳುಗಿ ಪುನೀತರಾಗುತ್ತಾರೆ. ಮಹದೇಶ್ವರ ಬೆಟ್ಟಕ್ಕೆ ಎದುರಾಗಿರುವ ಬೋಳು ಬೆಟ್ಟದಲ್ಲಿ ಮಹದೇಶ್ವರರ ದತ್ತುಮಕ್ಕಳಾದ ಕಾರಯ್ಯ ಹಾಗೂ ಬಿಲ್ಲಯ್ಯರ ಗದ್ದುಗೆಗಳಿದ್ದು, ಅವರನ್ನು ಸಂಕಮ್ಮನ ಮಕ್ಕಳೆಂದು ಹೇಳಲಾಗುತ್ತದೆ. ಇಲ್ಲಿ ಉಗಾದಿ, ನವರಾತ್ರಿ, ದೀಪಾವಳಿಗಳಲ್ಲಿ ವಿಶೇಷ ಉತ್ಸವಗಳಿರುತ್ತದೆ. ದಸರೆಯಲ್ಲಿ ಜರುಗುವ ಉಯ್ಯಾಲೋತ್ಸವ ವೈಭವದಿಂದ ಕೂಡಿರುತ್ತದೆ. ಇಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಜರುಗುವ ಶೇಷಣ್ಣ ಒಡೆಯರ ಉತ್ಸವವು ಅತ್ಯಂತ ಪ್ರಸಿದ್ಧವಾಗಿದ್ದು, ಆಗ ಲಕ್ಷಾಂತರ ಭಕ್ತರು ಬಂದು ಪಾಲ್ಗೊಳ್ಳುತ್ತಾರೆ. ಶಿವರಾತ್ರಿ ಹಾಗೂ ಯುಗಾದಿ ಸಂದರ್ಭದಲ್ಲಿ ದನಗಳ ಸಂತೆಯಾಗುತ್ತದೆ. ಇಲ್ಲಿ ನಡೆಯುವ ಜಾತ್ರೋತ್ಸವಗಳಿಗೆ ಕರ್ನಾಟಕ–ತಮಿಳುನಾಡುಗಳಿಂದ ಭಕ್ತರು ಬಂದು ಸೇರುತ್ತಾರೆ. ಮುಜರಾಯಿ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿರುವ 'ಎ' ಶ್ರೇಣಿಯ ಧಾರ್ಮಿಕ ಸಂಸ್ಥೆಯಾಗಿರುವ ಇದರ ನಿರ್ವಹಣೆಗೆ ಮಹದೇಶ್ವರ ಟ್ರಸ್ಟ್ ಒಂದಿದ್ದು, ಅದರ ಮಾಹಿತಿ ಕೇಂದ್ರವು ರಾಜಧಾನಿ ಬೆಂಗಳೂರಿನಲ್ಲಿದೆ.

ಇಲ್ಲಿಯ ಸಾಲೂರು ಮಠದಲ್ಲಿ ಮಹದೇಶ್ವರರು ಬಳಸುತ್ತಿದ್ದರೆನ್ನಲಾಗುವ ಪಾದುಕೆ, ಶಂಖ, ಜೋಳಿಗೆ, ಊರುಗೋಲು, ಮುಂತಾದವನ್ನು ಸಂರಕ್ಷಿಸಿಡಲಾಗಿದೆ. ಈ ಮಠದಲ್ಲಿ ಭಕ್ತಾದಿಗಳಿಗೆಂದು ಉಚಿತ ಪ್ರಸಾದ ವ್ಯವಸ್ಥೆ ಇದೆ. ಹೈದರಾಲಿಯ ಕಾಲಕ್ಕೆ ಸೇರಿದ ೧೭೬೧ರ ಶಾಸನ, ಮಹದೇಶ್ವರ ಬೆಟ್ಟಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತಿದ್ದು, ಮೈಸೂರು ಅರಸರೂ ದೇವಾಲಯಕ್ಕೆ ಹಲವಾರು ದತ್ತಿ ನೀಡಿದ್ದಾರೆ. **ನಾಗಮಲೆ:** ಮಹದೇಶ್ವರನ ಸನ್ನಿಧಿಯಿಂದ ೧೪ ಕಿ.ಮೀ. ಪೂರ್ವದ ನಾಗಮಲೆಯಲ್ಲಿ ಮಹದೇಶ್ವರರ ಮೂಲಗದ್ದುಗೆ ಇದೆಯೆಂಬ ಪ್ರತೀತಿಯೂ ಇದ್ದು, ಮಹದೇಶ್ವರ ಬೆಟ್ಟದಿಂದ ಅಲ್ಲಿಗೆ ಹೋಗಲು ಕಾಲುದಾರಿಯಿದ್ದು, ವಾಹನದ ಮೂಲಕವಾದರೆ, ಗೋಪಿನಾಥಂ ಮಾರ್ಗವಾಗಿ ನಾಗಮಲೆಯನ್ನು ತಲುಪಬಹುದಾಗಿದೆ. ಇಲ್ಲಿರುವ ಸರ್ಪಾಕಾರದ ಕಲ್ಲು ಬಂಡೆಯೊಂದನ್ನು ಸ್ಥಳೀಯವಾಗಿ 'ನಾಗಲಿಂಗಪುಷ್ಪ' ಎಂದು ಕರೆಯಲಾಗುತ್ತಿದ್ದು, ಮಹದೇಶ್ವರರು ತಮ್ಮ ಕೊನೆಯ ದಿನಗಳನ್ನು ಇಲ್ಲೇ ಕಳೆದರೆಂದು ಹೇಳಲಾಗುತ್ತದೆ. **ಕಾವೇರಿ ವನ್ಯ ಮೃಗಧಾಮ:** ಮಲೆಮಹದೇಶ್ವರ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಕಾವೇರಿ ವನ್ಯಜೀವಿ ಮೃಗಧಾಮವು ಸುಮಾರು ೫೬,೯೫೫ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯ ಇನ್ನೊಂದು ಪ್ರಮುಖ ಪ್ರಕೃತಿಧಾಮವಾಗಿದೆ. ಇದನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ ೧೯೭೨, ಸೆಕ್ಷನ್ ೧೮ರಡಿಯಲ್ಲಿ ರೂಪಿಸಲಾಗಿದ್ದು, ಈ ವಿಭಾಗದ ಜೀವಸೆಲೆಯಾಗಿ

ಹರಿಯುವ ಕಾವೇರಿ ನದಿಯನ್ನು ಅರಣ್ಯ ಧಾಮದ ಗಡಿಯನ್ನಾಗಿ ಗುರುತಿಸಲಾಗಿದ್ದು, ಹಲವಾರು ಕಿರುಬೆಟ್ಟ ಹಾಗೂ ಜಲಪಾತಗಳು ನದಿಯುದ್ದಕ್ಕೂ ಇವೆ. ಇಲ್ಲಿ ಆನೆ, ಚುಕ್ಕಿಜಿಂಕೆ, ಸಾಂಬರ್, ಗೌರ್, ನವಿಲು, ಕೋತಿ, ಹುಲಿ, ಚಿರತೆಗಳು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತವೆ.

**ಮಲೆಯೂರು (೨,೭೭೧):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೨೪ ಕಿ.ಮೀ. ದೂರದಲ್ಲಿರುವ 'ಮಲೆಯೂರು' ಚಾರಿತ್ರಿಕ ಮಹತ್ವದ ಪ್ರಮುಖ ಜೈನಕ್ಷೇತ್ರವಾಗಿದ್ದು ಮಹತ್ವ ಪಡೆದಿದೆ. ಸಮೀಪದಲ್ಲಿರುವ ಮಲೆ/ಬೆಟ್ಟದಿಂದಾಗಿ 'ಮಲೆಯೂರು' ಎಂಬ ಹೆಸರು ಇದಕ್ಕೆ ಬಂದಿರುವಂತೆ ತೋರುತ್ತದೆ. ಆದರೆ ಪ್ರಾಚೀನ ಶಾಸನಗಳಲ್ಲಿ ಇದು 'ಕನಕಗಿರಿ ತೀರ್ಥ' ಮಲೆಯೂರು ಎಂದು ದಾಖಲಾಗಿದೆ. ಇಲ್ಲಿಂದ ಈವರೆಗೆ ಸುಮಾರು ೧೨-೧೯ನೇ ಶತಮಾನಕ್ಕೆ ಸೇರಿದ ೨೦ಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಹೆಚ್ಚಿನವು ಜೈನ ಶಾಸನಗಳಾಗಿದ್ದು, ಕುತೂಹಲಕಾರಿ ಅಂಶಗಳನ್ನು ಒಳಗೊಂಡಿವೆ. ಶಾಸನೋಕ್ತ ಕನಕಗಿರಿ, ಇಂದಿನ ಮಲೆಯೂರು ಬೆಟ್ಟವಾಗಿದ್ದು, ಈ ಬೆಟ್ಟವನ್ನು ಏರಲು ಮೆಟ್ಟಲುಗಳಿದ್ದು, ಮೇಲೆ ವಿಶಾಲವಾದ ಪಾರ್ಶ್ವನಾಥ ಬಸದಿ ಇದೆ. ಸುಮಾರು ೧೦-೧೧ನೇ ಶತಮಾನದಲ್ಲಿ ನಿರ್ಮಾಣಗೊಂಡಿರಬಹುದಾದ ಈ ದೇವಾಲಯ ಪ್ರಾಕಾರದ ಚಪ್ಪರ ಮಂಟಪ ದಲ್ಲಿರುವ ೧೧೮೧ರ ಶಾಸನ, ಕನಕಾಚಲದ ಪಾರ್ಶ್ವನಾಥನ ಪೂಜೆ ಪುರಸ್ಕಾರಗಳಿಗೆಂದು ಸ್ಥಾನಾಚಾರ್ಯರಾದ ವಿದ್ಯಾನಂದ ಸ್ವಾಮಿಗಳಿಗೆ ಚಿಕ್ಕತಾಯಿಯು 'ಕಿನ್ನರೀಪುರ' ಎಂಬ ಗ್ರಾಮವೊಂದನ್ನು ಉಂಬಳಿ ನೀಡಿದ್ದನ್ನು ತಿಳಿಸುತ್ತಿದ್ದು, ವಿದ್ಯಾಸಾರ, ಅಚ್ಯುತರಾಜೇಂದ್ರ ಮುಂತಾದ ವೈದ್ಯೋತ್ತಮರನ್ನು ಹೆಸರಿಸಿದೆ. ಈ ಬಸದಿಯು ಗರ್ಭಗೃಹ, ಅರ್ಧಮಂಟಪ, ನವರಂಗ, ಸಭಾಮಂಟಪಗಳನ್ನು ಹೊಂದಿದ್ದು, ವಿಜಯನಗರ ಕಾಲದಲ್ಲಿ ಮುಖಮಂಟಪವನ್ನು ಸೇರಿಸಿ ವಿಸ್ತರಿಸಲಾಗಿದೆ. ಗರ್ಭಗೃಹದಲ್ಲಿ ಸುಮಾರು ಒಂದೂವರೆ ಮೀಟರ್ ಎತ್ತರದ ಪಾರ್ಶ್ವನಾಥನ ಶಿಲ್ಪವಿದ್ದು, ಸ್ಥಾನಕ ಭಂಗಿಯಲ್ಲಿರುವ ಈ ಮೂರ್ತಿಯನ್ನು ಸ್ಥಳೀಯವಾಗಿ ವಿಜಯ ಪಾರ್ಶ್ವನಾಥನೆಂದೂ ಕರೆಯಲಾಗುತ್ತಿದ್ದು, ಇದಕ್ಕೆ ಪೂರಕವಾಗಿ ೧೪೨೨ರ ಶಾಸನದಲ್ಲಿ ಕನಕಗಿರಿಯ 'ಶ್ರೀ ವಿಜಯದೇವರು' ಎಂಬ ಉಲ್ಲೇಖವೂ ದೊರೆಯುತ್ತದೆ. ಇದಕ್ಕೆ ಕಾರಣ ಬೆಟ್ಟದ ಗುಂಡಿನ ಪೂರ್ವಭಾಗದಲ್ಲಿರುವ ೧೩೫೫ರ ನಿಶಿಧಿ ಶಾಸನವಾಗಿದ್ದು, ಲಲಿತಕೀರ್ತಿ ಭಟಾರಕರು, ತಮ್ಮ ನಿಷಿದ್ಧಿಯ ನಿಮಿತ್ತವಾಗಿ ಕನಕಗಿರಿಯಲ್ಲಿ ವಿಜಯದೇವರ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿದ್ದಿರಬೇಕೆಂದು ತರ್ಕಿಸಬಹುದಾಗಿದೆ. ಇದೇ ಬಸದಿಯ ದಕ್ಷಿಣಕ್ಕಿರುವ ಸುಮಾರು ೧೪ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ನಯಕೀರ್ತಿ ಯತಿಗಳ ಶಿಷ್ಯರಾದ, ಉಭಯ ಭಾಷಾ ಕವಿ ಬಾಹುಬಲಿ ಪಂಡಿತದೇವನನ್ನು ಹೆಸರಿಸುತ್ತದೆ. ಇದೇ ವಿಜಯ (ಪಾರ್ಶ್ವ) ದೇವರಿಗೆ ಮಲೆಯೂರು ಗ್ರಾಮವನ್ನು ಅದರ ಉಪ ಗ್ರಾಮ (ಹುಣಸೂರುಪುರ)ದೊಂದಿಗೆ ಸರ್ವಮಾನ್ಯವಾಗಿ ದತ್ತಿ ಬಿಟ್ಟ ಅಂಶವನ್ನು ೧೪೨೨ರ ಎರಡು ಶಾಸನಗಳು ತಿಳಿಸುತ್ತವೆ. ಅಲ್ಲೇ ಇರುವ ೧೩೧೭ರ ಇನ್ನೊಂದು ಶಾಸನ ಸಮಾಧಿ ಮರಣ ಹೊಂದಿದ ಮುನಿಚಂದ್ರನನ್ನು ಹೆಸರಿಸಿದರೆ, ೧೬೭೪ರ ಇನ್ನೊಂದು ಶಾಸನ ಲಕ್ಷ್ಮೀಸೇನ ಮುನೀಶ್ವರರು ಹೇಮಾದ್ರಿ (ಕನಕಗಿರಿ)ಯ ವರಪಾರ್ಶ್ವನಾಥ ಜಿನಾಲಯದಲ್ಲಿ ದೀಕ್ಷೆ ಪಡೆದ ಅಂಶವನ್ನು ತಿಳಿಸುತ್ತದೆ. ಈ ಗುಡಿಯ ವಿಶಾಲವಾದ ನವರಂಗವು ವೃತ್ತಾಕಾರದ ಗಿಡ್ಡನೆಯ ಕಂಬಗಳಿಂದ ಕೂಡಿದ್ದು, ಪದ್ಮಾವತಿ, ಕೂಷ್ಮಾಂಡಿನಿ, ಜ್ವಾಲಮಾಲಿನಿ, ಬ್ರಹ್ಮ, ಧರಣೇಂದ್ರ ಮುಂತಾದ ಯಕ್ಷ ಯಕ್ಷಿಯರ ಶಿಲ್ಪಗಳನ್ನಿಲ್ಲಿ ಕಾಣಬಹುದಾಗಿದೆ. ಈ ಬಸದಿಯ ಹಿಂಬದಿಯ ಕೊಳಕ್ಕೆ ಕನಕತೀರ್ಥ ಎಂದು ಕರೆಯಲಾಗುತ್ತದೆ. ಅದರ ಉತ್ತರಕ್ಕೆ ಸ್ವಲ್ಪ ದೂರದಲ್ಲಿರುವ ಜೈನಯತಿ ಪೂಜ್ಯಪಾದರ ಸಮಾಧಿಯನ್ನು ಸಂಪೂರ್ಣ ಜೀರ್ಣೋದ್ಧಾರಗೊಳಿಸಲಾಗಿದೆ. ಬೆಟ್ಟದ ಒಂದು ತುದಿಯಲ್ಲಿ ಬಂಡೆಗಳ ಮೇಲೆ ೧೮೧೪ ಹಾಗೂ ೧೮೧೯ರಲ್ಲಿ 'ಸಲ್ಲೇಖನ' ಆಚರಿಸಿ, ನಿರ್ವಾಣ ಹೊಂದಿದ ಜೈನ ಅನುಯಾಯಿಗಳ ನಿಷಿಧಿ ಶಾಸನ

ಶಿಲ್ಪಗಳಿವೆ. ಬದಿಯಲ್ಲೇ ಸ್ವಲ್ಪ ಕೆಳಕ್ಕಾದಂತೆ ಶಾಸನಕಲ್ಲು, ಜೈನ ತೀರ್ಥಂಕರ ಹಾಗೂ ಭಕ್ತಶಿಲ್ಪಗಳಿದ್ದು, ಬೆಟ್ಟದೆಲ್ಲೆಡೆ ಚೌವ್ವೀಸ್ (೨೪) ತೀರ್ಥಂಕರರ ಪಾದುಕಾ ಪೀಠಗಳನ್ನು ಪ್ರತಿಷ್ಠಾಪಿಸಲಾಗಿದೆ. ಬೆಟ್ಟದ ಮೇಲಿನಿಂದ ಕಾಣುವ ರಮಣೀಯ ದೃಶ್ಯ ಮುದ ನೀಡುತ್ತದೆ.

ಬೆಟ್ಟದ ಬುಡದಲ್ಲಿರುವ ಮಲೆಯೂರಿನಲ್ಲಿ ಆದಿನಾಥ ಬಸದಿಯಿದೆ. ಇಂದು ಸಂಪೂರ್ಣ ಜೀರ್ಣೋದ್ಧಾರಗೊಂಡಿರುವ ಇದರ ಗರ್ಭಗೃಹದಲ್ಲಿ ಹೊಯ್ಸಳರ ಕಾಲದ ಆದಿನಾಥ ತೀರ್ಥಂಕರನ ಶಿಲ್ಪವಿದ್ದು, ನವರಂಗದಲ್ಲಿ ವಿಜಯನಗರ ಕಾಲದ ಕಂಬಗಳಿವೆ. ಊರ ಹೊರವಲಯದ ಹರವೆ ರಸ್ತೆಯಲ್ಲಿರುವ ಚಂದ್ರಮೌಳೇಶ್ವರ ಗುಡಿಯು ಶಿಥಿಲವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಲ್ಲಿಯ ೧೪೩೩ ರ ಶಾಸನವೊಂದು ಚಿನ್ನಯ್ಯದೇವನು ಮಲೆಯೂರ ಸೋಮನಾಥ ದೇವರ ನಂದಾದೀಪ ಸೇವೆಗೆಂದು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಈ ದೇವಾಲಯದ ಬದಿಯಲ್ಲಿ ಸೂರ್ಯ, ಕಾಳಿ, ಭೈರವ, ವೀರಗಲ್ಲು, ಮುಂತಾದ ಶಿಲ್ಪಾವಶೇಷಗಳನ್ನು ಇಡಲಾಗಿದ್ದು, ಸಮೀಪದಲ್ಲಿ ಪ್ರಾಚೀನ ಕೋಟೆಯೊಂದರ ಅವಶೇಷವಿದೆ. ಅಲ್ಲೇ ಇರುವ ಸುಮಾರು ೧೯ನೇ ಶತಮಾನಕ್ಕೆ ಸೇರಿದ ಶಾಪಾಶಯ ಶಾಸನ, ಕಲ್ಲಕೋಟೆಯ ಬಳಿ ಹೇಸಿಗೆ ಮಾಡುವವರನ್ನು ನಿಕೃಷ್ಟ ಶಾಪಾಶಯದ ಮೂಲಕ ಎಚ್ಚರಿಸಿರುವ ಅಂಶವನ್ನು ಸೂಚಿಸುತ್ತದೆ. ಅಲ್ಲದೇ ಈ ಕೋಟೆಗೆ ಸಂಪಿಗೆಯ ಬಾಗಿಲು ಇದ್ದ ಅಂಶವೂ ವೇದ್ಯವಾಗುತ್ತದೆ. ಊರ ಗ್ರಾಮದೇವತೆಯಾದ ಮಾರಮ್ಮನ ಜಾತ್ರೆಯು ಶಿವರಾತ್ರಿಯ ನಂತರ ಒಂದು ವಾರ ನಡೆಯುತ್ತದೆ. ಆಗ ಭಕ್ತಾದಿಗಳು ಬಾಯಿ ಬೀಗ ಸೇವೆ, ವೀರಮಕ್ಕಳ ಕುಣಿತ ಮುಂತಾದ ಸೇವೆಯನ್ನು ದೇವಿಗೆ ಸಲ್ಲಿಸುತ್ತಾರೆ.

**ಮಾಂಬಳ್ಳಿ(೬,೨೫೦):** ತಾಲೂಕು ಕೇಂದ್ರ ಯಳಂದೂರಿನಿಂದ ೧೨ ಕಿ.ಮೀ. ದೂರದಲ್ಲಿ ಸುವರ್ಣಾವತಿ ನದಿ ದಂಡೆಯ ಮೇಲಿರುವ ಸ್ಥಳ. ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ೧೩೦೧ರ ಶಾಸನದಲ್ಲಿ ಊರ ಹೆಸರು 'ಮಾಂಪಳ್ಳಿ' ಎಂದೇ ದಾಖಲಾಗಿದೆ. ಸುಮಾರು ೧೨-೧೩ ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನದಲ್ಲಿ ಇದನ್ನು (ಮಲ್ಲನ ಪಟ್ಟಣ) 'ವೀರಬಲ್ಲಾಳನ ಪಟ್ಟಣ' ಎಂದೂ ಕರೆಯಲಾಗಿದ್ದು, ನಾನಾ ದೇಶೀ ವ್ಯಾಪಾರಿ ವರ್ಗದ ಉಲ್ಲೇಖವೂ ಇದೆ. ವಿಜಯನಗರ ಕಾಲಕ್ಕೆ ಸೇರಿದ ೧೩೭೯ರ ಶಾಸನದಲ್ಲಿ 'ಹರಿಹರನಾಥ ಪಟ್ಟಣ' ಎಂದೂ ಇದನ್ನು ಕರೆಯಲಾಗಿದೆ. ಇಲ್ಲಿಂದ ಈವರೆಗೆ ಸುಮಾರು ೬-೧೬ನೇ ಶತಮಾನಕ್ಕೆ ಸೇರಿದ ೨೦ಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಪುನ್ನಾಟ ಅರಸ ಪೃಥ್ವಿಪತಿಯ ವಂಶಾವಳಿಯನ್ನು ಹೇಳುವ ಸುಮಾರು ೫೫೦ರ ತಾಮ್ರಶಾಸನ, ಅಪೂರ್ಣವಾಗಿದ್ದು, ದಾನ ವಿವರ ಲಭಿಸುವುದಿಲ್ಲವಾದರೂ ಇದರಲ್ಲಿ ಕಾವೇರಿ ಕಬಿನಿ ನದಿಗಳ ಉಲ್ಲೇಖವಿದೆ. ೧೫೬೦ರ ಶಾಸನದಲ್ಲಿ ಮಾಂಬಳಿಯ ಸಾಮಂತ ವಿರುಪಣಸೆಟ್ಟಿ ಮುಂತಾದವರನ್ನು ಉಲ್ಲೇಖಿಸುವುದರ ಜೊತೆಗೆ ಸಿದ್ಧರಾಮೇದೇವರ ಮಠ ಮತ್ತು ಸೂರಿಯ ಮಠಗಳನ್ನು ಪ್ರಸ್ತಾಪಿಸಲಾಗಿದೆ.

ಇಲ್ಲಿಯ ವೈದ್ಯೇಶ್ವರ ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗಗಳನ್ನು ಹೊಂದಿದ್ದು, ಗುಡಿಯ ಅಧಿಷ್ಠಾನದ ಮೇಲಿರುವ ೧೩೦೧ರ ಎರಡು ಶಾಸನಗಳು ಈ ದೇವಾಲಯಕ್ಕೆ ಬಿಟ್ಟ ಬೇರೆ ಬೇರೆ ಭೂ ದತ್ತಿಯನ್ನು ದಾಖಲಿಸುತ್ತವೆ. ಗರ್ಭಗೃಹದಲ್ಲಿ ಈಶ್ವರಲಿಂಗವಿದ್ದು, ವಿಶಾಲವಾದ ನವರಂಗದ ಬಹುಕೋನಾಕಾರದ ಕಂಬಗಳು ಚೌಕಾಕಾರದ ಪೀಠವನ್ನು ಹೊಂದಿವೆ. ಇಲ್ಲಿ ಗಣಪತಿ ಹಾಗೂ ಸುಬ್ರಹ್ಮಣ್ಯನ ಶಿಲ್ಪಗಳಿವೆ. ನವರಂಗದ ಕಂಬಗಳ ಮೇಲಿರುವ ಏಳು ತಮಿಳು ಶಾಸನಗಳು ಕಂಬಗಳ ವೆಚ್ಚ ಭರಿಸಿದ ದಾನಿಗಳನ್ನು ಹೆಸರಿಸುತ್ತವೆ. ನವರಂಗದ ಮುಂದಣ ಕಿರು ಮುಖಮಂಟಪದ ಮೇಲಿರುವ ೧೪ನೆಯ ಶತಮಾನದ ತಮಿಳು ಶಾಸನ ದೇವಾಲಯದ ಧರ್ಮಸತ್ರದ ನಿರ್ವಹಣೆಗೆಂದು ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಈ ಗುಡಿಯ ಹಿಂಬದಿಯಲ್ಲಿರುವ ಕುಮಾರ

ಕಂಪಣನ ಶಾಸನ, ೧೩೬೯ರಲ್ಲಿ ವೈದ್ಯನಾಥ ದೇವರಿಗೆ ಅಂಡಾರುಸೆಟ್ಟಿ ಮುಂತಾದವರು ಬಿಟ್ಟ ದತ್ತಿಯನ್ನು ಹೇಳುತ್ತದೆ. ಈ ಗುಡಿಯ ಪೂರ್ವಕ್ಕಿರುವ ಪಾಳು ಕಟ್ಟಡವನ್ನು ಮಠ ಎಂದು ಹೇಳಲಾಗುತ್ತಿದ್ದು, ಹೊಯ್ಸಳ ಸ್ತಂಭ ಹಾಗೂ ಶಿಲ್ಪಗಳಿವೆ. ಅಲ್ಲೇ ಇರುವ ಸುಮಾರು ೧೨೪೬ರ ಶಾಸನ ಹೊಯ್ಸಳ ಸೋಮೇಶ್ವರನ ಕಾಲದಲ್ಲಿ ಮಠಕ್ಕೆ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಇಲ್ಲಿಯ ಚೌಡೇಶ್ವರಿ ಗುಡಿ ಮುಂದಿರುವ ೧೪೨೯ರ ಶಾಸನ ಪ್ರತಾಪ ದೇವರಾಯನ ಆಳ್ವಿಕೆಯಲ್ಲಿ ಮಜ್ಜಣ್ಣ ವೈದ್ಯನಾಥ ದೇವರಿಗೆ ನಾನಾದೇಶೀಗಳು ಬಿಟ್ಟ ಉಂಬಳಿಯ ಬಗ್ಗೆ ಹೇಳುತ್ತದೆ. ಈ ಗುಡಿಯ ಬದಿಯಲ್ಲೇ ರಾಮಲಿಂಗ ಹಾಗೂ ಚೌಡೇಶ್ವರಿ ಗುಡಿಗಳಿವೆ. ಊರಾಚೆ ಹೊಲವೊಂದರಲ್ಲಿರುವ ತಮಿಳು ಶಾಸನದಿಂದ ಹಿಂದೆ ಇಲ್ಲಿ ಸಿಂಗಪೆರುಮಾಳ್ ಹಾಗೂ ಕೇಶವ ಪೆರುಮಾಳ ಗುಡಿಗಳಿದ್ದ ಅಂಶ ವೇದ್ಯವಾಗುತ್ತದೆ.

ಇಲ್ಲಿಯ ಅಂಕಾಲ ಪರಮೇಶ್ವರಿ ಗುಡಿ ವಿಜಯನಗರ ಕಾಲದ್ದಾಗಿದ್ದು, ಒಳಗೆ ದುರ್ಗಾ, ಭೈರವ, ಮುನೇಶ್ವರ, ಪೇಚಮ್ಮ (ಕಾಳಿ), ಬಾಲಗುರುಮೂರ್ತಿ, ಶಿಲ್ಪಗಳಿವೆ. ಇವಳು ಕೊಳ್ಳೇಗಾಲದ ವೈಶ್ಯರ ಕುಲದೇವತೆಯಾಗಿದ್ದಾಳೆ. ಇಲ್ಲಿಯ ಉಪ್ಪರಿಗೆ ಬಸವೇಶ್ವರ ದೇವಾಲಯವೂ ಜೀರ್ಣೋದ್ಧಾರಗೊಂಡಿದ್ದು, ಅದರ ಮುಂದಿರುವ ತಮಿಳು ಶಾಸನ ಹೊಯ್ಸಳ ವೀರನರಸಿಂಹನ ಕಾಲದ್ದಾಗಿದ್ದು, ಮುಂಡಿಗೊಂಡ ಗ್ರಾಮದ ಉಪಗ್ರಾಮವಾದ ಮಾಂಪಳ್ಳಿಯ ಪಿಳ್ಳೆಯಾರ ಗುಡಿಗೆ ಸೇರಿದ ಭೂಮಿಯ ಮಾರಾಟ ಹಾಗೂ ಭೂದತ್ತಿಗಳ ಬಗ್ಗೆ ಉಲ್ಲೇಖಿಸುತ್ತದೆ. ಸ್ಮಶಾನದ ಬಯಲಲ್ಲಿ ವೀರಗಲ್ಲಿದೆ. ಉಳಿದಂತೆ ಊರಲ್ಲಿ ಲಕ್ಷ್ಮೀನಾರಾಯಣ, ಮುಂತಾದ ಗುಡಿಗಳಲ್ಲದೇ ಮಸೀದಿಯೂ ಇದೆ.

**ಯರಿಯೂರು(೪,೬೨೧):** ತಾಲೂಕು ಕೇಂದ್ರ ಯಳಂದೂರಿಗೆ ಕೇವಲ ಎರಡು ಕಿ.ಮೀ. ದೂರದಲ್ಲಿರುವ ಇಲ್ಲಿಂದ, ಈವರೆಗೆ ಸುಮಾರು ೧೨-೧೬ನೇ ಶತಮಾನಕ್ಕೆ ಸೇರಿದ ಶಾಸನಗಳು ವರದಿಯಾಗಿವೆ. ಇಲ್ಲಿಯ ೧೧೯೬ರ ತಮಿಳು ಶಾಸನದಲ್ಲಿ ಊರ ಹೆಸರು 'ಯರಿಯೂರು' ಎಂದು ದಾಖಲಿಸಲ್ಪಟ್ಟಿದ್ದು, 'ಉತ್ತಮ ಚೋಳನಲ್ಲೂರು' ಎಂಬ ಅಭಿದಾನವನ್ನೂ ಹೊಂದಿದ್ದ ಅಂಶವು ಗೊತ್ತಾಗುತ್ತದೆ. ಅಲ್ಲದೇ ಬಲ್ಲಾಳದೇವನು ಯರಿಯೂರಿನಲ್ಲಿ ತಾನೇ ವಲ್ಲಾಳೀಶ್ವರ ಗುಡಿಯನ್ನು ನಿರ್ಮಿಸಿ, ಪೂಜಾವ್ಯವಸ್ಥೆ ಮಾಡಿಸಿದ ಅಂಶವನ್ನು ಇದು ತಿಳಿಸುತ್ತದೆ. ಇಲ್ಲಿಯ ಮೂಲಸ್ಥಾನೇಶ್ವರ ಗುಡಿಯೇ ಮೇಲಿನ ಶಾಸನೋಕ್ತ ದೇವಾಲಯವಾಗಿದೆ. ಗುಡಿಯ ಕಂಬಗಳ ಮೇಲಿರುವ ಏಳು ನಾಮಾಂಕಿತ ಶಾಸನಗಳು ಇತರ ಸೇವಾರ್ಥದಾರರನ್ನು ಹೆಸರಿಸುತ್ತವೆ. ಮನೆಯೊಂದರ ಹಿತ್ತಿಲಲ್ಲಿರುವ ಸುಮಾರು ೧೩ನೇ ಶತಮಾನಕ್ಕೆ ಸೇರಿದ ಶಾಸನದಿಂದ, ಹಿಂದೆ ಇದೊಂದು ಅಗ್ರಹಾರವಾಗಿದ್ದು, ದಕ್ಷಿಣ ವಾರಣಾಸಿ ಎಂದು ಖ್ಯಾತಿ ಪಡೆದಿದ್ದ ಅಂಶ ವೇದ್ಯವಾಗುತ್ತದೆ. ಸುವರ್ಣಾವತಿ ನದಿ ದಂಡೆಯ ಮೇಲಿರುವ ಗುಂಗುರು ಮಲ್ಲಿಕಾರ್ಜುನ ಗುಡಿಯೇ ಇದಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದು, ಗರ್ಭಗುಡಿಯು ಇಟ್ಟಿಗೆಯ ರಚನೆಯಾಗಿದೆ. ಇದನ್ನು ವಿಜಯನಗರ ಕಾಲದಲ್ಲಿ ವಿಸ್ತರಿಸಲಾಗಿದ್ದು, ಮುಖಮಂಟಪದ ಕಂಬಗಳ ಮೇಲಿರುವ ತಮಿಳು ಶಾಸನಗಳು ೧೩ನೇ ಶತಮಾನದ ಲಿಪಿ ಲಕ್ಷಣದಿಂದ ಕೂಡಿದ್ದು, ದಾನಿಗಳನ್ನು ಹೆಸರಿಸಿವೆ. ಇಲ್ಲಿರುವ ವೀರಭದ್ರ ದೇವಾಲಯದಿಂದಾಗಿ ಯರಿಯೂರು ಮಹತ್ವ ಪಡೆದಿದೆ. ವಿಜಯನಗರೋತ್ತರ ಕಾಲಕ್ಕೆ ಸೇರಿದ ಈ ಗುಡಿಯಲ್ಲಿ ಒಂದು ಮೀಟರ್ ಎತ್ತರದ ವೀರಭದ್ರನ ಶಿಲ್ಪವಿದ್ದು, ಬಲಬದಿಯಲ್ಲಿ ಭದ್ರಕಾಳಿಯ ದ್ವಿಬಾಹು ಶಿಲ್ಪವಿದ್ದು, ಕೈಗಳಲ್ಲಿ ತ್ರಿಶೂಲ, ಜಪಮಾಲೆಗಳನ್ನು ಹಿಡಿದು ನಿಂತಿದ್ದಾಳೆ. ಗ್ರಾಮದೇವತೆ ಯರಿಯೂರಮ್ಮನ ಗುಡಿ ಜೀರ್ಣೋದ್ಧಾರಗೊಂಡಿದ್ದ ಮಂಟೇಸ್ವಾಮಿಯ ಗದ್ದುಗೆ, ಆಂಜನೇಯ ಗುಡಿ ಹಾಗೂ ಮಸೀದಿಗಳು ಇಲ್ಲಿವೆ.

**ಯಳಂದೂರು (೮,೫೮೫):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೨೦ ಕಿ.ಮೀ. ದೂರದಲ್ಲಿ ಸಂತೆಮರಳ್ಳಿ ಅಡ್ಡರಸ್ತೆಯಿಂದ ಮೂರು ಕಿ.ಮೀ. ಒಳಕ್ಕಾದಂತೆ ಚಾಮರಾಜನಗರ-ಕೊಳ್ಳೇಗಾಲ ರಸ್ತೆಯಲ್ಲಿರುವ ತಾಲೂಕು ಕೇಂದ್ರ. ಸುವರ್ಣಾವತಿ ನದಿ ದಂಡೆಯ ಮೇಲಿರುವ, ಚೋಳರ ಕಾಲದಷ್ಟು ಹಿಂದಿನ ಚಾರಿತ್ರಿಕ ಮಹತ್ವದ ಸ್ಥಳ. ಮೈಸೂರು ಸಂಸ್ಥಾನಕ್ಕೆ ದಿವಾನರಾಗಿದ್ದ ಪೂರ್ಣಯ್ಯನವರಿಗೆ ಈ ತಾಲೂಕನ್ನು ೧೮೦೭ರಲ್ಲಿ ಜಹಾಗೀರಾಗಿ ನೀಡಲಾಗಿದ್ದು, ಅದನ್ನು ೧೯೧೧ರಲ್ಲಿ ರದ್ದುಪಡಿಸಲಾಯಿತು. ಇಲ್ಲಿರುವ ಪೂರ್ಣಯ್ಯನವರ ಅರಮನೆಯನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದ್ದು, ಸಂರಕ್ಷಣಾ ಕಾರ್ಯವು ಪೂರ್ಣಗೊಂಡಿದೆ. ಇಲ್ಲಿಂದ ಈವರೆಗೆ ಸುಮಾರು ೧೨-೧೮ನೇ ಶತಮಾನಕ್ಕೆ ಸೇರಿದ ಹತ್ತಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ.

ಇಲ್ಲಿ ಲಭಿಸಿರುವ ಹೊಯ್ಸಳರ ಕಾಲದ ತಮಿಳು ಶಾಸನಗಳಲ್ಲಿ ಊರ ಹೆಸರು 'ಚೋಳೇಂದ್ರಸಿಂಹ ಚತುರ್ವೇದಿ ಮಂಗಲ' ಎಂಬ ಅಭಿದಾನವನ್ನು ಹೊಂದಿದ್ದ 'ಇಳೈಮರದೂರು' ಎಂದು ಉಲ್ಲೇಖಿತಗೊಂಡಿದ್ದು, ಅಗ್ರಹಾರವಾಗಿ ಮಹತ್ವ ಪಡೆದಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಆದರೆ ಕನ್ನಡ ಶಾಸನಗಳಲ್ಲಿ ಯಳವಂದೂರು ಎಂಬ ಉಲ್ಲೇಖ ನಂತರದ ಶಾಸನಗಳಲ್ಲಿ ದೊರೆಯುತ್ತದೆ.

ಇಲ್ಲಿಯ ಕವಿತೇಶ್ವರ ದೇವಾಲಯವು ಸುಮಾರು ೧೩ನೇ ಶತಮಾನದ ರಚನೆಯಾಗಿದ್ದು, ಹೊಯ್ಸಳ ಇಮ್ಮಡಿ ನರಸಿಂಹನ ಕಾಲದ ಎರಡು ಶಾಸನಗಳು ಇಲ್ಲಿವೆ. ಅವುಗಳಲ್ಲಿ ೧೨೪೪-೪೫ರ ಶಾಸನ ಇದನ್ನು ಅಗ್ರಹಾರವೆಂದು ಹೆಸರಿಸಿದರೆ, ೧೨೬೬ರ ತೇದಿಯಲ್ಲಿರುವ ಇನ್ನೊಂದು ತಮಿಳು ಶಾಸನ, ವೀರಗಲ್ಲಾಗಿದ್ದು, ಹುಲಿಯನ್ನು ಕೊಂದ ವೀರಯೋಧ ಕ್ಷೌರಿಕ ಕೇತಯ್ಯನಿಗೆ ಉಂಬಳಿ ನೀಡಿದ್ದನ್ನು ದಾಖಲಿಸುತ್ತದೆ. ಆದರೆ ವಿಜಯನಗರ ಕಾಲದ ಶಾಸನಗಳಲ್ಲಿ ಊರ ಹೆಸರು ಬಾಳೇಂದುಪುರ (ಯಳವಂದೂರಿನ ಸಂಸ್ಕೃತ ರೂಪ) ಎಂದು ದಾಖಲಾಗಿದೆ.

ಹೊಯ್ಸಳರ ಆಳ್ವಿಕೆಯ ನಂತರ ವಿಜಯನಗರ ಕಾಲದಲ್ಲಿ 'ಹದಿನಾಡು' ಸಾಮಂತರ ಆಳ್ವಿಕೆಗೆ ಇದು ಒಳಪಟ್ಟಿದ್ದು, ಆಗ 'ಯಳಂದೂರು' ಅವರ ಕೇಂದ್ರ ಸ್ಥಾನವಾಗಿತ್ತು. ಈ ಮನೆತನದ ಮೊದಲ ಅರಸನಾದ ಸಿಂಗದೇವ/ದೇವಭೂಪಾಲನು ಯಳಂದೂರಿನ ಪ್ರಖ್ಯಾತ ಗೌರೇಶ್ವರ ದೇವಾಲಯವನ್ನು ಸುಮಾರು ೧೫೫೦ರಲ್ಲಿ ನಿರ್ಮಿಸಿದನೆಂದು ಅಭಿಪ್ರಾಯವಿದೆ. ನೆರೆಯ ಗಣಿಗನೂರಿನ ೧೫೬೬ರ ಶಾಸನ ಯಳವಂದೂರ ಗೌರೀಶ್ವರ ದೇವರ ಸೇವೆಗೆಂದು ಹದಿನಾಡು ಸೀಮೆಯ ಪ್ರಭುಗೌಡ ಚಾಮರಸಣ್ಣನು ಎರಡು ಗ್ರಾಮಗಳನ್ನು ದತ್ತಿ ನೀಡಿದ್ದನ್ನು ದಾಖಲಿಸಿದೆ.

ಈ ದೇವಾಲಯದ ಚಿತ್ತಾಕರ್ಷಕ ಮಹಾದ್ವಾರಮಂಟಪವನ್ನು ಸಿಂಗದೇವ ಭೂಪಾಲನ ಮರಿಮೊಮ್ಮಗನಾದ ಮುದ್ದಭೂಪಾಲನು ೧೬೫೪-೫೫ರಲ್ಲಿ ನಿರ್ಮಿಸಿದ್ದನೆಂಬ ಅಂಶ ದೇವಾಲಯದ ದಕ್ಷಿಣ ಮಂಟಪದಲ್ಲಿರುವ ಕಲಾತ್ಮಕವಾಗಿ ಕೆತ್ತಿರುವ ಶಾಸನದಿಂದ ಗೊತ್ತಾಗುತ್ತದೆ. ಆನಂತರ ಮೈಸೂರು ಅರಸರ ನಿಯಂತ್ರಣಕ್ಕೆ ಒಳಪಟ್ಟ ಇದನ್ನು ಮುಂದೆ ೧೮೦೭ರಲ್ಲಿ ಸುತ್ತಮುತ್ತಲಿನ ಗ್ರಾಮಗಳೊಂದಿಗೆ ಜಹಾಗೀರಾಗಿ ದಿವಾನ್ ಪೂರ್ಣಯ್ಯನವರಿಗೆ ಮುಮ್ಮಡಿ ಕೃಷ್ಣರಾಜ ಒಡೆಯರು ನೀಡಿದ್ದು, ಪೂರ್ಣಯ್ಯನವರು ವಾಸವಾಗಿದ್ದ ಸುಂದರವಾದ ಅರಮನೆಯು ಇಲ್ಲಿದೆ.

ಇಲ್ಲಿಯ ಗೌರೇಶ್ವರ ದೇವಾಲಯದ ಮಹಾದ್ವಾರಮಂಟಪಕ್ಕೆ ಗೋಪುರವಿಲ್ಲ. ಆದರೂ ದ್ವಾರಮಂಟಪದ ಪ್ರತಿಯೊಂದು ಭಾಗವನ್ನು ಆಕರ್ಷಕವೂ ವೈವಿಧ್ಯಮಯವೂ ಆದ ಅಂಧಕಾಸುರ ವಧೆ, ಶೂಲಬ್ರಹ್ಮ, ಭಿಕ್ಷಾಟನಾ

ಮೂರ್ತಿ ಶಿವ, ಭೈರವ, ಕಾಳಿಂಗಮರ್ಧನ, ದಕ್ಷಿಣಾಮೂರ್ತಿ, ಶರಭ, ವಾಲಿ–ಸುಗ್ರೀವ, ವಿವಿಧ ಬಗೆಯ ನರಸಿಂಹ ಶಿಲ್ಪ, ಕೃಷ್ಣಲೀಲಾ ಪಟ್ಟಿಕೆ, ಹಾಗೂ ಶಿವನ ಪರಿವಾರ ದೇವತಾ ಗಣಗಳೊಂದಿಗೆ ಪಾಳೇಗಾರರ ಎರಡು ಭಕ್ತ ಶಿಲ್ಪಗಳೇ (ಒಂದು ಪ್ರಾಯಃ ದ್ವಾರಮಂಟಪ ನಿರ್ಮಿಸಿದ ಮುದ್ದಭೂಪಾಲನದು) ಮುಂತಾದ ಉಬ್ಬುಶಿಲ್ಪ ಕೆತ್ತನೆಗಳಿಂದ ಅದನ್ನೊಂದು ಉತ್ಕ್ರಷ್ಟ ಕಲಾಕೃತಿಯನ್ನಾಗಿ ಮಾಡಲಾಗಿದೆ. ಈ ಮಂಟಪದ ಛಾವಣಿಯು ಉತ್ಕ್ರಷ್ಟ ಕಲಾಕೃತಿಯಾಗಿದ್ದು, ಅಷ್ಟದಿಕ್ಪಾಲಕರಿಂದ ಆವೃತವಾದ ಕಮಲದಿಂದ ಅಲಂಕರಿಸಲ್ಪಟ್ಟಿದೆ. ದ್ವಾರಮಂಟಪದ ಇಕ್ಕೆಲದ ಕೋಷ್ಠಗಳಲ್ಲಿ ಗಣಪತಿ ಹಾಗೂ ಸೂರ್ಯ ಶಿಲ್ಪಗಳನ್ನಿಡಲಾಗಿದೆ. ಈ ದ್ವಾರ ಮಂಟಪದ ನಾಲ್ಕು ಮೂಲೆ ಹಾಗೂ ಮಂಟಪದ ಬಾಗಿಲ ಎರಡೂ ಪಾರ್ಶ್ವಗಳಲ್ಲಿ ಸು. ೨೦ ಸೆಂ.ಮೀ. ವ್ಯಾಸದ ದುಂಡಾಕಾರದ ಕಿರು ಶಿಲಾಬಳೆಗಳಿಂದ ಕೂಡಿದ ಏಕ ಶಿಲಾ ಸರಪಳಿಗಳಿವೆ. ಅದರಿಂದಾಗಿ ಈ ಮಂಟಪವನ್ನು ಸ್ಥಳೀಯವಾಗಿ 'ಬಳೇಮಂಟಪ' ಎಂದೂ ಕರೆಯಲಾಗುತ್ತದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮಂಟಪಗಳನ್ನುಳ್ಳ ಗೌರೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಅಂತರಾಳದಲ್ಲಿ ವಿಷ್ಣು, ಷಣ್ಮುಖ, ಪಾರ್ವತಿ, ಮಹಿಷಮರ್ಧಿನಿ, ಭೈರವ, ದುರ್ಗಿ, ವೀರಭದ್ರ ಹಾಗೂ ಗಣಪತಿ ಮೂರ್ತಿಗಳಿವೆ. ಮುಂದಿರುವ ಶಿಲುಬೆಯಾಕಾರದ ತೆರೆದ ಮಂಟಪದ ಕಂಬಗಳು ವಿಜಯನಗರ ಶೈಲಿಯಲ್ಲಿದ್ದು, ಮಂಟಪದ ಒಂದು ಬದಿಯಲ್ಲಿ ಸೂರ್ಯನ ಗುಡಿಯಿದೆ. ಪ್ರಧಾನ ದೇವಾಲಯದ ಹಿಂಭಾಗದಲ್ಲಿ ಒಂದೇ ಸಾಲಿನಲ್ಲಿರುವ ಪಂಚಗುಡಿಗಳನ್ನೂ ಮುದ್ದುಭೂಪಾಲನು ನಿರ್ಮಿಸಿ ಶಿವಲಿಂಗಗಳನ್ನು ಮಹಾದ್ವಾರ ಮಂಟಪ ನಿರ್ಮಾಣ ಸಂದರ್ಭದಲ್ಲೇ ಪ್ರತಿಷ್ಠಾಪಿಸಿದ್ದಾನೆ. ಇವುಗಳ ಕಂಬಗಳೂ ಆಕರ್ಷಕ ಉಬ್ಬು ಶಿಲ್ಪ ಕೆತ್ತನೆಯಿಂದಾಗಿ ಗಮನ ಸೆಳೆಯುತ್ತವೆ. ಗೌರೇಶ್ವರ ಗುಡಿಯ ಎಡಭಾಗದ ಪಾರ್ವತಿ ಗುಡಿಯಲ್ಲಿರುವ ಪಾರ್ವತಿ ಶಿಲ್ಪವು ಕಮಲ ಹಿಡಿದು ಅಭಯ ವರದಾ ಮುದ್ರೆಯಲ್ಲಿರುವ ಸುಂದರ ಮೂರ್ತಿಯಾಗಿದೆ.

ಇಲ್ಲಿಯ ವರಾಹಸ್ವಾಮಿ ಗುಡಿ ಸಂಕೀರ್ಣದ ಪ್ರಾಕಾರದೊಳಗೆ ಬಲಕ್ಕಾದಂತೆ ಆಂಜನೇಯನ ಕಿರುಗುಡಿ ಇದೆ. ಗರ್ಭಗುಡಿಯಲ್ಲಿ ಎಡತೊಡೆಯ ಮೇಲೆ ಲಕ್ಷ್ಮಿಯನ್ನು ಕೂರಿಸಿಕೊಂಡಿರುವ ವರಾಹಸ್ವಾಮಿ ಮೂರ್ತಿ ಇದ್ದು, ಇದರ ಇಕ್ಕೆಲದ ಎರಡು ಗೂಡುಗಳಲ್ಲಿ ಚನ್ನಕೇಶವ ಹಾಗೂ ಲಕ್ಷ್ಮೀಯ ಶಿಲ್ಪಗಳಿವೆ. ಇದೇ ಗುಡಿಯಲ್ಲಿರುವ ಎರಡು ತೀರ್ಥಂಕರ ಶಿಲ್ಪಗಳಲ್ಲಿ ಪಾರ್ಶ್ವನಾಥ ಶಿಲ್ಪವು ಸುವರ್ಣಾವತಿ ಸೇತುವೆ ಬಳಿ ದೊರೆಯಿತೆಂದು ಹೇಳಲಾಗುತ್ತಿದ್ದು, ಹಿಂದೆ ಇದೊಂದು ಜೈನಬಸದಿಯಾಗಿದ್ದು, ಈಗ ಇಲ್ಲಿರುವ ಲಕ್ಷ್ಮೀವರಾಹ ಮೂರ್ತಿಯನ್ನು ಯರಿಯೂರಿನ ಪಾಳುಗುಡಿಯೊಂದರಿಂದ ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದೆ ಎಂದು ಹಯವದನರಾಯರು ಬಹು ಹಿಂದೆಯೇ ದಾಖಲಿಸಿದ್ದಾರೆ. ಈ ಗುಡಿಯ ಮುಂದಿದ್ದ ಉಪ್ಪಿನಮೋಳೆಕೆರೆಯು ಬಹುಶಃ ಉಪ್ಪಿನ ತಯಾರಿಕೆಗೆ ಹೆಸರಾಗಿದ್ದಂತೆ ತೋರುತ್ತದೆ. ವರಾಹ ಸ್ವಾಮಿ ದೇವರ ಜಾತ್ರೆಯನ್ನು ಫಾಲ್ಗುಣ ಹೋಳಿ ಹುಣ್ಣಿಮೆಯಂದು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ವೀರಶೈವ ಯತಿ, ಕಾವ್ಯರಚನಾಕಾರ, ಧನಗೂರು ಮಠದ ಷಡಕ್ಷರ ಕವಿಯ ಗದ್ದುಗೆಯು ಇಲ್ಲಿದ್ದು, ಅದರ ಶಾಖಾಮಠವೊಂದು ಹಿಂದೆ ಇಲ್ಲಿತ್ತು. ಜೈನ ಕವಿ ವಿಶಾಲಾಕ್ಷ ಪಂಡಿತ, 'ಹದಿಬದೆಯ ಧರ್ಮ' ಖ್ಯಾತಿಯ ಸಂಚಿಹೊನ್ನಮ್ಮ ಈ ಊರಿನವರು. 'ಯಳಂದೂರು' ತೆಂಗಿನ ತೋಟಗಳಿಗೆ ಹೆಸರಾಗಿದ್ದರೂ 'ಯಳಂದೂರಿನ ಕಪಿ ಬಲ್ಲದೇ ಎಳನೀರಿನ ಸಾರ' ಎಂಬ ಗಾದೆ ರೂಢಿಯಲ್ಲಿದೆ. ಇಲ್ಲೇ ದೊರೆತಿರುವ ೧೭೭೫ರ ತಾಮ್ರಶಾಸನವೊಂದರಲ್ಲಿ ಯಳಂದೂರಿನ ಸೆಟ್ಟರು ಸಮಸ್ತರೊಗೂಡಿ ಏಕಸ್ಥರಾಗಿ ಕಾರೇಪುರ ಮಠದ ಬಸವೇಶ್ವರ ದೇವರಿಗೆ ದತ್ತಿ ಬಿಟ್ಟ ಉಲ್ಲೇಖವಿದೆ

**ರಾಘವಾಪುರ (೨,೫೧೭):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಇದೊಂದು ಚಾರಿತ್ರಿಕ ಮಹತ್ವದ ಸ್ಥಳ. ಊರ ಹೊರವಲಯದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಕಲ್ಮನೆ ಸಮಾಧಿಗಳಿವೆ. ಇದರಿಂದ ಗ್ರಾಮದ ಪ್ರಾಚೀನತೆಯನ್ನು ಕ್ರಿ.ಪೂ.೫ನೇ ಶತಮಾನಕ್ಕೆ

ಗುರುತಿಸಬಹುದಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಎರಡು ಶಾಸನಗಳಲ್ಲಿ ೧೩೨೦ರ ಶಾಸನ ಹೊಯ್ಸಳ ಮುಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ್ದು, ಅರಸನು ಅರುಣ ಸಮುದ್ರದ ನೆಲೆವೀಡಿನಲ್ಲಿದ್ದಾಗ, ಮಾಧವ ದಂಡನಾಯಕನ ಮಗ, ಭರತೀಜಿಯ ದಂಡನಾಯಕನು ಹದಿನಾಲ್ಕು ನಾಡನ್ನು ತೆರಕಣಾಂಬಿಯಿಂದ ಆಳುತ್ತಿರೆ, ಅರಸನು ಮಹಾಪ್ರಧಾನಕೇತಯ್ಯ ದಂಡನಾಯಕನಿಗೆ ನೀಡಿದ ಗೋಮ್ಮಟಹಳ್ಳಿ, ಮಾದೆಯಹಳ್ಳಿಗಳನ್ನು ತಮ್ಮ ಅರಮನೆಯ ಶ್ರೀಕರಣದ ರಾಘವ ದೇವನ ಮಗ ನಾರಣದೇವಣ್ಣನಿಗೆ ನೀಡಿದ್ದನು. ತನ್ನ ತಂದೆ ಶ್ರೀಕರಣಾಧಿಕಾರಿ ರಾಘವದೇವನ ನೆನಪಾಗಿ 'ಗೊಮ್ಮಟಹಳ್ಳಿ'ಯನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ, 'ರಾಘವಾಪುರ' ಎಂದು ಅದನ್ನು ಕರೆದುದಾಗಿ ಈ ಶಾಸನ ತಿಳಿಸುತ್ತದೆ. ಅಲ್ಲದೇ ಈ ಶಾಸನದಲ್ಲಿ ಚಿಂಚ, ವಟ, ಬನ, ಚಿಕ್ಕರಳಿ, ಕಲ್ಪತ್ತಿ, ಹೊಂಗೆ, ಸಿಂದ, ಗೊಟ್ಟಿ, ತುಗ್ಗಿಲ, ಕಗ್ಗಲಿ ಮುಂತಾದ ಮರಗಳನ್ನು ಗಡಿಚಿಹ್ನೆಯಾಗಿ ಹೆಸರಿಸಲಾಗಿದೆ. ರಾಮೇಶ್ವರ ಗುಡಿ ಮುಂದಿರುವ ೧೫೦೭ರ ಶಾಸನ, ನಂಜನಗೂಡಿನ ನಂಜುಂಡೇಶ್ವರ ದೇವರ ಅಮೃತಪಡಿಗೆಂದು ರಾಘವಪುರ, ಹೊನ್ನಾಪುರಗಳನ್ನು ಭಂಡಾರಕ್ಕೆ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ.

ಇಲ್ಲಿಯ ರಾಮಲಿಂಗೇಶ್ವರ ದೇವಾಲಯವು ಹೊಯ್ಸಳ ಕಾಲದ ರಚನೆಯಾಗಿದ್ದು, ಇದನ್ನು ಅದೇ ನಾರಣದೇವಣ್ಣನೇ ೧೩೨೦ರಲ್ಲಿ ನಿರ್ಮಿಸಿದ್ದು, ವಿಶಾಲವಾದ ಪ್ರಾಕಾರ, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಊರಮಧ್ಯದಲ್ಲಿರುವ ಲಕ್ಷ್ಮೀಕಾಂತನ ಗುಡಿಯು ದೊಡ್ಡದಿದ್ದು, ವಿಶಾಲವಾದ ಪ್ರಾಕಾರದ ನಡುವೆ ಎತ್ತರವಾದ ಜಗತಿಯ ಮೇಲೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ನವರಂಗ ಹಾಗೂ ಮುಖಮಂಟಪದ ಕಂಬಗಳು ಗ್ರಾನೈಟ್ ಕಲ್ಲಿನವಾಗಿದ್ದು, ಇಕ್ಕೆಲಗಳಲ್ಲಿರುವ ಕೋಷ್ಠಕಗಳಲ್ಲಿ ನಾಗಲಿಂಗ ಹಾಗೂ ಚಂಡಿಕೇಶ್ವರ ಶಿಲ್ಪಗಳಿವೆ. ಗರ್ಭಗೃಹದಲ್ಲಿ ರಾಮೇಶ್ವರ ಲಿಂಗ ಹಾಗೂ ಕೋಣನ ತಲೆಯ ಮೇಲೆ ನಿಂತಿರುವ ಮಹಿಷಮರ್ಧಿನಿ ಶಿಲ್ಪವಿವೆ. ಗರ್ಭಗೃಹದಲ್ಲಿ ಹೊಯ್ಸಳ ಕಾಲದ ಚತುರ್ಭುಜಧಾರಿ ವಿಷ್ಣು ಶಿಲ್ಪವಿದ್ದು, ಇಕ್ಕೆಲಗಳಲ್ಲಿ ಶ್ರೀದೇವಿ–ಭೂದೇವಿಯರಿದ್ದಾರೆ. ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರ ಕೆತ್ತನೆಯಿದೆ. ದೇವಾಲಯದ ಭಿತ್ತಿಯು ಹೊಯ್ಸಳ ಲಕ್ಷಣವನ್ನು ಹೊಂದಿದೆ. ನವರಂಗದಲ್ಲಿರುವ ಲಕ್ಷ್ಮೀಯು ಮೈಸೂರು ಅರಸರ ಕಾಲದ ಸೇರ್ಪಡೆಯಾಗಿದ್ದು, ಅರ್ಧಮಂಪಟದಲ್ಲೂ ಮುಕ್ಕಾದ ವಿಷ್ಣು, ನಮ್ಮಾಳ್ವಾರ್, ರಾಮಾನುಜ ಮುಂತಾದ ಮೂರ್ತಿಗಳಿವೆ. ನವರಂಗದ ಕಂಬಗಳು ದುಂಡಾಕಾರದವಾಗಿದ್ದು, ಅಲಂಕೃತ ಬೋದಿಗೆಯನ್ನು ಹೊಂದಿದ್ದು, ಆಕರ್ಷಕವಾಗಿದ್ದು, ಜಗತಿಯ ಮೇಲೆ ಪ್ರದಕ್ಷಿಣಾಪಥವಿದ್ದು, ಗರ್ಭಗುಡಿಗಿರುವ ಮಡಿಕೆಯಾಕಾರದ ಪ್ರನಾಳದಲ್ಲಿ ಕೆತ್ತಲ್ಪಟ್ಟಿರುವ ಭಕ್ತಶಿಲ್ಪವು ರಾಘವದೇವ ಇಲ್ಲವೇ ದಾನಿ ನಾರಣದೇವಣ್ಣನಿರಬೇಕು. ಈ ಗುಡಿಯ ಸಮೀಪವಿರುವ ವೀರಗಲ್ಲುಗಳಲ್ಲಿ ದಶಶಿರವುಳ್ಳ ಚತುರ್ಭುಜಧಾರಿ ರಾವಣನ ಶಿಲ್ಪವಿದ್ದು, ಬದಿಯಲ್ಲೇ ಮಾಸ್ತಿಕಲ್ಲು ಕೂಡ ಇದೆ.

**ವೆಂಕಟಯ್ಯನ ಛತ್ರ(೩,೨೨೩):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಒಂಭತ್ತು ಕಿ.ಮೀ. ದೂರದಲ್ಲಿರುವ ಇದು ೧೭೩೩ರ ತಾಮ್ರ ಶಾಸನದಲ್ಲಿ 'ಶ್ರೀನಿವಾಸಪುರ' ಎಂದು ದಾಖಲಾಗಿದ್ದು, ಅಲ್ಲಿರುವ ಸುಪ್ರಸನ್ನ ವೆಂಕಟರಮಣಸ್ವಾಮಿಯ ತಿರುನಾಳ ಕೈಂಕರ್ಯಕ್ಕೆಂದು ಮಹಾನಾಡ ವರ್ತಕರು ಏಕಸ್ಥರಾಗಿ, ಶ್ರೀನಿವಾಸಪುರ ಮಾರ್ಗದಲ್ಲಿ ಉಪ್ಪುಚಡಿ ಹೊಗೆಸೊಪ್ಪು, ತುಪ್ಪ, ಎಣ್ಣೆ, ಜವಳಿ, ಹಸುಬೆ, ಗೋಣಿ, ಬಾಣೆ, ಹತ್ತಿ, ನೂಲು, ರಾಗಿ, ಅಕ್ಕಿ ಭತ್ತ ಮುಂತಾದ ಸರಕುಗಳ ಮೇಲೆ ಹೇರಿಗೆ 'ತಾರ' ಒಂದರಂತೆ ಮೊಗಮೆಯನ್ನು ವರ್ತಕರು ದತ್ತಿ ನೀಡಿದ್ದನ್ನು ಆ ಶಾಸನ ತಿಳಿಸುತ್ತದೆ. ಆದರೆ ಗ್ರಾಮದಲ್ಲಿರುವ ೧೬೭೭ರ ಇನ್ನೊಂದು ಶಾಸನದಲ್ಲಿ, ಮೈಸೂರು ಅರಸ ಇಮ್ಮಡಿ ದೇವರಾಜ ಒಡೆಯರು, ಹರದನಹಳ್ಳಿಯಲ್ಲಿ ಬ್ರಾಹ್ಮಣರಿಗೆಂದು ಅನ್ನಸತ್ರ ಸ್ಥಾಪಿಸಿ, ಅದರ ನಿರ್ವಹಣೆಗೆಂದು ಬೊಮ್ಮನಹಳ್ಳಿ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಇದರಿಂದ, ವೆಂಕಟಯ್ಯ ಛತ್ರ

ಹಿಂದೆ ಹರದನಹಳ್ಳಿಯ ಭಾಗವಾಗಿದ್ದ ಅಂಶ ವೇದ್ಯವಾಗುತ್ತದೆ. ಈ ಅಂಶವನ್ನು ಊರ ಜಮೀನೊಂದರಲ್ಲಿರುವ ಸುಮಾರು ೧೬ನೆಯ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಖಚಿತಪಡಿಸುತ್ತಿದ್ದು, ಹರದನಹಳ್ಳಿಯ ದಿವ್ಯಲಿಂಗೇಶ್ವರಕ್ಕೆ ಭೂದಾನ ನೀಡಿದ್ದನ್ನು ಅದು ಉಲ್ಲೇಖಿಸುತ್ತದೆ.

**ಶಿವಸಮುದ್ರ:** ಮಳವಳ್ಳಿ (ಮಂಡ್ಯ ಜಿಲ್ಲೆ) ಹಾಗೂ ಕೊಳ್ಳೇಗಾಲ ತಾಲೂಕುಗಳ ಗಡಿಯಲ್ಲಿರುವ ಇದು, ಕೊಳ್ಳೇಗಾಲದಿಂದ ೧೫ ಕಿ.ಮೀ. ದೂರದಲ್ಲಿದ್ದು, ಅಲ್ಲಿರುವ ನಿಸರ್ಗದತ್ತ ಭರಚುಕ್ಕಿ ಜಲಪಾತದಿಂದಾಗಿ ಜಗತ್ಪ್ರಸಿದ್ಧವಾಗಿದೆ. ಬೆಂಗಳೂರು-ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸತ್ತೇಗಾಲ, ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿ **ಸತ್ತೇಗಾಲ(೧೨,೫೦೩)** ಅಡ್ಡರಸ್ತೆಯಿಂದ ಐದು ಕಿ.ಮೀ. ಒಳಕ್ಕಾದಂತೆ ಇದೆ. ಕಾವೇರಿ ನದಿಯಂಚಲ್ಲಿರುವ ಮೂರು ರಂಗಸ್ಥಳಗಳಲ್ಲಿ ಒಂದಾದ ಮಧ್ಯರಂಗವಿದಾಗಿದ್ದು, ಶ್ರೀರಂಗಪಟ್ಟಣ ಆದಿರಂಗವಾದರೆ, ತಮಿಳುನಾಡಿನ ಶ್ರೀರಂಗಂ ಅಂತ್ಯರಂಗವಾಗಿದೆ. ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿವೆ. ಇಲ್ಲಿಯ ಶಾಸನಗಳಲ್ಲಿ ಮೂರು, ನೆರೆಯ ಮುಡಿಗೊಂಡಕ್ಕೆ ಸಂಬಂಧಿಸಿದ ದತ್ತಿ ಶಾಸನಗಳಾಗಿವೆ. ಇಲ್ಲಿಯ ಸೋಮೇಶ್ವರ ಗುಡಿಯ ಅಧಿಷ್ಠಾನದ ಮೇಲಿರುವ ಸುಮಾರು ೧೨-೧೩ನೆಯ ಶತಮಾನಕ್ಕೆ ಸೇರಿದ ತಮಿಳು ಶಾಸನದಲ್ಲಿ ಇದನ್ನು 'ಅನಾದಿ ಅಗ್ರಹಾರ ಉಡೈಯಾರ್ ದೇಸಿ ಉಯ್ಯಕೊಂಡ ಸೋಳಪಟ್ಟಣ' ಎಂದು ಕರೆಯಲಾಗಿದ್ದು, ಆಗ ಇದು ಮುಡಿಗೊಂಡಚೋಳ ಮಂಡಲದ ವ್ಯಾಪ್ತಿಯೊಳಗಿತ್ತೆಂದು ದಾಖಲಿಸಲಾಗಿದೆ. ಗುಂಡ್ಲುಪೇಟೆ ತಾಲೂಕಿನ ಕರಕಲಮಾದಹಳ್ಳಿಯ ೧೪೯೭ರ ಶಾಸನದಿಂದ ಉಮ್ಮತ್ತೂರ ಪ್ರಭು ಚನ್ನನಂಜೇರಾಜ ಒಡೆಯನು ಕಂಚಿ ಮೂಲದ ಸಿಂಗಾರಾರ್ಯಪುತ್ರ ನರಸಿಂಹ ಭಟ್ಟ ಉಪಾಧ್ಯರಿಗೆ ತಮ್ಮ ಕುಲದೇವರಾದ ಶಿವನಸಮುದ್ರದ ಉಭಯ ಕಾವೇರಿ ಮಧ್ಯದಲ್ಲಿ ನೆಲೆಸಿರುವ ಸೋಮೇಶ್ವರನ ಸನ್ನಿಧಿಯಲ್ಲಿ ಮಾಚಹಳ್ಳಿಯನ್ನು ಧರ್ಮ ಅಗ್ರಹಾರವನ್ನಾಗಿಸಿ, ಅದಕ್ಕೆ ಚನ್ನನಂಜರಾಯಪುರ ಎಂಬ ಅಭಿದಾನವನ್ನು ನೀಡಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇದರಿಂದ ಉಮ್ಮತ್ತೂರಿನ ಅರಸರು ಈ ದೇವರ ಒಕ್ಕಲೆಂಬ ಅಂಶ ಸ್ಪಷ್ಟವಾಗುತ್ತದೆ. ಪ್ರಸ್ತುತ ಇರುವ ಊರನ್ನು ಸುಮಾರು ೧೬ನೇ ಶತಮಾನದಲ್ಲಿ ವಿಜಯನಗರದ ಸಾಮಂತ ಗಂಗರಾಜನೆಂಬುವನು ಪುನರ್ ಸ್ಥಾಪಿಸಿದ್ದೆಂದು ಹೇಳಲಾಗುತ್ತಿದ್ದು, ನಂತರದಲ್ಲಿ ಇದು ಹದಿನಾಡು ಹಾಗೂ ಮೈಸೂರು ಅರಸರ ನಿಯಂತ್ರಣಕ್ಕೆ ಒಳಪಟ್ಟಿತ್ತು. ಇಲ್ಲಿಯ ವೀರೇಶ್ವರ ಗುಡಿಯಲ್ಲಿ ಮಹತ್ತಿನ ಮಠವನ್ನು ಹದಿನಾಡು ರಾಜ ತಿರುಮಲರಾಜನಾಯಕನು ಸ್ಥಾಪಿಸಿ, ದತ್ತಿ ಬಿಟ್ಟ ಅಂಶ ವೀರಭದ್ರಗುಡಿ ಆವರಣದಲ್ಲಿರುವ ೧೬೦೪ರ ಶಾಸನದಿಂದ ವೇದ್ಯವಾಗುತ್ತದೆ. ಬ್ರಿಟಿಷರು ೧೭೯೧ರಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆಗೆ ಮುಂದಾದಾಗ, ಬೆಂಗಳೂರು-ಶ್ರೀರಂಗಪಟ್ಟಣ ಮಾರ್ಗದಲ್ಲಿರುವ ಗ್ರಾಮಗಳನ್ನು ಹಾಳುಗೆಡವಿ ಅಲ್ಲಿಯ ಜನ ದನ ಕರುಗಳನ್ನು ಶಿವಸಮುದ್ರ ದ್ವೀಪದಲ್ಲಿ ನೆಲೆಸುವಂತೆ ಟಿಪ್ಪು ಮಾಡಿದ್ದನೆಂದೂ, ತತ್ಪರಿಣಾಮವಾಗಿ ಯುದ್ಧಕ್ಕೆಂದು ಸೈನ್ಯದೊಂದಿಗೆ ಹೊರಟ ಕಾರ್ನ್‌ವಾಲೀಸ್ ಮಾರ್ಗದುದ್ದಕ್ಕೂ ಪಾಳುಬಿದ್ದ ನಿರ್ವಸತಿ ಗ್ರಾಮಗಳನ್ನು ಕಂಡನೆಂದೂ ಹೇಳಲಾಗುತ್ತದೆ. ಆದರೆ ನಂತರದಲ್ಲಿ ಈ ದ್ವೀಪವು ಗಿಡ-ಗಂಟೆಗಳಿಂದ ದಟ್ಟ ಕಾಡಾಗಿ ಮಾರ್ಪಟ್ಟು, ಅಲ್ಲಿದ್ದ ಹಳೆಯ ಸೇತುವೆಯೂ ಶಿಥಿಲಗೊಂಡಿದ್ದು, ದ್ವೀಪ ಪ್ರವೇಶಿಸುವುದೇ ದುಸ್ತರವಾಗಿತ್ತೆಂದು ೧೮೦೧ರಲ್ಲಿ ಇಲ್ಲಿಗೂ ಭೇಟಿ ನೀಡಿದ್ದ ಫ್ರಾನ್ಸಿಸ್ ಬುಕಾನನ್ ಹೇಳುತ್ತಾನಾದರೂ, ಭರಚುಕ್ಕಿ ಜಲಪಾತವನ್ನು ಮನದುಂಬಿ ಹೊಗಳಿದ್ದಾನೆ. ಮುಂದೆ ಮೈಸೂರು ರೆಸಿಡೆಂಟರ ಬಳಿ ಅಧಿಕಾರಿಯಾಗಿದ್ದು ಇದನ್ನು ಜಹಗೀರಾಗಿ ಪಡೆದ ಟಿ. ರಾಮಸ್ವಾಮಿ ಮೊದಲಿಯಾರ್ ೧೮೨೧ರಲ್ಲಿ ಇಲ್ಲಿಯ ಕಾಡನ್ನು ಕಡಿದು ಸೇತುವೆಯನ್ನು ದುರಸ್ತಿಗೊಳಿಸಿದ ಅಂಶವನ್ನು ಅಲ್ಲೇ ಇರುವ ೧೮೩೨ರ ಶಾಸನವೊಂದು ದಾಖಲಿಸಿದ್ದು, ಅದರಲ್ಲಿ ಇಲ್ಲಿಯ ಸೇತುವೆಯನ್ನು 'ಲೂಷಿಂಗ್‌ಟನ್ ಸೇತುವೆ' ಎಂದು ಕರೆಯಲಾಗಿದೆ. ಸುಮಾರು ೧೮೩೦ರ ಫೆಬ್ರವರಿಯಲ್ಲಿ ಆರಂಭಗೊಂಡು ಆಗಸ್ಟ್ ೧೮೩೨ರಲ್ಲಿ ಪೂರ್ಣಗೊಂಡ ಈ ಸೇತುವೆಯ ಕಾಮಗಾರಿಯಲ್ಲಿ

ದೇಶೀ ಸಾಂಪ್ರದಾಯಕ ಶೈಲಿಯೊಂದಿಗೆ ವಿದೇಶಿ ತಂತ್ರಜ್ಞಾನವೂ ಮೇಳೈಸಿರುವುದನ್ನು ಕಾಣಬಹುದಾಗಿದ್ದು, ಇಂದು ಶಿಥಿಲಾವಸ್ಥೆಯಲ್ಲಿದ್ದರೂ, ಇತಿಹಾಸದ ಕುರುಹಾಗಿ ನಿಂತಿದೆ. ಇದಕ್ಕೆ ಪರ್ಯಾಯ ಸೇತುವೆಯನ್ನು ಕಳೆದ ಶತಮಾನದ ಮಧ್ಯ ಭಾಗದಲ್ಲಿ ನಿರ್ಮಿಸಲಾಗಿದೆ.

ಈ ದ್ವೀಪದಲ್ಲಿ ಸುಂದರವಾದ ಸೋಮೇಶ್ವರ ಹಾಗೂ ಶ್ರೀರಂಗನಾಥನ ಪ್ರಾಚೀನ ದೇವಾಲಯಗಳಿವೆ. ಇಲ್ಲಿಯ ಪ್ರಾಚೀನ ದೇವಾಲಯವಾದ ಸೋಮೇಶ್ವರ ಗುಡಿಯು ಚೋಳ ಶೈಲಿಯಲ್ಲಿದ್ದು, ಅದರ ಅಧಿಷ್ಠಾನದ ಮೇಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಹೊಯ್ಸಳ ಬಲ್ಲಾಳನ ತಮಿಳು ಶಾಸನವು ಉಳಗೈಮುಂಡೀಶ್ವರ, ತಿಲ್ಲಯ ಆಳ್ವಾರ ಮತ್ತು ತಿಲ್ಲೈಕೂಟ್ಟ ವಿಟಂಕರ ಗುಡಿಗಳನ್ನು ನಿರ್ಮಿಸಿ, ಪೂಜಾವಿಧಿಗಳಿಗೆಂದು ದತ್ತಿ ಬಿಟ್ಟ ಅಂಶವನ್ನು ದಾಖಲಿಸುತ್ತಿದ್ದು, ಅಲ್ಲೇ ಇರುವ ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಈ ದೇವರ ನಂದಾದೀಪಕ್ಕೆಂದು ದಾನ ನೀಡಿದ ಅಂಶವನ್ನು ಉಲ್ಲೇಖಿಸುತ್ತದೆ.

ಸೋಮೇಶ್ವರ ಗುಡಿಯ ಪ್ರಾಕಾರದ ದ್ವಾರಮಂಟಪವು ವಿಶಾಲವಾಗಿದ್ದು, ಆಕರ್ಷಕ ಕೆತ್ತನೆಯಿಂದ ಕೂಡಿದ ಶಿಲ್ಪಗಳ ನಡುವೆ ಗಾರೆಯ ಬೃಹತ್ ನಂದಿ ಮೂರ್ತಿಯಿದೆ. ಪ್ರಾಕಾರದೊಳಗೆ ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗಗಳಿದ್ದು, ವಿಜಯನಗರ ಕಾಲದಲ್ಲಿ ಮುಖಮಂಟಪವನ್ನು ಸೇರಿಸಿ, ಗುಡಿಯನ್ನು ವಿಸ್ತರಿಸಲಾಗಿದೆ. ಗರ್ಭಗೃಹದಲ್ಲಿ ಸೋಮೇಶ್ವರ ಲಿಂಗವಿದ್ದು, ಬಾಗಿಲವಾಡವು ಆಕರ್ಷಕವಾಗಿದ್ದು, ಇಕ್ಕೆಲದಲ್ಲಿ ದ್ವಾರಪಾಲಕರಿದ್ದು, ಮೇಲಿದ್ದ ಶಿಖರವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹದ ಇಕ್ಕೆಲದಲ್ಲಿರುವ ದೇವಕೋಷ್ಠಗಳಲ್ಲಿ ದಂಡಪಾಣಿ ಸುಬ್ರಹ್ಮಣ್ಯ ಹಾಗೂ ಗಣಪತಿಯ ಕಿರು ಶಿಲ್ಪಗಳಿವೆ.

ಈ ಗುಡಿಯ ವಿಶಾಲವಾದ ನವರಂಗವನ್ನು ವೃತ್ತಾಕಾರದ ಕಿರುಪ್ರಮಾಣದ ಕಂಬಗಳು ಹೊತ್ತು ನಿಂತಿದೆ. ನವರಂಗದ ಪ್ರವೇಶದ್ವಾರವು ಲತಾ-ಬಳ್ಳಿ ದೇವಾನುದೇವತೆಗಳನ್ನೊಳಗೊಂಡ ಅಂಶಕಾರಿಕ ಪಟ್ಟಿಕೆಗಳಿಂದ ಕೂಡಿದ್ದು, ಆಕರ್ಷಕವಾಗಿದೆ. ಸೋಮೇಶ್ವರ ಗುಡಿಯ ಹಿಂಬದಿಯಲ್ಲಿ ಇರುವ ಪಂಚ ಗರ್ಭಗುಡಿಗಳಲ್ಲಿ ಶಿವಲಿಂಗಗಳಿದ್ದು, ಎಲ್ಲಕ್ಕೂ ಸೇರಿದಂತೆ ಇರುವ ಆಯತಾಕಾರದ ವಿಶಾಲವಾದ ಮೊಗಸಾಲೆಯು ಹೊಯ್ಸಳ ಕಂಬಗಳಿಂದ ಕೂಡಿದೆ. ಸೋಮೇಶ್ವರ ಗುಡಿಯ ಎಡಕ್ಕೆ ಇರುವ ಅಮ್ಮನವರ (ಪ್ರಸನ್ನ ಮೀನಾಕ್ಷಿ) ಗುಡಿಯಲ್ಲಿ ಶ್ರೀ ಚಕ್ರವನ್ನು ಪ್ರತಿಷ್ಠಾಪಿಸಲಾಗಿದೆ ಎಂಬ ಅಭಿಪ್ರಾಯವಿದೆ. ಈ ಗುಡಿಗೆ ವಿಜಯನಗರ ಕಾಲದಲ್ಲಿ ಮುಖಮಂಟಪವನ್ನು ಸೇರಿಸಲಾಗಿದೆ.

ಈ ಗುಡಿಗೆ ಅನತಿದೂರದಲ್ಲೇ ಇರುವ ರಂಗನಾಥ/ಜಗನ್ಮೋಹನ ರಂಗನಾಥ/ಕಸ್ತೂರಿ ರಂಗನಾಥನ ದೇವಾಲಯವಿದೆ. ವಿಶಾಲವಾದ ಪ್ರಾಕಾರದಲ್ಲಿರುವ ಈ ಗುಡಿಯು ದೊಡ್ಡದಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ರಂಗಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಹೊಯ್ಸಳ ಶೈಲಿಯ ಅನಂತಶಯನ ರಂಗನಾಥನ ಶಿಲ್ಪವಿದ್ದು, ಇವನನ್ನು ಶ್ರೀಪಾದರಾಯರೂ ಸೇರಿದಂತೆ ಅನೇಕ ಹರಿದಾಸರು ಕಸ್ತೂರಿರಂಗನೆಂದೇ ತಮ್ಮ ಪದಗಳಲ್ಲಿ ಭಜಿಸಿದ್ದಾರೆ. ಗರ್ಭಗೃಹಕ್ಕೆ ದ್ವಾರಪಾಲಕರಿದ್ದು, ಬಾಗಿಲಚೌಕಟ್ಟು ಆಕರ್ಷಕವಾಗಿದೆ. ನವರಂಗದ ಕಿರುಗುಡಿಯೊಂದರಲ್ಲಿ ರಾಮಾನುಜ ಹಾಗೂ ಆಳ್ವಾರರ ಶಿಲ್ಪಗಳಿವೆ. ಮುಖಮಂಟಪದ ಕಂಬಗಳು ಉತ್ಕೃಷ್ಟ ಉಬ್ಬುಶಿಲ್ಪ ಕೆತ್ತನೆಯಿಂದ ಕಂಗೊಳಿಸುತ್ತಿವೆ. ಮುಖಮಂಟಪಕ್ಕೆದುರಾಗಿ ಎತ್ತರದ ಗರುಡಗಂಬವಿದೆ.

ಇಲ್ಲಿಯ ವೀರಭದ್ರ ದೇವಾಲಯವು ಹದಿನಾಡು ಅರಸ ತಿರುಮಲರಾಜನಾಯಕನ ಕಾಲದ್ದಾಗಿದ್ದು, ಅವನು ಮಹತ್ತಿನ ಮಠವನ್ನೂ ಇಲ್ಲಿ ಸ್ಥಾಪಿಸಿದನೆಂದು ೧೬೦೪ರ ಶಾಸನದಿಂದ ವೇದ್ಯವಾಗುತ್ತದೆ. ಗ್ರಾಮದೇವತೆ ಮಾರಮ್ಮನ ಗುಡಿಯು ಇಲ್ಲಿಯ ಇನ್ನೊಂದು ವಿಶೇಷ ಆಕರ್ಷಣೆಯಾಗಿದೆ. ಜಲಪಾತಕ್ಕೆ ಹೋಗುವ ಮಾರ್ಗದಲ್ಲಿ ಎಡಕ್ಕಾದಂತೆ, ಮುಸ್ಲಿಂ ಸಂತ ಹಜರತ್ ಮರ್ದಾನೆ ಗಾಯಿಬ್'ನ ದರ್ಗಾವಿದ್ದು, ಬದಿಯಲ್ಲೇ ಮಸೀದಿಯೂ ಇದೆ. ಕಾವೇರಿಯ ಪಶ್ಚಿಮ ಕವಲು ಒಮ್ಮೆಮ್ಮೊಮ್ಮೆಲೆ ಕೆಳಗೆ ಭೋರ್ಗರೆದು ಧುಮುಕಿದಾಗ ಇಲ್ಲಿಂದ ಕಾಣಸಿಗುವ ಗಗನಚುಕ್ಕಿ ಜಲಪಾತದ ವಿಹಂಗಮ ದೃಶ್ಯ ಮನಮೋಹಕವಾಗಿರುತ್ತದೆ. ಶೇಷಾದ್ರಿ ಅಯ್ಯರ್ ಜಲವಿದ್ಯುತ್ ಉತ್ಪಾದನಾ ಕೇಂದ್ರ (೧೯೦೨) ಕಾವೇರಿಯ ಆಚೆ ದಡದಲ್ಲಿದೆ. ಈ ದರ್ಗಾದಿಂದ ಸುಮಾರು ಒಂದೂವರೆ ಕಿ.ಮೀ. ಆಗ್ನೇಯಕ್ಕೆ ಇನ್ನೊಂದು ದಾರಿಯಲ್ಲಿ ಸಾಗಿದರೆ ಎದುರಾಗುವುದೇ ಭರಚುಕ್ಕಿ ಜಲಪಾತ. ಇಲ್ಲಿ ಕಾವೇರಿಯ ಪೂರ್ವಕವಲು ರಭಸದಿಂದ ಅನೇಕ ಟಿಸಿಲುಗಳಾಗಿ ಆರ್ಭಟಿಸುತ್ತಾ ಕೆಳಗೆ ಧುಮುಕುವ ದೃಶ್ಯ ರೋಮಾಂಚನವನ್ನುಂಟು ಮಾಡುತ್ತದೆ. ಈ ಎರಡು ಕವಲುಗಳು ಆಳಕ್ಕೆ ಧುಮುಕಿ ಮುಂದೆ ದ್ವೀಪದ ಈಶಾನ್ಯ ಭಾಗದಲ್ಲಿ ಒಂದಾಗಿ ಪೂರ್ವಾಭಿಮುಖವಾಗಿ ಪ್ರವಹಿಸುತ್ತದೆ.

**ಸತ್ತೇಗಾಲ(೧೨,೫೦೩):** ತಾಲೂಕು ಕೇಂದ್ರ ಕೊಳ್ಳೇಗಾಲದಿಂದ ೧೦ ಕಿ.ಮೀ. ದೂರದಲ್ಲಿ ಬೆಂಗಳೂರು–ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾವೇರಿ ನದಿ ಬಯಲಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಹೊಯ್ಸಳರ ಕಾಲದ ಪ್ರಾಚೀನ ಅಗ್ರಹಾರವಿದಾಗಿದ್ದು, 'ಕೂಡಕೂರು' ಅದರ ಮೂಲ ಹೆಸರಾಗಿದ್ದು, 'ಪ್ರಸನ್ನ ಮಾಧವಪುರ' ಎಂಬ ಅಭಿದಾನವನ್ನೂ ಹೊಂದಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ.

ಇಲ್ಲಿಯ ವರದರಾಜಸ್ವಾಮಿ ದೇವಾಲಯವು ವಿಜಯನಗರ ಶೈಲಿಯಲ್ಲಿದ್ದು, ರಾಯಗೋಪುರವನ್ನುಳ್ಳ ಮಹಾದ್ವಾರದಿಂದ ಕೂಡಿದ ಪ್ರಾಕಾರದ ನಡುವೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಇಟ್ಟಿಗೆ ಗಾರೆಗಳಿಂದ ಕೂಡಿದ ಶಿಖರವನ್ನುಳ್ಳ ಗರ್ಭಗುಡಿಯಲ್ಲಿ ಒಂದು ಮೀಟರ್ ಎತ್ತರದ ವಿಷ್ಣುಮೂರ್ತಿ ಇದೆ. ನವರಂಗದಲ್ಲಿ ನರಸಿಂಹನ ಆಸೀನ ಶಿಲ್ಪವಿದ್ದು, ತೊಡೆಯ ಮೇಲೆ ಲಕ್ಷ್ಮೀ ಇದ್ದಾಳೆ. ಈ ದೇವರ ಎಡಕ್ಕೆ ಇರುವ ಲಕ್ಷ್ಮೀಗುಡಿಗೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿವೆ. ಅದರ ಗರ್ಭಗೃಹದಲ್ಲಿ ಲಕ್ಷ್ಮೀಶಿಲ್ಪವಿದ್ದು, ಜೊತೆಗೆ ಆಳ್ವಾರ್ ಹಾಗೂ ದೇಶಿಕರ ಶಿಲ್ಪಗಳಿವೆ. ನವರಂಗದ ಕಂಬಗಳು ವಿಜಯನಗರೋತ್ತರ ಶೈಲಿಯಲ್ಲಿದ್ದು, ಕಂಬಗಳ ಮೇಲೆ ಮಹಿಷಮರ್ಧಿನಿ, ಶ್ರೀರಾಮ, ನರಸಿಂಹ ಮತ್ತು ಕಾಳಿಂಗಮರ್ಧನ ಉಬ್ಬುಶಿಲ್ಪಗಳಿವೆ.

ಊರ ಉತ್ತರ ಭಾಗದಲ್ಲಿ ಕಾವೇರಿ ದಂಡೆಯ ಮೇಲಿರುವ ವಿಶ್ವೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಇದೂ ವಿಜಯನಗರ ಶೈಲಿಯಲ್ಲಿಯೇ ಇದೆ. ಗರ್ಭಗೃಹದಲ್ಲಿ ಈಶ್ವರಲಿಂಗವಿದ್ದು, ಅಲ್ಲೇ ನಟರಾಜ, ಚಂದ್ರಶೇಖರ, ಮೀನಾಕ್ಷಿ, ಗಣಪತಿ ಹಾಗೂ ಚಂಡಿಕೇಶ್ವರರ ಲೋಹದ ಪ್ರತಿಮೆಗಳಿವೆ. ಪ್ರಧಾನ ಗುಡಿಯ ಎಡಕ್ಕಿರುವ ಕಿರುಗುಡಿಯಲ್ಲಿ ಪಾರ್ವತಿ (ಮೀನಾಕ್ಷಿ)ಯ ಆಸೀನ ಮೂರ್ತಿಯಿದ್ದು, ಗರ್ಭಗೃಹವು ವೃತ್ತಾಕಾರದ ಶಿಖರವನ್ನು ಹೊಂದಿದೆ. ದೇವಾಲಯದ ಹಿಂಬದಿಯ ಒಳಪ್ರಾಕಾರದಲ್ಲಿರುವ ೧೩ ಕಿರು ಗುಡಿಗಳಲ್ಲಿ ಶಿವಲಿಂಗ, ಗಣಪತಿ, ವೀರಭದ್ರ, ಮುಂತಾದ ಶಿಲ್ಪಗಳಿವೆ. ಆ ಕಿರುಗುಡಿಗಳ ಅರ್ಧಮಂಟಪ ಕಂಬಗಳು ಆಕರ್ಷಕ ಉಬ್ಬು ಕೆತ್ತನೆಯನ್ನು ಹೊಂದಿವೆ. ಇಲ್ಲಿ ಮಣ್ಣಿನಕೋಟೆಯ ಅವಶೇಷವಿದ್ದು, ದ್ವಾರದ ಬಳಿ ಆಂಜನೇಯನ ಗುಡಿ ಇದ್ದು, ಅದರ ಉತ್ತರ ಭಾಗದಲ್ಲಿ ನಂದಿಯ ದೊಡ್ಡ ಮೂರ್ತಿಯಿದೆ. ಊರಾಚೆ ಗದ್ದೆ ಬಯಲಲ್ಲಿ ವೃಂದಾವನವಿದೆ.

**ಸಾಗಡೆ (೨,೮೨೨):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೧೮ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಹೊಯ್ಸಳರ ಕಾಲಕ್ಕೆ ಸೇರಿದ ಮೂರು ಶಿಲಾಶಾಸನಗಳು ಈವರೆಗೆ ವರದಿಯಾಗಿದೆ. ಊರ ಕೇಶವಗುಡಿ ಮುಂದಿರುವ ೧೨೭೩ರ ಶಾಸನ ಕೇಶವದೇವರಿಗೆಂದು ಅಬ್ಬಾಗಿಲ ಹೊನ್ನಗೌಡನು ಕಂಬವನ್ನು ಮಾಡಿಸಿದ ಅಂಶವನ್ನು ದಾಖಲಿಸಿದರೆ, ಉಯ್ಯದಹಳ್ಳಿಯ ಕೇಸದಾಸ ಒಂದು ಕಂಬ ಹಾಗೂ ಉಮ್ಮತ್ತೂರ ಅಕಸಾಲೆಸೆಟ್ಟಿ ಹೊನ್ನಿಮಯರೂ ೯ ಕಂಬಗಳನ್ನು ಇದೇ ದೇವರಿಗೆ ಮಾಡಿಸಿದ ಧರ್ಮಕಾರ್ಯವನ್ನು ಇನ್ನೆರಡು ಶಾಸನಗಳು ದಾಖಲಿಸಿದೆ. ಆದರೆ ಈ ಶಾಸನಗಳಲ್ಲಿ ಊರ ಹೆಸರು ಉಲ್ಲೇಖಿಸಲ್ಪಟ್ಟಿಲ್ಲದಿದ್ದರೂ, ಇಲ್ಲಿರುವ ಕೇಶವ ಗುಡಿಯೇ ಮೇಲಿನ ಶಾಸನೋಕ್ತ ಗುಡಿಯಾಗಿದ್ದು, ಇಂದು ಶಿಥಿಲಾವಸ್ಥೆಯಲ್ಲಿದೆ.

**ಸಿಂಗಾನಲ್ಲೂರು(೩,೪೨೧):** ತಾಲೂಕು ಕೇಂದ್ರ ಕೊಳ್ಳೇಗಾಲದಿಂದ ೧೧ ಕಿ.ಮೀ. ದೂರದಲ್ಲಿ ಮಲೇಮಹದೇಶ್ವರ ಬೆಟ್ಟ ಮಾರ್ಗದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿಂದ ಈವರೆಗೆ ವರದಿಯಾಗಿರುವ ಐದು ಶಾಸನಗಳಲ್ಲಿ ೧೩೬೮ರ (?) ಶಾಸನದಲ್ಲಿ ಇದು 'ಸಿಂಗಣನಲ್ಲೂರಪುರ' ಎಂದು ಉಲ್ಲೇಖಿತಗೊಂಡಿದ್ದರೆ, ೧೬೫೯ರ ಇನ್ನೊಂದು ಶಾಸನದಲ್ಲಿ ಸಿಂಗಣನಲ್ಲೂರು ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು 'ಪದಿನಾಡು' ಆಡಳಿತ ವಿಭಾಗದಡಿಯಲ್ಲಿದ್ದ ಅಂಶ ಗೊತ್ತಾಗುತ್ತದೆ.

ಇಲ್ಲಿಯ ಜನಾರ್ದನ ದೇವಾಲಯವು ಚೋಳ ಶೈಲಿಯಲ್ಲಿದ್ದು, ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ಚೋಳ ಮಾದರಿಯ ಅಲಂಕಾರಿಕ ಕಂಬಗಳಿಂದ ಕೂಡಿದ ಭಿತ್ತಿಯನ್ನು ಹೊಂದಿರುವ ಗರ್ಭಗುಡಿಯಲ್ಲಿ ಸ್ಥಾನಕ ಭಂಗಿಯ ಜನಾರ್ದನ ಶಿಲ್ಪವಿದ್ದು, ಇಕ್ಕೆಲದಲ್ಲಿ ಶ್ರೀದೇವಿ–ಭೂದೇವಿಯರಿದ್ದಾರೆ. ನವರಂಗದ ಕಂಬಗಳು ದುಂಡಾಕಾರದವಾಗಿದ್ದು, ನಡುವಣ ನಾಲ್ಕು ಕಂಬಗಳ ಮೇಲೆ ಶ್ರೀರಾಮ, ನರಸಿಂಹ, ಗರುಡ ಮುಂತಾದ ಉಬ್ಬುಕೆತ್ತನೆ ಇದೆ. ಊರ ನಡುವೆ ಇರುವ ವೀರಭದ್ರ ದೇವಾಲಯದ ನಿರ್ಮಾಣದಲ್ಲಿ ಇಟ್ಟಿಗೆ ಗಾರೆಗಳ ಬಳಕೆಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಇದು ಹೊಂದಿದೆ. ಗರ್ಭಗುಡಿಯಲ್ಲಿ ವಿಜಯನಗರ ಶಿಲ್ಪ ಲಕ್ಷಣಗಳಿಂದ ಕೂಡಿದ ವೀರಭದ್ರನ ಎರಡು ಮೀ. ಎತ್ತರದ ಮೂರ್ತಿ ಇದ್ದು, ಮೇಲೆ ವೃತ್ತಾಕಾರದ ಶಿಖರವಿದೆ. ಇಲ್ಲಿಯ ಶಂಭುಲಿಂಗೇಶ್ವರ/ಕಟ್ಟೆ ಬಸವೇಶ್ವರ ಗುಡಿಯು ಕಿರುಗಾತ್ರದ್ದಾಗಿದ್ದು, ನವರಂಗದಲ್ಲಿ ಗಣಪತಿ ಹಾಗೂ ಸುಬ್ರಹ್ಮಣ್ಯ ಶಿಲ್ಪಗಳನ್ನು ಹೊಂದಿದೆ. ಇದರ ಪ್ರಾಕಾರದೊಳಗಿರುವ ಒಂದನೇಯ ಹರಿಹರನ ೧೩೬೮ರ ಶಾಸನ ಸಿಂಗಣನಲ್ಲೂರಪುರದ ಶಿವನಂಕಾರ ದೇವರಿಗೆ, ಅಯ್ಯಾವೊಳೆಯ ಐನೂರ್ವರು ವರ್ತಕ ಸ್ವಾಮಿಗಳ ಸಂಘವು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಇಲ್ಲಿಯ ೧೬೫೯ರ ಇನ್ನೊಂದು ಶಾಸನ ದೇವರಾಜ ಒಡೆಯನ ಕಾಲದಲ್ಲಿ ಯೋಗೀಶ್ವರ ದೇವರ ಸೇವೆಗೆಂದು ಸಿಂಗಾನಲ್ಲೂರಿನ ಶೆಟ್ಟಿಗಳು ದಾನ ನೀಡಿದ್ದನ್ನು ದಾಖಲಿಸಿದೆ. ಉಳಿದಂತೆ ಊರಲ್ಲಿ ಉಪ್ಪರಿಗೆ ಬಸವ, ಗಣಪತಿ, ಮುಂತಾದ ಕಿರು ಗುಡಿಗಳಿವೆ. ಮಲೆಮಹದೇಶ್ವರರು ಈ ಊರಿಗೆ ಬಂದಿದ್ದರೆಂಬ ಪ್ರತೀತಿ ಇದೆ. ರಂಗಭೂಮಿ ಕಲಾವಿದ ಖ್ಯಾತ ಚಲನಚಿತ್ರ ನಾಯಕ ನಟ, ಫಾಲ್ಕೆ ಪ್ರಶಸ್ತಿಯೂ ಸೇರಿದಂತೆ ಗಣ್ಯಾತೀಗಣ್ಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದ ಡಾ. ರಾಜಕುಮಾರ್ (ಮುತ್ತುರಾಜ್) ಈ ಊರಿನವರು. **ಕಾಮಗೆರೆ:** ಸಿಂಗನಲ್ಲೂರಿನಿಂದ ಮೂರು ಕಿ.ಮೀ. ದಕ್ಷಿಣಕ್ಕಿರುವ ಇದು ಊರ ಅಂಚಲ್ಲಿರುವ ದೊಡ್ಡಪಾದಪ್ಪನ ದೇವಾಲಯದಿಂದಾಗಿ ಉಲ್ಲೇಖಾರ್ಹವಾಗಿದೆ. ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿವೆ. ಇಂದು ಈ ದೇವಾಲಯವಿರುವ ಪರಿಸರದಲ್ಲಿ ಹಿಂದೆ 'ಕೊಂಗಳ್ಳಿ' ಗ್ರಾಮವಿದ್ದು, ಅದಿಂದು ನಿರ್ವಸತಿ ಗ್ರಾಮವಾಗಿದ್ದು, ಈಗ ಪಾಳು ದೇವಾಲಯವಷ್ಟೇ ಉಳಿದಿದೆ. ಆ ಊರಿನ ಜನ ಕಾಮಗೆರೆಯಲ್ಲಿಂದು ನೆಲೆಸಿದ್ದಾರೆ. ದೇವಾಲಯದಲ್ಲಿರುವ ವಿಜಯನಗರದ ಕಂಪಣ್ಣ ಒಡೆಯನ ಕಾಲದ ೧೩೬೬ರ ಶಾಸನದಲ್ಲಿ 'ಕೊಂಗುಪಟ್ಟಣ'

ಎಂದೇ ಇದು ಉಲ್ಲೇಖಿತಗೊಂಡಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಪಾಳುಗುಡಿಯ ನವರಂಗಕ್ಕೆ ಎರಡು ಮುಖಮಂಟಪಗಳಿವೆ. ಗರ್ಭಗೃಹದ ಒಳಾಂಗಣವು ವೃತ್ತಾಕಾರವಿದ್ದು, ಅಲ್ಲಿದ್ದ ಮೂರ್ತಿಯಿಂದು ಕಣ್ಮರೆಯಾಗಿದೆ. ನವರಂಗದ ಕಂಬಗಳು ನಟರಾಜ, ವಾದ್ಯವೃಂದ, ನೃತ್ಯಗಾತಿಯರೇ ಮುಂತಾದ ಉಬ್ಬುಕೆತ್ತನೆಗಳಿಂದ ಕೂಡಿದ್ದು, ಉಲ್ಲೇಖಾರ್ಹವಾಗಿದೆ. ಮೋಡಳ್ಳಿಯ ಜಪದಕಟ್ಟೆ ಬಳಿಯಿರುವ ೧೩೩೪ರ ಶಾಸನ ಮೋಡಳ್ಳಿಯ ಸೀಮೆಯಲ್ಲಿ ನಿರ್ಮಿಸಲಿರುವ ಕಂಪರಾಜಪಟ್ಟಣದಲ್ಲಿ ನೆಲೆಸುವ ನೆರೆಯ ಸಿಂಗಾನಲ್ಲೂರು ಹಾಗೂ ಮೋಡಳ್ಳಿಯ ವೃತ್ತಿಪರ ಕುಟುಂಬಗಳಿಗೆಂದು ರೂಪಿಸಿದ ಕಟ್ಟಳೆಯನ್ನು ತಿಳಿಸುತ್ತದೆ. ೧೩೬೬ರ ಶಾಸನದಲ್ಲಿ ಈ ದೇವರನ್ನು ಮಲ್ಲಿನಾಥನೆಂದು ಹೆಸರಿಸಲಾಗಿದ್ದು, ಅಚ್ಯುತರಾಯನ ಆಳ್ವಿಕೆಗೆ ಸೇರಿದ ೧೫೩೪ರ ಶಾಸನ, ಹದಿನಾಡು ನಾಡಿನ ಅರಸ ರಾಮಪ್ಪಯ್ಯನು ಹಳೆಯ ಮೋಡಹಳ್ಳಿಯ ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಉಳಿದಂತೆ ಊರಲ್ಲಿ ವಿಘ್ನೇಶ್ವರ, ಬಸವೇಶ್ವರ ಮುಂತಾದ ನವೀನಗುಡಿಗಳಿದ್ದು, ಜೊತೆಗೆ ಕ್ಯಾಥೋಲಿಕ್ ಚರ್ಚು ಕೂಡ ಇದೆ. ಅಲ್ಲದೇ ಕ್ರೈಸ್ತರ ಸಾರ್ವಜನಿಕ ಆಸ್ಪತ್ರೆಯೂ ಇಲ್ಲಿದೆ. ಕಾಮಗೆರೆಯ ನೆರೆಯ ಗ್ರಾಮ ಮೋಡಳ್ಳಿಯಲ್ಲಿ ವಿಜಯನಗರ ಕಾಲದ ಎರಡು (೧೫೪೫ ಹಾಗೂ ೧೫೯೨) ಶಾಸನಗಳಿವೆ. ವಿಜಯನಗರ ಕಾಲದ ಭೂಮಾಪನ ಪದ್ಧತಿಗೆ ಸಂಬಂಧಿಸಿದಂತೆ ಮಹತ್ವದ ಮಾಹಿತಿ ಈ ಶಾಸನಗಳಲ್ಲಿದೆ.

**ಹಂಗಳ (೫,೪೯೭):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ನೈರುತ್ಯಕ್ಕೆ ಸುಮಾರು ೧೮ ಕಿ.ಮೀ. ದೂರದಲ್ಲಿ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಸ್ಥಳ. ಇಲ್ಲಿಂದ ಈವರೆಗೆ ಎಂಟು ಶಾಸನಗಳು ವರದಿಯಾಗಿವೆ. ಹೊಯ್ಸಳ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ೧೨೭೫ರ ತಮಿಳು ಶಾಸನದಲ್ಲಿ ಈ ಊರಿನ ಹೆಸರು ಪಂಗುಲಂ' ಎಂದು ದಾಖಲಾಗಿದೆ. ಇಲ್ಲಿಯ ೧೬೫೬ರ ಶಾಸನದಲ್ಲಿ 'ಹಂಗುಲ ಸ್ಥಳ' ಎಂದು ಉಲ್ಲೇಖಗೊಂಡಿದ್ದು, ಇದರಿಂದ ಆ ವೇಳೆಗೆ ಇದು ಮಹತ್ವ ಪಡೆದಿದ್ದ ಅಂಶ ವೇದ್ಯವಾಗುತ್ತದೆ. ಇಲ್ಲಿಯ ವರದರಾಜಸ್ವಾಮಿ ದೇವಾಲಯವು ಹೊಯ್ಸಳರ ಕಾಲದ ರಚನೆಯಾಗಿದ್ದು, ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಮೂಲತಃ ಒಳಗೊಂಡಿದ್ದು, ಮೈಸೂರರಸರ ಕಾಲದಲ್ಲಿ ಇದಕ್ಕೆ ಮುಖಮಂಟಪವನ್ನೂ ಸೇರಿಸಲಾಗಿದೆ. ಗರ್ಭಗೃಹದಲ್ಲಿ ಜನಾರ್ದನ ಶಿಲ್ಪವಿದ್ದು, ಮೇಲಿನ ಶಿಖರವೂ ಜೀರ್ಣೋದ್ಧಾರಗೊಂಡಿದೆ. ನವರಂಗದ ಕಂಬಗಳು ದುಂಡಾಕಾರದವಾಗಿದ್ದು, ಬಾಗಿಲವಾಡವು ಆಕರ್ಷಕವಾಗಿದೆ. ಅಲ್ಲೇ ರಾಮಾನುಜರೂ ಸೇರಿದಂತೆ ಆಳ್ವಾರರ ಕಿರುಶಿಲ್ಪಗಳಿವೆ. ಈ ದೇವಾಲಯದ ಅಧಿಷ್ಠಾನದ ಮೇಲಿರುವ ೧೨೭೫ರ ತಮಿಳು ಶಾಸನದಿಂದ ಪಂಗುಲದ ತಿರುನಾರಾಯಣ ಪೆರುಮಾಳೆ ದೇವರ ತ್ರಿಸಂಧಿ ದೀಪಾರಾಧನೆಗೆಂದು ಕುರಿಪಟ್ಟಿಯ ಮಾರಿಸೆಟ್ಟಿಯು ನೀಡಿದ ಎರಡು ಗದ್ಯಾಣದಿಂದ ಬರುವ ಬಡ್ಡಿಯನ್ನು ದತ್ತಿ ಬಿಟ್ಟ ಅಂಶ ಗೊತ್ತಾಗುತ್ತದೆ. ಇದೇ ಗುಡಿಯ ತಳಪಾದಿಕಲ್ಲಿನ ಮೇಲಿರುವ ಸುಮಾರು ೧೭ನೇ ಶತಮಾನದ ಕಿರು ಶಾಸನ, ಗುಡಿಶಿಖರದ ಜೀರ್ಣೋದ್ಧಾರ ಕಾರ್ಯವನ್ನು ದಾಖಲಿಸಿದೆ. ಉಳಿದಂತೆ ಊರಲ್ಲಿ ಆಂಜನೇಯನ ಎರಡು, ಬಸವೇಶ್ವರ, ಮಾರಮ್ಮ, ಬೊಮ್ಮಪ್ಪ, ಮಹಾದೇಶ್ವರ ಹಾಗೂ ಸಿದ್ಧಪ್ಪಾಜಿ(ಸಿದ್ಧೇಶ್ವರ)ಯ ಒಂದೊಂದು ಗುಡಿಗಳಿವೆ. ಈ ಗ್ರಾಮದ ದಕ್ಷಿಣಕ್ಕೆ ಹೊಲವೊಂದರಲ್ಲಿರುವ ಸುಮಾರು ೧೬೫೬ರ ಶಾಸನ ಹಂಗಳದ ಅರಮನೆಯಲ್ಲಿ ರಾಜೊಡೆಯರ ನಿಧನರಾದ ನಂತರ, ರಾಣಿ ಅಮೃತಮ್ಮನು, ಕಲ್ಲಮಠ ಕಟ್ಟಿಸಿ, ಶಿವಲಿಂಗ ಪ್ರತಿಷ್ಠಾಪಿಸಿ, ಮರಳ ಬಸವಲಿಂಗದೇವರಿಗೆ ಮಠವನ್ನು ವಹಿಸಿ, ಹೊರಕೇರಿ ಬಾಚಹಳ್ಳಿ, ಗ್ರಾಮವನ್ನು ಸರ್ವಮಾನ್ಯವಾಗಿ ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಕಳೆದ ಶತಮಾನದ ಉತ್ತರಾರ್ಧಭಾಗದಲ್ಲಿ ಹಿತ್ತಾಳೆಯ ದೀಪಸ್ತಂಭ, ಗಂಟೆ, ಪಾತ್ರೆಗಳ ಜೊತೆಯ ೧೮ ದೇವತಾ ಪ್ರತಿಮೆಗಳೂ ಇಲ್ಲಿಯ ಹೊಲವೊಂದರಲ್ಲಿ ಆಕಸ್ಮಿಕವಾಗಿ ಪತ್ತೆಯಾಗಿವೆ. ಅವುಗಳಲ್ಲಿ ಚೌವ್ವೀಸ್ ತೀರ್ಥಂಕರರಿರುವ ಲೋಹದ ಪ್ರತಿಮೆಯೂ ದೊರೆತಿದ್ದು, ಪೀಠದ ಹಿಂಬದಿಯಲ್ಲಿ

ಸುಮಾರು ೧೧ನೆಯ ಶತಮಾನಕ್ಕೆ ಸೇರಿದ ಶಾಸನವಿದೆ. ಸರ್ವಲೋಕೇಶ್ವರರಾಯನ ಮಡದಿಯೂ ದಾಮನಂದಿ ಭಟಾರಕರ ಶಿಷ್ಯಳೂ, ಚಿಕ್ಕಚೋಗಬ್ಬೆಯ ತಾಯಿಯೂ ಆದ ಮಾಂಕಬ್ಬೆಯು ಈ ಪ್ರತಿಮೆಯನ್ನು ಮಾಡಿಸಿದ ಅಂಶ ಆ ಶಾಸನದಿಂದ ವೇದ್ಯವಾಗುತ್ತದೆ. ಅಲ್ಲೇ ಸಿಕ್ಕಿದ ದೀಪಸ್ತಂಭ, ಗಿಂಡಿ, ಗಂಟೆಗಳ ಮೇಲಿರುವ ಕಿರು ಶಾಸನಗಳೂ ಚಿಕ್ಕಜೊಗಬ್ಬೆಯೇ ಅವುಗಳ ದಾನಿ ಎಂದು ದಾಖಲಿಸಿವೆ. ಜೈನ ಅವಶೇಷಗಳ ಶೋಧ, ಹಿಂದೆ ಈ ಊರು ಜೈನಧರ್ಮಿಯರ ನೆಲೆಯಾಗಿದ್ದ ಅಂಶವನ್ನು ಸೂಚಿಸುತ್ತದೆ.

**ಹರದನಹಳ್ಳಿ (೪,೭೮೪)**: ಸತ್ಯಮಂಗಲ ರಸ್ತೆಯಲ್ಲಿ ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಸುಮಾರು ಆರು ಕಿ.ಮೀ. ದೂರದಲ್ಲಿರುವ ಸಾಂಸ್ಕೃತಿಕ ಮಹತ್ವದ ಸ್ಥಳ. ಇಂದು ಹೋಬಳಿ ಕೇಂದ್ರವಾಗಿರುವ ಇದು ಹೊಯ್ಸಳರ ಆಳ್ವಿಕೆಯಲ್ಲಿ ಸ್ವಲ್ಪ ಕಾಲ ಎಣ್ಣೆನಾಡನ್ನು ಆಳುತ್ತಿದ್ದ ಸಾಮಂತ ಮನೆತನವೊಂದರ ಉಪರಾಜಧಾನಿಯಾಗಿತ್ತೆಂದು ತಿಳಿದು ಬರುತ್ತದೆ. ಇಲ್ಲಿಂದ ಈವರೆಗೆ ಸುಮಾರು ೧೪ ರಿಂದ ೧೯ನೇ ಶತಮಾನಕ್ಕೆ ಸೇರಿದ ೩೫ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಹೆಚ್ಚಿನವು ಅಣಿಲೇಶ್ವರ ದೇವರಿಗೆ ನೀಡಿದ ದತ್ತಿಗಳಾಗಿವೆ. ಹೊಯ್ಸಳರ ಪ್ರಮುಖ ದಂಡನಾಯಕರಲ್ಲೊಬ್ಬನಾದ ಮಾಧವ ದಂಡನಾಯಕನ ಜನ್ಮಸ್ಥಳ ಈ ಊರಾಗಿದ್ದು, ಇಲ್ಲಿಂದ ವರದಿಯಾಗಿರುವ ೧೩೪೦ರ ಮುಮ್ಮಡಿ ಬಲ್ಲಾಳನ ಶಾಸನದಲ್ಲಿ ಇದು ಉಕ್ತವಾಗಿದೆ. ಇದನ್ನು 'ಮರ್ಗ್ಗೆ', ಮಗ್ಗೆಯ, ವಣಿಜಪುರ, ವಾಣಿಜ್ಯಪುರಿ, ಎಂದೆಲ್ಲಾ ಕರೆಯುತ್ತಿದ್ದರೆಂಬುದಕ್ಕೆ ಶಾಸನಾಧಾರಗಳಿವೆ. ಆದರೆ ಸುಮಾರು ೧೩೪೫ರ ತೇದಿಯನ್ನುಳ್ಳ ಕೂಟ ತಾಮ್ರಶಾಸನದಲ್ಲಿ ಊರ ಹೆಸರು 'ವಾಣಿಜ್ಯಪುರಿ' ಎಂದು ದಾಖಲಾಗಿದ್ದು, ಅದು ಕನ್ನಡ ಮೂಲದ 'ಹರದನಹಳ್ಳಿ' ಯ ಸಂಸ್ಕೃತ ರೂಪವಾಗಿದ್ದು, 'ಹರದ' ಎಂದ–ರೆ ವಣಿಕ/ವರ್ತಕ ಎಂದು ಅರ್ಥ. ಶೈವ 'ವಣೀಜ (ಬಣಜಿಗ) ವರ್ಗದವರು ನೆರೆಯ ತಮಿಳುನಾಡಿನ ಸತ್ಯಮಂಗಲ, ಈರೋಡ್, ಮಧುರೈಗಳೊಂದಿಗೆ ವ್ಯಾಪಾರದಲ್ಲಿ ತೊಡಗಿದ್ದು, ಅಂತಹ ವರ್ತಕರ ಒಂದು ನೆಲೆ ಹರದನಹಳ್ಳಿಯಾಗಿದ್ದು, 'ಮಗೆ' ಎನ್ನುವ ಮೂಲ ಹೆಸರು ೧೩೬೩ ರವರೆಗೆ ರೂಢಿಯಲ್ಲಿ ಇತ್ತೆಂದು ಒಂದನೆಯ ಬುಕ್ಕನ ಶಾಸನದಿಂದ ತರ್ಕಿಸಬಹುದಾಗಿದ್ದು, ಆ ಶಾಸನದಲ್ಲಿ 'ಹರದನಹಳ್ಳಿ' ರೂಪದ ಮೊದಲ ಉಲ್ಲೇಖ ದೊರೆಯುತ್ತದೆ.

ಊರ ಪ್ರವೇಶದಲ್ಲೇ ಇರುವ ದಿವ್ಯಲಿಂಗೇಶ್ವರ ದೇವಾಲಯವು ಹೊಯ್ಸಳ ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಮಹಾಪ್ರಧಾನ ಮಾಧವ ದಂಡನಾಯಕನ ಅಧಿಕಾರಿಯಾಗಿದ್ದ ಮರ್ಗ್ಗೆಯ ಪುರುಷಗೌಡನ ಮಗ ಮಾರಗೌಡನಿಂದ ೧೩೧೬ರಲ್ಲಿ ನಿರ್ಮಿಸಲ್ಪಟ್ಟಿದ್ದು, ನಂತರದಲ್ಲಿ ವಿಜಯನಗರ ಹಾಗೂ ಮೈಸೂರರಸರ ಆಳ್ವಿಕೆಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದ ಅಂಶ ಅನೇಕ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಮೇಲಿನ ಶಾಸನದಲ್ಲಿ ಈ ದೇವರನ್ನು ಅಣಿಲೇಶ್ವರನೆಂದು ಕರೆಯಲಾಗಿದ್ದು, ಆ ನಂತರದಲ್ಲಿ 'ದಿವ್ಯಲಿಂಗೇಶ್ವರ' ಎಂದು ಕರೆಯುವುದು ರೂಢಿಗೆ ಬಂದಿದೆ. ಆದರೆ ಈ ದೇವಾಲಯವು ಇನ್ನೂ ಪ್ರಾಚೀನದಿದ್ದು, ಮೈಸೂರು ಭಾಗದಿಂದ ಮಧುರೈಗೆ ವ್ಯಾಪಾರಕ್ಕೆಂದು ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ಶೈವವರ್ತಕರಿಂದ ೧೩೧೬ಕ್ಕೂ ಮೊದಲೇ ನಿರ್ಮಾಣಗೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಮೊದಲು ಅಮೃತೇಶ್ವರ ಎಂದು ಕರೆಯಲ್ಪಡುತ್ತಿದ್ದು, ನಂತರದಲ್ಲಿ ಅಣಿಲೇಶ್ವರವಾಗಿ ಕ್ರಮೇಣ 'ದಿವ್ಯಲಿಂಗೇಶ್ವರ' ನಾಮಾಕಿಂತವು ಚಾಲ್ತಿಗೆ ಬಂದಿರುವಂತಿದೆ. ಸುಮಾರು ೧೩೬೮ರ ಶಾಸನದಲ್ಲಿ ಇದನ್ನು 'ದಿಬ್ಬಲಿಂಗ ಅಣಲೇಶ್ವರ' ಎಂದೇ ಕರೆಯಲಾಗಿದೆ. ಈ ದೇವಾಲಯ ಸಂಕೀರ್ಣವು ಗುಡಿ, ಕಿರುಗುಡಿ, ಅರ್ಧಮಂಟಪ, ನವರಂಗ ಮುಖಮಂಟಪ, ನಂದಿಮಂಟಪ ಮುಂತಾದವುಗಳಿಂದ ತುಂಬಿದ್ದು, ದೇವಾಲಯದ ಮೂಲ ಸ್ವರೂಪವೇ ಅಸ್ಪಷ್ಟವಾಗಿದೆ. ಈ ದೇವಾಲಯದ ಮಹಾದ್ವಾರಕ್ಕೆ ಗೋಪುರವಿದ್ದು, ಅದಕ್ಕೆ ಎದುರಾಗಿ ವಿಶಾಲವಾದ ಮುಖಮಂಟಪವಿದೆ. ದೇವಾಲಯದ ಮುಖಮಂಟಪದ ಕಂಬಗಳು

ಬೇಡರಕಣ್ಣಪ್ಪ, ಭಕ್ತ ಮಾರ್ಕಂಡೇಯ, ಸಿರಿಯಾಳ, ತಾಂಡವಶಿವ ಮುಂತಾದ ಉಬ್ಬುಶಿಲ್ಪಗಳಿಂದ ಕೂಡಿದ್ದು, ಪ್ರಧಾನ ಗರ್ಭಗೃಹದಲ್ಲಿ ದಿವ್ಯಲಿಂಗೇಶ್ವರನ ಶಿವಲಿಂಗವಿದ್ದು, ಅದರ ಬಾಗಿಲವಾಡವು ಆಕರ್ಷಕವಾಗಿದ್ದು, ದ್ವಾರಪಾಲಕರಿದ್ದಾರೆ. ಇದರ ಮೇಲಿನ ಶಿಖರವೂ ಜೀರ್ಣೋದ್ಧಾರಗೊಂಡಿದೆ. ನವರಂಗದಲ್ಲಿ ಗಣಪತಿ, ದುರ್ಗಾ, ವೀರಭದ್ರ, ಆಂಜನೇಯ, ವಿಷ್ಣು, ಸೂರ್ಯ, ಗರುಡ ಮುಂತಾದ ಶಿಲ್ಪಗಳಿವೆ. ನವರಂಗ ದ್ವಾರದ ಇಕ್ಕೆಲದ ಕೋಷ್ಟಗಳಲ್ಲಿ ವೀರಭದ್ರ ಹಾಗೂ ಧ್ಯಾನಮಗ್ನ ಶಿವನ ಶಿಲ್ಪಗಳಿವೆ. ಈ ಗುಡಿಗೆ ರಂಗಮಂಟಪವನ್ನು ಸ್ಥಳೀಯ ಗೌಡ ಪ್ರಮುಖರು ಸುಮಾರು ೧೩೪೦ರಲ್ಲಿ ಸೇರಿಸಿದ ಅಂಶ ಅಲ್ಲೇ ಇರುವ ನಾಲ್ಕು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಪ್ರಧಾನ ಗರ್ಭಗೃಹದ ಎಡಕ್ಕಿರುವ ಪಾರ್ವತಿ/ಕಾಮಾಕ್ಷಿ ಅಮ್ಮನ ಗುಡಿಯು ತೆರೆದ ಮುಖಮಂಟಪ ಹಾಗೂ ನವರಂಗಗಳನ್ನು ಹೊಂದಿದ್ದು, ನವರಂಗದಲ್ಲಿ ಗುಪ್ತಮಾರ್ಗವಿದೆ ಎಂದು ಹೇಳಲಾಗುತ್ತದೆ. ಪ್ರಾಕಾರದ ಹಿಂಭಾಗದ ಒಳಅಂಚಲ್ಲಿರುವ ೯ ಕಿರು ಗುಡಿಗಳಲ್ಲಿ ಶಿವಲಿಂಗಗಳಿದ್ದು, ಒಂದರಲ್ಲಿ ವಿನಾಯಕನಿದ್ದಾನೆ. ಅಲ್ಲದೇ ಅವುಗಳ ಛಾವಣಿಯಲ್ಲಿ ವಿಜಯನಗರ ಶೈಲಿಯಲ್ಲಿ ಶಿವಲೀಲೆ, ರಾಮ, ಸೀತಾ, ಹೂಬಳ್ಳಿ, ಕೋನಾಕಾರದ ವಿನ್ಯಾಸವುಳ್ಳ ಸುಂದರ ವರ್ಣಚಿತ್ರವನ್ನು ಮೂಡಿಸಲಾಗಿದ್ದು, ಆಕರ್ಷಕವಾಗಿವೆ. ಆದರೆ ಇಂದು ಇವು ಮಸುಕಾಗುತ್ತಿದ್ದು, ಸಂರಕ್ಷಿಸುವ ಅಗತ್ಯವಿದೆ. ಈ ದೇವರನ್ನು ದಿವ್ಯಲಿಂಗೇಶ್ವರನೆಂದು ಕರೆಯಲು ಬಹುಶಃ ವ್ಯಾಜ್ಯ ಪರಿಹರಿಸಲು ಅಲ್ಲಿ ಬಳಸುತ್ತಿದ್ದ 'ದಿವ್ಯ ಪ್ರಮಾಣ ಪರೀಕ್ಷೆ' ಕಾರಣವಾಗಿರಬೇಕೆಂದು ತೋರುತ್ತಿದ್ದು, ಇದನ್ನು ಯಳಂದೂರಿನ ಸುಮಾರು ೧೭ನೇ ಶತಮಾನದ ಶಾಸನವೂ ಖಚಿತಪಡಿಸುತ್ತದೆ. ಈ ದೇವಾಲಯದ ಪ್ರಾಕಾರದಲ್ಲಿರುವ ಕಾಳಹಸ್ತೇಶ್ವರ ಗುಡಿಯನ್ನು ಹರದನಹಳ್ಳಿಯ ಲಿಂಗಯ್ಯನು ೧೬೪೫ರಲ್ಲಿ ನಿರ್ಮಿಸಿದ ಅಂಶವನ್ನು ಅಲ್ಲೇ ಇರುವ ಶಾಸನ ತಿಳಿಸುತ್ತದೆ. ಇಲ್ಲಿಯ ಒಂದು ಮಂಟಪವನ್ನು ಕೆಡವಿ, ಆ ಸಾಮಗ್ರಿಯನ್ನು ಚಾಮರಾಜನಗರದ ಚಾಮರಾಜ ಒಡೆಯರ 'ಜನ್ಮ ಮಂಟಪ'ದ ನಿರ್ಮಾಣದಲ್ಲಿ ಬಳಸಲಾಗಿದೆ ಎಂದು ಹೇಳಲಾಗುತ್ತದೆ. ಈ ದೇವಾಲಯದ ಪ್ರಾಕಾರದಂಚಲ್ಲಿ ಅನೇಕ ಶಾಸನಗಳು ಅಡ್ಡಾದಿಡ್ಡಿಯಾಗಿ ಬಿದ್ದಿದ್ದು, ಅವುಗಳನ್ನು ಸಂರಕ್ಷಿಸುವ ಅಗತ್ಯವಿದೆ.

ಅಮ್ಮನವರ ಗುಡಿಯ ಹಿತ್ತಲಲ್ಲಿರುವ ತೇದಿರಹಿತ ಶಾಸನ ಹರದನಹಳ್ಳಿಯ ಮಠಕ್ಕೆ ದಾನ ನೀಡಿದ್ದನ್ನು ದಾಖಲಿಸಿದೆ. ಆದರೆ ಇಲ್ಲಿದ್ದ ಮಠವನ್ನು ಕೆಡವಿ, ಗೋಪಾಲಸ್ವಾಮಿ ದೇವಾಲಯವನ್ನು ಚಿಕ್ಕದೇವರಾಜ ಒಡೆ–ಯರು ನಿರ್ಮಿಸಿದರೆಂದು ಹೇಳಲಾಗುತ್ತದೆ. ಈ ಗುಡಿಯ ಗರ್ಭಗೃಹದ ಸುತ್ತ ಹಾಗೂ ನವರಂಗದಲ್ಲಿರುವ ಕೆಲವು ಕಂಬಗಳ ಮೇಲೆ ಶಿವಲೀಲಾ ಕೆತ್ತನೆಗಳನ್ನು ನೋಡಬಹುದಾಗಿದೆ. ಗರ್ಭಗೃಹದಲ್ಲಿರುವ ವೇಣುಗೋಪಾಲನ ಶಿಲ್ಪವೂ ಸುಂದರವಾಗಿದೆ. ಅಲ್ಲೇ ಕಂಬವೊಂದರ ಮೇಲಿರುವ ೧೮ನೇ ಶತಮಾನಕ್ಕೆ ಸೇರಿದ ಶಾಸನ ತಗಡೂರಿನ ಮಲ್ಲರಾಜೊಡೆಯನ ಮಗ ನಂಜರಾಜಯ್ಯನ ದಾನವನ್ನು ಉಲ್ಲೇಖಿಸುತ್ತದೆ. ಈ ಗುಡಿಯ ಎಡಭಾಗದಲ್ಲಿ ಅಮ್ಮನವರ ಕಿರು ಗುಡಿ ಇದ್ದು, ನವರಂಗದಲ್ಲಿ ವರದಕಲ್ಲು, ಶ್ರೀನಿವಾಸ, ಶಟಗೋಪ್ಪ, ರಾಮಾನುಜಾಚಾರ್ಯ, ವಿಶ್ವಕಸೇನ ಶಿಲ್ಪಗಳಿದ್ದು, ಪ್ರತ್ಯೇಕ ಕೋಷ್ಠಗಳಲ್ಲಿ ಸ್ಥಾನಕ ಭಂಗಿಯ ಲಕ್ಷ್ಮೀ ಶಿಲ್ಪಗಳಿವೆ.

ಈ ಊರು ಪ್ರಮುಖ ವೀರಶೈವ ಕೇಂದ್ರವಾಗಿದ್ದು, ತೋಂಟದ ಸಿದ್ದಲಿಂಗಯತಿಗಳ ಜನ್ಮಸ್ಥಳವಾಗಿಯೂ ಮಹತ್ವ ಪಡೆದಿದೆ. ಇಲ್ಲಿಯ ವೀರಶೈವ ಮಠದ ೧೬ನೆಯ ಗುರುಗಳಾಗಿದ್ದ ತೋಂಟದ ಸಿದ್ಧಲಿಂಗೇಶ್ವರರು (ಸು. ೧೫೭೦ ರಲ್ಲಿ ಶಿವೈಕ್ಯ) ತಮ್ಮ 'ಷಟ್‌ಸ್ಥಳಸಾರಂಮೃತ' ಕೃತಿಯಲ್ಲಿ ಮೊದಲ ಗುರು ಅನಾದಿ ಗಣೇಶ್ವರರಿಂದ ತಮ್ಮ ಕಾಲದವರೆಗಿನ ಹರದನಹಳ್ಳಿ ಮಠದ ಗುರುಪರಂಪರೆಯನ್ನು ನೀಡಿದ್ದು, ಸಿದ್ಧಲಿಂಗೇಶ್ವರರ ಗದ್ದುಗೆಯು ಯಡೆಯೂರಿ (ಕುಣಿಗಲ್ ತಾ.) ನಲ್ಲಿದೆ. ಅಲ್ಲಮಪ್ರಭು ಅಲಂಕರಿಸಿದ ನಿರಂಜನ ಶೂನ್ಯ ಸಿಂಹಾಸನವನ್ನು ನಾಲ್ಕನೆಯವರಾಗಿ ಏರಿದ ಆದಿಗಣಾಚಾರ್ಯರು ಹರದನಹಳ್ಳಿ ಮಠದ ಮೊದಲ ಗುರುಗಳಾಗಿದ್ದು, ಮಲೆಯ

ಮಹಾದೇಶ್ವರರು ಈ ಮಠದ ಮೂರನೆಯ ಗುರುಗಳಾಗಿದ್ದರೆಂದು ತಿಳಿದು ಬರುತ್ತದೆ. ಈ ಪೀಠವನ್ನೇರಿದ ನಂತರದ ಗುರುಗಳು ಕುಂತೂರು, ಸಾಲೂರು, ಸಿದ್ಧಗಂಗಾ ಗುಬ್ಬಿ, ಯಡೆಯೂರು, ಮುಂತಾದೆಡೆ ವೀರಶೈವ ಮಠಗಳನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ. ೧೬ನೆಯ ಶತಮಾನದ ಅಂತ್ಯಾವಧಿಯಲ್ಲಿ ಅವನತಿ ಹೊಂದಿದ್ದ ಇಲ್ಲಿಯ ಮಠವನ್ನು ೧೯೧೦ರಲ್ಲಿ ಜೀರ್ಣೋದ್ಧಾರ ಮಾಡಲಾಗಿದ್ದು, ಈ ಮಠದ ೧೪ನೆಯ ಗುರುಗಳಾದ ದಿವ್ಯಲಿಂಗೇಶ್ವರರ ಗದ್ದುಗೆಯನ್ನು ಒಳಗೊಂಡ ಆಕರ್ಷಕ ಗುಡಿಯೊಂದು ಇಲ್ಲಿದೆ.

**ಹರವೆ(೪,೩೦೮):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಸುಮಾರು ೨೭ ಕಿ.ಮೀ. ದೂರದಲ್ಲಿರುವ ಇದು ಪ್ರಾಚೀನ ಶಾಸನಗಳಲ್ಲಿ 'ಹರುವಗೆ' ಎಂದು ಉಲ್ಲೇಖಗೊಂಡಿದ್ದು, ಮಲೆಯೂರಿಗೆ ಕೇವಲ ಮೂರು ಕಿ.ಮೀ. ಸಮೀಪದಲ್ಲಿರುವ ಇನ್ನೊಂದು ಜೈನಕೇಂದ್ರ. ಇಲ್ಲಿಂದ ಈವರೆಗೆ ವರದಿಯಾಗಿರುವ ಸುಮಾರು ೧೫–೧೮ನೇ ಶತಮಾನಕ್ಕೆ ಸೇರಿದ ಒಂಭತ್ತು ಶಾಸನಗಳಲ್ಲಿ ಒಂದು ಕೂಟ ಶಾಸನವಾಗಿದೆ. ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಇಲ್ಲಿಯ ಆದಿನಾಥ ಬಸದಿಯ ತೊಲೆಯೊಂದರ ಮೇಲಿರುವ ೧೪೮೨ರ ಶಾಸನ, ವಿಜಯನಗರದರಸರ ಅಧೀನ ಅರಸ ಉಮ್ಮತ್ತೂರ ವೀರ ಸೋಮೇಶ್ವರ ವಡೆಯನ ಕರಣಿಕ ದೇವರಸನು ಹರವೆಯಲ್ಲಿ ಚೈತ್ಯಾಲಯ ಪಾಕಶಾಲೆಗಳನ್ನು ನಿರ್ಮಿಸಿ, ಆದಿಪರಮೇಶ್ವರನನ್ನು ಪ್ರತಿಷ್ಠಾಪಿಸಿದಾಗ, ಸೋಮೇಶ್ವರ ವಡೆಯನು ದೇವರ ಪೂಜಾವಿಧಿಗಳಿಗೆಂದು ಸೋಮಸಾಗರದಲ್ಲಿ ತಾನು ನಿರ್ಮಿಸಿದ ಕೆರೆಯ ಕೆಳಗೆ ಐದು ಖಂಡುಗ ಭೂಮಿಯನ್ನೂ ಕುಮಾರ ನಂಜರಾಜವೊಡೆಯನು ೧೩೦೦ ಕಂಬ ಬೆದ್ದಲು ಭೂಮಿ ಹಾಗೂ ಎಂಟು ಅಂಕಣದ ಮನೆಯನ್ನು ದತ್ತಿ ನೀಡಿದ ಅಂಶವನ್ನು ತಿಳಿಸುತ್ತದೆ. ಊರ ಹೊಲವೊಂದರಲ್ಲಿರುವ ಇದೇ ತೇದಿಯ ಇನ್ನೊಂದು ಶಾಸನ, ಚಂದಯ್ಯನು ತನಗೆ ತಗಡೂರ ಪ್ರಭುಗಳು ನೀಡಿದ್ದ ದಾನ ಭೂಮಿಯನ್ನು ತನ್ನ ಕುಲದೇವರಾದ ಹರವೆಯ ಬಸ್ತಿಯ ಆದಿ ಪರಮೇಶ್ವರ ಸೇವೆಗೆಂದು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಇದು ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದ್ದು, ನವರಂಗದ ಪೂರ್ವ ದಕ್ಷಿಣ ಭಾಗಗಳಲ್ಲಿ ಮುಖಮಂಟಪಗಳಿದ್ದು ಎರಡು ಪ್ರವೇಶದ್ವಾರಗಳಿವೆ. ಮುಖಮಂಟಪದ ಕಂಬಗಳು ಉಬ್ಬು ಶಿಲ್ಪಗಳಿಂದ ಕೂಡಿದೆ. ಗರ್ಭಗುಡಿಯಲ್ಲಿ ಆದಿನಾಥ ತೀರ್ಥಂಕರನ ಶಿಲ್ಪವಿದ್ದು, ಶಾಂತಿನಾಥ, ಪದ್ಮಾವತಿ ಮುಂತಾದ ಶಿಲ್ಪಗಳಿವೆ. ನವರಂಗದಲ್ಲಿ ಪ್ರತ್ಯೇಕ ಕೋಷ್ಠಗಳಿವೆ. ಬಸದಿಯ ಬಳಿಯ ಇನ್ನೊಂದು ಗುಡಿಯಲ್ಲಿರುವ ೧೪೮೬ರ ನಿಶಿಧಿ ಶಾಸನವು ಜೈನಮುನಿ ಪ್ರಭೇಂದುದೇವರು, ಚಂದಪ್ಪ, ದೇವರಸ, ಪ್ರಭಾಚಂದ್ರ, ಗುಮ್ಮಾಯಿ ಹಾಗೂ ಹಿರಿಯ ಸೋಮಾಯಿಯರನ್ನು ಉಲ್ಲೇಖಿಸುತ್ತಾ, ದೇವರಸನ ಹಿರಿಯರಸಿ ಸೋಮಾಯಿಯ ಸಲುವಾಗಿ ಈ ನಿಶಿಧಿಕಲ್ಲನ್ನು ನಿಲ್ಲಿಸಿದ್ದನ್ನು ದಾಖಲಿಸಿದೆ. ಅಲ್ಲೇ ಇರುವ ಬ್ರಹ್ಮ ದೇವರ ಗುಡಿಯಲ್ಲಿ ಕುದುರೆ ಕೆತ್ತನೆಯಿರುವ ವೀರಗಲ್ಲಿದೆ. ಇಲ್ಲಿಯ ಬಸವೇಶ್ವರ (ಬಸವರಾಜದೇವರ) ಗುಡಿಯನ್ನು ನಂಜಯ್ಯನೆಂಬ ಅಧಿಕಾರಿಯು ನಿರ್ಮಿಸಿ ನಂದಿಯನ್ನು ಪ್ರತಿಷ್ಠಾಪಿಸಿ ಹೊಲ–ಗದ್ದೆ ಮನೆಯನ್ನು ಹೆಂಡತಿ ಮಕ್ಕಳ ಸಮ್ಮತದೊಂದಿಗೆ ದತ್ತಿ ಬಿಟ್ಟ ಅಂಶವನ್ನು ಅಲ್ಲೇ ಇರುವ ೧೪೮೭ರ ಶಾಸನವು ತಿಳಿಸುತ್ತದೆ. ಇಲ್ಲಿಯ ೧೪೮೨ರ ಶಾಸನದಲ್ಲಿ ಸಾಂದರ್ಭಿಕವಾಗಿ ಉಲ್ಲೇಖಿತಗೊಂಡಿರುವ ವಿಭೂತಿಯ ಲಿಂಗಪ್ಪಯ್ಯ ಹಾಗೂ ೧೪೯೩ರ ಶಾಸನದಲ್ಲಿ ಉಲ್ಲೇಖಿತಗೊಂಡಿರುವ ವಿಭೂತಿಯ ವಿಶ್ವಪತಿವೊಡೆಯರ ಉಲ್ಲೇಖಗಳು ಆದಾಗಲೇ ವೀರಶೈವ ಧರ್ಮವೂ ಇಲ್ಲಿ ನೆಲೆಗೊಂಡಿದ್ದ ಅಂಶವನ್ನು ಸೂಚಿಸುತ್ತವೆ. ಇಲ್ಲಿಯ ಶಂಕರೇಶ್ವರ ದೇವಾಲಯವೂ ವಿಜಯನಗರ ಕಾಲದ್ದಾಗಿದ್ದು, ಇತ್ತೀಚೆಗೆ ಜೀರ್ಣೋದ್ಧಾರ ಗೊಂಡಿದ್ದು, ವಿನಾಯಕ, ವಿಷ್ಣು ಮುಂತಾದ ಶಿಲ್ಪಗಳಿವೆ. ಅಲ್ಲೇ ಕಲ್ಗಾಣವೊಂದರ ಮೇಲಿರುವ ಶಾಸನದಿಂದ ತಗಡೂರಿನ ಅಂಕನಗೌಡನು ಶಾಸನವಿರುವ ಆ ಕಲ್ಗಾಣವನ್ನು ದೇವರ ಸೇವೆಗೆಂದು ಸಲ್ಲಿಸಿದ ಅಂಶ ಗೊತ್ತಾಗುತ್ತದೆ. ಉಳಿದಂತೆ ಊರಲ್ಲಿ ಮಾರಮ್ಮ, ಆಂಜನೇಯ ಮುಂತಾದ ನವೀನ ಗುಡಿಗಳಿವೆ.

**ಹಳ್ಳದ ಮಾದಹಳ್ಳಿ (೮೩೯):** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ಉತ್ತರಕ್ಕೆ ೧೧ ಕಿ.ಮೀ. ದೂರದಲ್ಲಿ ಹಳ್ಳದ ದಂಡೆಯ ಮೇಲಿರುವ ಇದು ಸುಮಾರು ೧೦–೧೧ನೇ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ ಬೆನ್ದವಾಡಿ' ಎಂದೇ ಉಲ್ಲೇಖಿತಗೊಂಡಿದೆ. ಮುಂದೆ ಯಾವ ಕಾರಣದಿಂದ ಇದರ ಹೆಸರು 'ಮಾದಹಳ್ಳಿ' ಎಂದಾಯಿತು ಎಂದು ತಿಳಿಯಬೇಕಿದೆ. ಊರ ಸೋಮೇಶ್ವರ ಗುಡಿ ಮುಂದಿರುವ ಸುಮಾರು ೧೦ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಬೆನ್ದವಾಡಿಯ ಶಿವಸ್ಥಾನವಾದ ಮಲ್ಲಿಕಾರ್ಜುನ ದೇವರಿಗೆ, ಹಿಂದೆ ನೀಡಿದ್ದ ದತ್ತಿ ಸಾಲದೆನಿಸಿದಾಗ, ಮತ್ತಷ್ಟು ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಅಲ್ಲೇ ಇರುವ ಸುಮಾರು ೧೧ನೇ ಶತಮಾನದ ಇನ್ನೊಂದರಲ್ಲಿ, ಪರ್ಮೆಯರ ಕುಲದ ತಾತಣ್ಣನು ಮಾಧವ ದೇವರ ಪೂಜಾವಿಧಿಗಳಿಗೆಂದು ನಂದನವನ, ಬಾವಿಗಳನ್ನೂ ನಂದಾದೀಪಕ್ಕೆಂದು ಹಸುವನ್ನೂ ದತ್ತಿ ನೀಡಿದ ಉಲ್ಲೇಖವಿದೆ. ಇದರಿಂದ ಹಿಂದೆ ಇಲ್ಲಿ ಮಾಧವ ದೇಗುಲವಿದ್ದ ಅಂಶ ವೇದ್ಯವಾಗುತ್ತದೆ. ಆದರಿಂದು ಮೇಲಿನ ಶಾಸನೋಕ್ತ ಗುಡಿಗಳೆರಡೂ ಶಿಥಿಲಾವಸ್ಥೆಯಲ್ಲಿವೆ. ಮಾಧವನ ಗುಡಿಯಿಂದಾಗಿ ಊರಿಗೆ ಮಾಧವಹಳ್ಳಿ ಎಂಬ ಹೆಸರು ಬಂದು, ಮುಂದೆ ಅದೇ 'ಮಾದಹಳ್ಳಿ' ಆಗಿ ರೂಪಾಂತರಗೊಂಡಿರುವಂತೆ ತೋರುತ್ತದೆ.

**ಹುಲಿಗನ ಮರಡಿ:** ತಾಲೂಕು ಕೇಂದ್ರ ಗುಂಡ್ಲುಪೇಟೆಯಿಂದ ೧೩ ಕಿ.ಮೀ. ಪಶ್ಚಿಮಕ್ಕೆ ಹಾಗೂ ತೆರಕಣಾಂಬಿಗೆ ೧೦ ಕಿ.ಮೀ. ಅಂತರದಲ್ಲಿರುವ ಬೆಟ್ಟವಾಗಿದ್ದು, ಮೇಲಿರುವ ಶ್ರೀನಿವಾಸನ (ವೆಂಕಟರಮಣ ಸ್ವಾಮಿ) ಗುಡಿ, ಹಾಗೂ ಕಾಣಸಿಗುವ ನಿಸರ್ಗದ ಐಸಿರಿಗಳಿಂದಾಗಿ ಪ್ರಾಮುಖ್ಯತೆ ಪಡೆದಿದ್ದು, ಹೋಗಲು ಉತ್ತಮ ರಸ್ತೆ ಸೌಕರ್ಯವಿದೆ. 'ವ್ಯಾಘ್ರಾಚಲ' ಎಂದೂ ಕರೆಯಲ್ಪಡುವ ಇದನ್ನು ೧೯ನೆಯ ಶತಮಾನದ ಶಾಸನವೊಂದರಲ್ಲಿ ವೆಂಕಟರಮಣಗಿರಿ ಎಂದು ಕರೆಯಲಾಗಿದೆ. ಇಲ್ಲಿ ಸುಮಾರು ೧೮–೧೯ನೇ ಶತಮಾನಕ್ಕೆ ಸೇರಿದ ನಾಲ್ಕಾರು ಕಿರು ದತ್ತಿ ಶಾಸನಗಳಿವೆ. ವಿಜಯನಗರೋತ್ತರ ಶೈಲಿಯಲ್ಲಿರುವ ಶ್ರೀನಿವಾಸ ದೇವಾಲಯವು ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದ್ದು, ಪ್ರಧಾನ ಗರ್ಭಗೃಹದಲ್ಲಿ ಶ್ರೀನಿವಾಸನ ಶಿಲ್ಪವಿದೆ. ಎಡಕೋಷ್ಟದಲ್ಲಿ ಪದ್ಮಾವತಿ ಶಿಲ್ಪವಿದ್ದರೆ, ಬಲಭಾಗದಲ್ಲಿ ಗೋದಾವರಿಯ ಲೋಹದ ಉತ್ಸವ ಮೂರ್ತಿಗಳಿವೆ. ಇದರ ಮುಖಮಂಟಪವು ಮೈಸೂರು ಅರಸರ ಕಾಲದ ಸೇರ್ಪಡೆಯಾಗಿದ್ದು, ಕಂಬಗಳು ಪೌರಾಣಿಕ ಹಿನ್ನೆಲೆಯ ಉಬ್ಬುಶಿಲ್ಪಗಳಿಂದ ಕೂಡಿವೆ. ಪ್ರಕೃತಿ ಪ್ರಿಯರಿಗೆಂದೇ ಗುಡಿಯ ಬದಿಯಲ್ಲಿ ನಿರ್ಮಿಸಿರುವ ವೀಕ್ಷಣಾ ವೇದಿಕೆಯಿಂದ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಬಹುದಾಗಿದೆ. ಪ್ರತೀ ವರ್ಷ ಸಂಕ್ರಾಂತಿ ಸಂದರ್ಭದಲ್ಲಿ ಇಲ್ಲಿ ಜಾತ್ರೆಯಾಗುತ್ತದೆ. ಈಗ ಈ ದೇವಾಲಯಕ್ಕೆ ಸುಂದರವಾದ ರಾಜಗೋಪುರವನ್ನು ನಿರ್ಮಿಸಲಾಗಿದೆ.

**ಹೆಗ್ಗವಾಡಿ(೧,೯೬):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿ ಇರುವ ಈ ಗ್ರಾಮದ ಹೆಸರು ೧೩ನೇ ಶತಮಾನಕ್ಕೆ ಸೇರಿದ ತಮಿಳು ಶಾಸನಗಳಲ್ಲಿ 'ಪೆರಗೈಪಾಡಿ', 'ಪೇರಗೈಯಪಟ್ಟಿ', ಪೆರ್ಗೆಯವಾಡಿ' ರೂಪದಲ್ಲೂ ೧೪೧೦ರ ಶಾಸನದಲ್ಲಿ 'ಹೆಗ್ಗವಾಡಿ' ರೂಪದಲ್ಲೂ ಕಾಣಸಿಗುತ್ತದೆ. ಈ ಊರಲ್ಲಿ ಹೊಯ್ಸಳ ಮುಮ್ಮಡಿ ನರಸಿಂಹನ ಆಳ್ವಿಕೆಯಲ್ಲಿ ಕೊಮ್ಮೆಯರ ಕುಲದ ಶಂಭುಗೌಡನು ಸುಖನಾಸಿ, ಗರ್ಭಗೃಹ, ಸ್ತೂಪಿಯನ್ನೊಳಗೊಂಡ ಶಂಭುನಾಥ ದೇವಾಲಯವನ್ನು ನಿರ್ಮಿಸಿದ ಅಂಶವನ್ನು ಅಲ್ಲೇ ಇರುವ ೧೨೪೩ರ ಒಂದು ಶಾಸನ ತಿಳಿಸಿದರೆ, ಉಳಿದ ಮೂರು ಶಾಸನಗಳು ಇದೇ ಕುಲಕ್ಕೆ ಸೇರಿದ ಮಾರಗೌಡ, ಕೇತಗೌಡರು ಗುಡಿಯ ಬಾಗಿಲವಾಡ, ಕಂಬ ಹಾಗೂ ಉತ್ತರಾಂಗಗಳನ್ನು ಮಾಡಿಸಿದ ಅಂಶವನ್ನು ತಿಳಿಸುತ್ತವೆ. ಆದರೆ ಈ ದೇವಾಲಯವಿಂದು ಶಿಥಿಲಾವಸ್ಥೆಯಲ್ಲಿದೆ.

**ಹೆಗ್ಗೊತಾರ(೨,೮೭೩):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ವಾಯವ್ಯಕ್ಕೆ ಎಂಟು ಕಿ.ಮೀ. ದೂರದಲ್ಲಿರುವ ಇದರ ಪ್ರಾಚೀನತೆಯನ್ನು ಗಂಗರ ಕಾಲಕ್ಕೆ ಗುರುತಿಸಬಹುದಾಗಿದೆ. ಊರ ರಾಮೇಶ್ವರ ಗುಡಿಯ

ಬಳಿಯಲ್ಲಿರುವ ಸುಮಾರು ೯ನೇ ಶತಮಾನಕ್ಕೆ ಸೇರಿದ ಶಿಲಾಶಾಸನದಲ್ಲಿ, ಗಂಗ ನೀತಿಮಾರ್ಗ ಪೆರ್ಮ್ಮನಡಿಯ ಸೂಳೆ ಜೊಗ್ಗಬ್ಬೆಯ ಮಗಳೂ, ಸೀಗೆನಾಡ ಪೆರ್ಮ್ಮಾಡಿಗೌಡನ ಹೆಂಡತಿಯೂ ಆದ ಚಾವುಂಡಬ್ಬೆಯು ಈ ದೇವಾಲಯ (ಬಹುಶಃ ಇಲ್ಲಿಯ ರಾಮೇಶ್ವರ)ವನ್ನು ಮಾಡಿಸಿ ತೆರಗಾಲ ಗ್ರಾಮವನ್ನು ದೇವಸ್ವವಾಗಿ ಬಿಟ್ಟ ಉಲ್ಲೇಖವಿದ್ದು, ಶಾಸನೋಕ್ತ 'ತೆರಗಾಲವೇ' ಈ ಊರಿನ ಪ್ರಾಚೀನ ಹೆಸರೋ ಹೇಗೆಂಬುದನ್ನು ವಿವೇಚಿಸಬೇಕಿದೆ. ಆದರೆ ೧೫-೧೬ನೇ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ ಈ ಊರು ಹೆಗೊತರ; ' ಹೆಗ್ಗೋಗ್ತಾರ' ಎಂದೇ ದಾಖಲಾಗಿದೆ.

ಇಲ್ಲಿಯ ರಾಮೇಶ್ವರ ಗುಡಿಯು ಸುಮಾರು ೯ನೇ ಶತಮಾನದ ರಚನೆಯಾಗಿದ್ದು, ಇಂದು ಶಿಥಿಲಾವಸ್ಥೆಯಲ್ಲಿದೆ. ಈ ದೇವಾಲಯದ ಸ್ಥಾನಿಕ ಮುತ್ತಗೆಯ ನಿಂಗಯ್ಯನಿಗೆ ೧೬ನೆಯ ಶತಮಾನದಲ್ಲಿ ಹೊಲ-ಗದ್ದೆಗಳನ್ನು ದೇವರ ಪೂಜಾವಿಧಿಗಳಿಗೆಂದು ದತ್ತಿ ಬಿಟ್ಟಿರುವ ಅಂಶ ಅದೇ ಗುಡಿಯ ಪೌಳಿಯಲ್ಲಿರುವ ಇನ್ನೊಂದು ಶಾಸನದಿಂದ ವೇದ್ಯವಾಗುತ್ತದೆ. ಇಲ್ಲಿರುವ ಕಾಳಿಂಗಮರ್ಧನ ಗುಡಿಯು, ಶಾಸನಗಳಲ್ಲಿ ಉಕ್ತವಾಗಿರುವ ಹೆಗ್ಗೊಥಾರಕ್ಕೆ ಸೇರಿದ ಪುರ, ಬಮ್ಮಪುರದ ಬಾಲಕೃಷ್ಣ-ಗೋಪಾಲಕೃಷ್ಣ ದೇವರಾಗಿದ್ದು, ಅದಕ್ಕೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ (೧೫೨೦ ಹಾಗೂ ೧೫೨೭) ಬಮ್ಮಪುರ ಹಾಗೂ ಕೃಷ್ಣಾಪುರಗಳನ್ನು ಸರ್ವಮಾನ್ಯವಾಗಿ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ವಿಜಯನಗರ ಕಾಲಕ್ಕೆ ಸೇರಿದ ಈ ದೇವಾಲಯವೂ ಇಂದು ಜೀರ್ಣಾವಸ್ಥೆಯಲ್ಲಿದೆ.

**ಹೊಂಗನೂರು(೯,೭೫೭):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಈಶಾನ್ಯಕ್ಕೆ ೨೦ ಕಿ.ಮೀ. ಹಾಗೂ ಯಳಂದೂರಿನಿಂದ ೧೧ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳ. ಹೊಂಗನೂರಿನಿಂದ ಈವರೆಗೆ ಸುಮಾರು ೯-೧೭ನೇ ಶತಮಾನಕ್ಕೆ ಸೇರಿದ ೧೮ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಸುಮಾರು ೯-೧೦ನೇ ಶತಮಾನಕ್ಕೆ ಸೇರಿದ ಮೂರು ಗಂಗ ಶಾಸನಗಳಿಂದ ಈ ಊರಿನ ಪ್ರಾಚೀನತೆಯನ್ನು ಸುಮಾರು ೯ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ಇಲ್ಲಿರುವ ಅರ್ಕೇಶ್ವರ ಗುಡಿಯನ್ನೂ, ಇದೇ ಕಾಲಕ್ಕೆ ಗುರುತಿಸಬಹುದಾಗಿದೆ. ಊರ ಬಿಳಿಕೆರೆ ಕಟ್ಟೆ ಬಳಿಯ ಆಂಜನೇಯ ಗುಡಿ ಬಳಿ ಬಿದ್ದಿರುವ ಚೋಳ ಒಂದನೇ ರಾಜ ರಾಜನ ಆಳ್ವಿಕೆಯ ಶಾಸನ ಬಹಳ ಹಾಳಾಗಿದ್ದರೂ, ಚೋಳ ರಾಜ್ಯದ ಅನೇಕ ನಾಡುಗಳನ್ನು ಹೆಸರಿಸುತ್ತದೆ. ಅಲ್ಲೇ ಇರುವ ಇನ್ನೊಂದು ತಮಿಳು ಶಾಸನ ಹದಿನಾಡಿನ ಕೊಳುಮ ಗ್ರಾಮದಲ್ಲಿ ಕಚ್ಚಿಗೌಡನು ಕೆರೆಗೆ ತೂಬನ್ನು ಹಾಕಿಸಿದ್ದನ್ನು ದಾಖಲಿಸುತ್ತದೆ. ಅಲ್ಲೇ ಇರುವ ಹೊಯ್ಸಳ ಮುಮ್ಮಡಿ ನರಸಿಂಹನ ೧೨೬೩ರ ಶಾಸನ, ಹಲವಾರು ಗೌಡರನ್ನು ಹೆಸರಿಸಿದ್ದು, ಉದ್ದೇಶ ಗೊತ್ತಾಗುತ್ತಿಲ್ಲ. ಆದರೆ ಹೊಂಗನೂರಿನ ಮೊದಲ ಉಲ್ಲೇಖ ಊರ ವೀರಭದ್ರನ ಗುಡಿ ಮುಂದಿರುವ ೧೪೨೫ರ ಶಾಸನದಲ್ಲಿ ಕಂಡು ಬರುತ್ತಿದ್ದು, ಅದಾಗಲೇ ಇದೊಂದು ಅಗ್ರಹಾರವಾಗಿದ್ದು, ನಾಗದಂಡನಾಯಕರು ವಾರಣಾಸಿ ಲಖಣಗಳಿಂದ ಹೊಂಗನೂರು ವೆಂಟೆಹಳ್ಳಿ, ನಾಗವಳ್ಳಿ, ಅಂಕನಹಳ್ಳಿ, ಕೊಗ್ಗಿನಹಳ್ಳಿ ಮತ್ತು ಕಾಗಲವಾಡಿಗಳಲ್ಲಿ ಭೂಮಿಯನ್ನು ಬ್ರಾಹ್ಮಣರ ಸತ್ರಕ್ಕೆಂದು ದಾನ ಕೊಡಿಸಿದ್ದನ್ನು ಈ ಶಾಸನ ಉಲ್ಲೇಖಿಸುತ್ತಿದ್ದು, ಈ ಧರ್ಮವನ್ನು ಹೊಂಗನೂರ ಮಹಾಜನರೂ ಪ್ರಭುಗಳೂ ನಡೆಸಬೇಕೆಂದು ದಾಖಲಿಸಿದೆ. ಕೃಷ್ಣರಾಯನ ಆಳ್ವಿಕೆಯಲ್ಲಿ ನೀಡಲ್ಪಟ್ಟಿರುವ ೧೫೧೫ರ ಶಾಸನ, ಸಾಳುವ ಗೋವಿಂದರಾಜಯ್ಯನ ಸೂಚನೆಯಂತೆ, ಹತ್ತು ಅಂಕಣದ ಮನೆಯ ನಿವೇಶನ ವಿಲೇವಾರಿಯಾದುದನ್ನು ದಾಖಲಿಸಿದೆ.

ಇಲ್ಲಿಯ ಗೋವಿಂದರಾಜ ಅಗ್ರಹಾರದ ರಸ್ತೆ ಬದಿಯಲ್ಲಿರುವ ೧೫೧೭ರ ಇನ್ನೊಂದು ಶಾಸನ ಹೊಂಗನೂರು ಅಗ್ರಹಾರದ ಮಹಾಜನಗಳಿಗೆ, ಹಳೆಯ ಹೊಂಗನೂರ ಬ್ರಹ್ಮಮಂಡಲದಲ್ಲಿದ್ದ ಬ್ರಾಹ್ಮಣರ

ಮನೆ ನಿವೇಶನಗಳನ್ನು ಅವರವರಿಗೆ ನೀಡಿ ಕೆಲವು ತೆರೆಗಳನ್ನು ಮನ್ನಾ ಮಾಡಿದ್ದನ್ನು ದಾಖಲಿಸುತ್ತದೆ. ಮಾರಿ ಚಾವಡಿ ಬಳಿಯಿರುವ ೧೫೪೯ರ ಶಾಸನ ಹೊಂಗನೂರು ಗದ್ದೆಯ ಸಾಗುವಳಿ ವಿವರವನ್ನು ನೀಡಿದರೆ, ೧೬ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ 'ಹುಲಿಯೂರು' ಮೂಲದ ಆರಾಧ್ಯ ವೊಡೆಯರಿಗೆ ಮಠವನ್ನು ವೀರಸೋಮರಾಯನು ಧರ್ಮವಾಗಿ ನೀಡಿದ್ದನ್ನು ದಾಖಲಿಸುತ್ತದೆ. ಮೈಸೂರು ಅರಸ ಕಂಠೀರವ ನರಸರಾಜರು ಕಾಶಿ ವಿಶ್ವನಾಥನ ಸೇವೆಗೆಂದು ಹೊಂಗನೂರು ಸ್ಥಳಕ್ಕೆ ಸೇರಿದ ೨೪ ಗ್ರಾಮಗಳನ್ನು ಧರ್ಮಪುರವಾಗಿ ದತ್ತಿ ಬಿಟ್ಟಿದ್ದನ್ನು ವಿನಾಯಕ ಗುಡಿಯ ಕೊಳದ ಬಳಿಯ ೧೬೪೮ರ ಶಾಸನ ತಿಳಿಸಿದರೆ, ಅಲ್ಲೇ ಇರುವ ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಈ ಸೇವೆಯನ್ನು ತಮ್ಮ ಪುರೋಹಿತ ಲಿಂಗಭಟ್ಟರ ಮುಖಾಂತರವಾಗಿ ಕಾಶಿಯಲ್ಲಿ ವಿಶ್ವೇಶ್ವರ, ಇತ್ಯಾದಿ ದೇವತೆಗಳ ಪೂಜಾವಿಧಿಗೆ, ೧೦೦ ಬ್ರಾಹ್ಮಣರಿಗೆಂದು ಬ್ರಾಹ್ಮಣ ಸತ್ರ, ಕಾಶಿವಾಸಿಗಳಿಗೆ ವರ್ಷಾಸನ, ಪ್ರಯಾಗದಲ್ಲಿ ಮಾಘಸ್ನಾನ ಇತ್ಯಾದಿಗಳಿಗೆಂದು ಹೊಂಗನೂರನ್ನು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಹೊಂಗನೂರಿನಲ್ಲಿ ಅರ್ಕೇಶ್ವರ, ವರದರಾಜ, ವಿನಾಯಕ ಮುಂತಾದ ಪ್ರಾಚೀನ ಗುಡಿಗಳಿದ್ದು ಅವಿಂದು ಜೀರ್ಣೋದ್ಧಾರಗೊಂಡಿವೆ. ಇಲ್ಲಿರುವ ಅರ್ಕೇಶ್ವರ ದೇವಾಲಯವು ಗಂಗರ ಕಾಲದ್ದಾಗಿದ್ದು, ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ವಿಜಯನಗರ ಕಾಲದಲ್ಲಿ ಮುಖಮಂಟಪವನ್ನು ಇದಕ್ಕೆ ಸೇರಿಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನವರಂಗದ ದುಂಡಾಕಾರದ ಕಿರುಗಂಬಗಳ ಮೇಲೆ ರಾಮಾಯಣಕ್ಕೆ ಸಂಬಂಧಿಸಿದ ಕಥನಶಿಲ್ಪ ಕೆತ್ತನೆಗಳಿವೆ. ನವರಂಗದ ಛತ್ತನ್ನು ಅಷ್ಟದಿಕ್ಪಾಲಕರಿಂದಾವೃತವಾದ ನಟರಾಜನ ಆಕರ್ಷಕ ಕೆತ್ತನೆಯ ಫಲಕದಿಂದ ಅಲಂಕರಿಸಲಾಗಿದೆ. ಮುಖಮಂಟಪವು ವಿಜಯನಗರ ಶೈಲಿಯ ಕಂಬಗಳಿಂದ ಕೂಡಿದ್ದು, ಮೇಲೆ ಸಾಂಪ್ರದಾಯಿಕ ಉಬ್ಬು ಶಿಲ್ಪ ಕೆತ್ತನೆಯಿದೆ. ನವರಂಗದ ತೊಲೆಗಳು ಉತ್ತಮ ಶಿಲ್ಪಕೆತ್ತನೆಯಿಂದ ಅಲಂಕೃತಗೊಂಡಿದ್ದು ಗಣಪತಿ, ಪರಶುರಾಮ, ಭೈರವ, ಚಂದ್ರಶೇಖರ ದುರ್ಗಾ ಮುಂತಾದ ಶಿಲ್ಪಗಳನ್ನು ನವರಂಗದಲ್ಲಿಡಲಾಗಿದೆ.

ಇಲ್ಲಿಯ ವರದರಾಜ ದೇವಾಲಯವು ಹೊಯ್ಸಳರ ಕಾಲದ್ದಾಗಿದ್ದು, ತ್ರುಟಿತ ಶಾಸನವೊಂದು ಅಲ್ಲಿದೆ. ನವರಂಗದಲ್ಲಿರುವ ಪ್ರತ್ಯೇಕ ಕೋಷ್ಟಗಳಲ್ಲಿ ರಾಮಾನುಜ ಹಾಗೂ ಆಳ್ವಾರರ ಮೂರ್ತಿಗಳಿವೆ. ಜೊತೆಗೆ ಕಂಚಿನ ಮೂರು ಪ್ರತಿಮೆಗಳೂ ಅಲ್ಲಿವೆ. ಇಲ್ಲಿಂದ ಹತ್ತು ಕಿ.ಮೀ. ದೂರದ ಬಿಳಿಗಿರಿ ರಂಗನ ಬೆಟ್ಟಕ್ಕೆ ಹೋಗಲು ಕಾಲು ದಾರಿ ಇದೆ.

**ಹೊಮ್ಮ(೧,೧೬೭):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಸುಮಾರು ೧೧ ಕಿ.ಮೀ. ದೂರದಲ್ಲಿರುವ ಇದು ಚಾರಿತ್ರಿಕ ಮಹತ್ವದ ಹಳೆ ಆಲೂರು ಗ್ರಾಮಕ್ಕೆ ಎರಡು ಕಿ.ಮೀ. ಸಮೀಪದಲ್ಲಿರುವ ಪುರಾತನ ಊರು. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇಲ್ಲಿರುವ ರಾಮೇಶ್ವರ ದೇವಾಲಯವು ಗಂಗರ ಕಾಲದ ರಚನೆಯಾಗಿದ್ದು, ಗಂಗ ಶ್ರೀಪುರುಷ(೭೨೫–೮೯೧)ನಿಗೆ ಸೇರಿದ ಇಲ್ಲಿಯ ಶಾಸನವೊಂದರಲ್ಲಿ ಅದನ್ನು 'ವಿನೀತೇಶ್ವರ' ಎಂದು ಕರೆಯಲಾಗಿದೆ ಎಂದು ಶಾಸನತಜ್ಞರು ಈವರೆಗೆ ಭಾವಿಸಿದ್ದರು. ಆದರೆ ಇತ್ತೀಚೆಗೆ ಈ ಶಾಸನವನ್ನು ಪುನರ್ ಪರಿಶೀಲಿಸಿರುವ ಶಾಸನತಜ್ಞ ಸೀತಾರಾಮ್ ಜಾಗಿರ್‌ದಾರ್ ಅವರು ಈ ಶಾಸನವನ್ನು ದುರ್ವಿನಿತ(ಸು. ೫೨೯–೫೮೯)ನದೆಂದು ಗುರುತಿಸುತ್ತಾ, ಶಾಸನೋಕ್ತ ಅವಿನೀತೇಶ್ವರ ದೇವಾಲಯವು ದುರ್ವಿನೀತನ ತಂದೆ ಅವಿನೀತನ (ಸು. ೪೮೯–೫೨೯) ಹೆಸರಲ್ಲಿ ನಿರ್ಮಾಣಗೊಂಡಿರಬೇಕೆಂಬ ಅಂಶವನ್ನು ಖಚಿತಪಡಿಸಿದ್ದಾರೆ. ಇದರಿಂದ ಹೊಮ್ಮದ ರಾಮೇಶ್ವರ ಗುಡಿಯ ಪ್ರಾಚೀನತೆಯನ್ನು ಆರನೆಯ ಶತಮಾನಕ್ಕೆ ಗುರುತಿಸಬಹುದಾಗಿದೆ. ಆದರೆ ಈ ದೇವಾಲಯವಿಂದು ಶಿಥಿಲಾವಸ್ಥೆಯಲ್ಲಿದೆ. ಇಲ್ಲಿಯ ಜನಾರ್ದನ ದೇವಾಲಯವು ಹೊಯ್ಸಳರ ಕಾಲದ ರಚನೆಯಾಗಿದ್ದು, ಗರ್ಭಗೃಹದಲ್ಲಿ ಜನಾರ್ದನನ ಸುಂದರ ಶಿಲ್ಪವಿದೆ. ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ೧೨೯೪ರ ಶಾಸನದಲ್ಲಿ ಅದೇ ಗುಡಿಯ ದಕ್ಷಿಣ ಭಾಗದಲ್ಲಿರುವ ೧೩೩೫ರ ಇನ್ನೊಂದು ಶಿಲಾಶಾಸನ ವೊರೆಯೂರ ದಂಡನಾಯಕನನ್ನು ಉಲ್ಲೇಖಿಸುತ್ತಾದರೂ ವಿವರ ಹಾಳಾಗಿದೆ. ಊರ

ಮೂಲಸ್ಥಾನೇಶ್ವರ ಗುಡಿ ಮುಂದಿರುವ ೧೩೮೦ರ ಶಾಸನ ಇಮ್ಮಡಿ ಬುಕ್ಕನ ಕಾಲದಲ್ಲಿ ಅಕಳಂಕ ಚತುರ್ವೇದಿ ಮಂಗಲ, ಸರ್ವಜ್ಞ ವಿಷ್ಣುಪುರ ಎಂಬ ಅಭಿದಾನಗಳನ್ನು ಹೊಂದಿದ್ದ ಹೊಮ್ಮದ ಮೂಲಸ್ಥಾನೇಶ್ವರ ದೇವರ ಪೂಜಾವಿಧಿಗೆಂದು ಅಗ್ರಹಾರದ ೧೦೮ ಬ್ರಾಹಣರು ದತ್ತಿ ನೀಡಿದ್ದನ್ನು ದಾಖಲಿಸಿದ್ದು, ಈ ಗುಡಿಯೂ ಜೀರ್ಣಾವಸ್ಥೆಯಲ್ಲಿದೆ. ಉಪ್ಪರಿಗೆ ಬಸವೇಶ್ವರನ ಗುಡಿ ಇಲ್ಲಿಯ ಇನ್ನೊಂದು ವಿಶೇಷವಾಗಿದೆ.

**ಹೊನ್ನೂರು (೪,೨೭೧):** ತಾಲೂಕು ಕೇಂದ್ರ ಯಳಂದೂರಿನಿಂದ ವಾಯವ್ಯಕ್ಕೆ ಆರು ಕಿ.ಮೀ. ಅಂತರದಲ್ಲಿರುವ ಈ ಊರು ೧೧ನೆಯ ಶತಮಾನದ ಶಾಸನಗಳಲ್ಲಿ 'ಪೊನ್ನೂರು' ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಏಳು ಶಾಸನಗಳು ಪತ್ತೆಯಾಗಿವೆ. ಕೆರೆಕಟ್ಟೆ ಬಳಿಯಿರುವ ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ಶಾಸನ ಗಂಗರಸ ಪೆರ್ಮಾನಡಿಯ ಆಳ್ವಿಕೆಯ ಮೂರನೆಯ ವರ್ಷದಲ್ಲಿ ತುರುಗೋಳದಲ್ಲಿ ಪೊನ್ನವಯ್ಯನು ಸತ್ತಾಗ, ಊರ ಹಿರಿಯರು ವೀರಗಲ್ಲನ್ನು ನಿಲ್ಲಿಸಿ, ಕೆರೆಯ ಕೆಳಗೆ ಅಯ್ಗುಳ ಗದ್ದೆಯನ್ನು ಉಂಬಳಿಯಾಗಿ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲೇ ಇರುವ ಸುಮಾರು ೧೧ನೇ ಶತಮಾನಕ್ಕೆ ಸೇರಿದ ತಮಿಳು ಶಾಸನ, ವಡಗೆರೆ ನಾಡಿನ ತಳವನಪುರದ ಪೆರಿಯನಗರೀಶ್ವರ ದೇವರಿಗೆ, ಗಂಗೈಕೊಂಡಚೋಳ ವಳನಾಡಲ್ಲಿನ ಪೊನ್ನೂರು ಗ್ರಾಮದ ವ್ಯಾಪಾರಿಯು ದೇವದಾನವಾಗಿ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಊರ ಮಹಾಲಿಂಗೇಶ್ವರ ಗುಡಿಯ ತಳಪಾದಿಕಲ್ಲ ಮೇಲಿರುವ ೧೧೯೧ರ ಶಾಸನ ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಅಗರದ ಕಾಳೇಶ್ವರ ದೇವರಿಗೆ ಬ್ರಹ್ಮದೇಯದ ಪೊನ್ನೂರಿನ ತುಳುವಲ ಮಹಾದೇವಿ ಚತುರ್ವೇದಿ ಮಂಗಲ ಮಾರಗೌಡನು ಶ್ರೀಧನವನ್ನು ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಊರ ಕೆಂಕೆರೆ ಕಟ್ಟೆ ಬಳಿಯಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಅಸ್ಪಷ್ಟವಾಗಿದ್ದರೆ, ೧೨೮೩ರ ಮತ್ತೊಂದು ಶಾಸನ ಹೊಸೂರಿನ ಬೈರಮಂಗಲದ ಮಹಾಜನಗಳು ಉಪ್ಪಲಿಗರಿಗೆ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಇಲ್ಲಿಯ ಮಹಾಲಿಂಗೇಶ್ವರ ದೇವಾಲಯವು ಹೊಯ್ಸಳರ ಕಾಲದ ರಚನೆಯಾಗಿದ್ದು, ಜೀರ್ಣಾವಸ್ಥೆಯಲ್ಲಿದೆ. ಇಲ್ಲಿಯ ಚಾಮುಂಡೇಶ್ವರಿ ಗುಡಿಯ ಮಂಟಪದಲ್ಲಿರುವ ಇಮ್ಮಡಿ ಬಲ್ಲಾಳನ ಕಾಲದ ಒಂದು ಶಾಸನ ಬಹಳ ಹಾಳಾಗಿರುವುದರಿಂದ ವಿವರ ಸ್ಪಷ್ಟವಾಗುವುದಿಲ್ಲ.

**ಹೊ(ಹ)ಳೇ ಆಲೂರು (೨,೯೩೦):** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಒಂಭತ್ತು ಕಿ.ಮೀ. ದೂರದಲ್ಲಿ ಸುವರ್ಣಾವತಿ ನದಿ ದಂಡೆ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಪ್ರಾಚೀನ ಶಾಸನಗಳಲ್ಲೂ "ಆಲೂರು' ಎಂದೇ ಉಲ್ಲೇಖಿತಗೊಂಡಿರುವ ಈ ಊರು, 'ತೆಂಕಣ ಅಯ್ಯವೊಳೆ' ಎಂಬ ವಿಶೇಷಣವನ್ನು ಹೊಂದಿದ್ದ ಅಂಶ ಸುಮಾರು ೧೧–೧೨ನೇ ಶತಮಾನದ ಕನ್ನಡ, ತಮಿಳು ಶಾಸನಗಳಿಂದ ವೇದ್ಯವಾಗುತ್ತದೆ. ಹಿಂದೆ ಇದು ವಾಣಿಜ್ಯ ಕೇಂದ್ರವಾಗಿ ಪ್ರಾಮುಖ್ಯತೆ ಪಡದಿದ್ದ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಹಿಂದೆ ಹದಿನಾಡು ಸೀಮೆಯಲ್ಲಿದ್ದ ಈ ಊರು ಗಂಗ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಕಾಲದ ದೇವಾಲಯಗಳಿಂದಾಗಿ ಇಂದಿಗೂ ಪ್ರವಾಸಿಗರ, ಸಂಶೋಧಕರ ಗಮನ ಸೆಳೆಯುತ್ತಿದೆ.

ಊರಾಚೆ, ಗದ್ದೆ ತೋಟಗಳ ನಡುವೆ ಇರುವ ಪುರಾತನ ದೇವಾಲಯಗಳಲ್ಲಿ ಅರ್ಕೇಶ್ವರ ದೇವಾಲಯವು, ಸುಮಾರು ೧೦ನೇ ಶತಮಾನದ ರಚನೆಯಾಗಿದ್ದು, ಇದನ್ನು ಅದರ ಅಧಿಷ್ಠಾನದ ಮೇಲಿರುವ ಗಂಗರ ಕಾಲದ ಕನ್ನಡ ಶಾಸನದಿಂದ ಗುರುತಿಸಬಹುದಾಗಿದ್ದು, ಚಾಳುಕ್ಯರ ಮೇಲೆ ಗೆಲುವು ಪಡೆದ ರಾಜೇಂದ್ರ ಚೋಳನು ಇದನ್ನು ಜೀರ್ಣೋದ್ಧಾರ ಮಾಡಿರುವ ಅಂಶ ಅಲ್ಲೇ ಇರುವ ಇತರ ಚೋಳ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಗರ್ಭಗೃಹದಲ್ಲಿ ಅರ್ಕೇಶ್ವರ ಶಿವಲಿಂಗವಿದ್ದು, ನಂದಿ ಮಂಟಪದ ಗಿಡ್ಡನೆಯ ದುಂಡಾಕಾರದ ಕಂಬಗಳ ಪೀಠದ ಮೇಲೆ, ರಾಜೇಂದ್ರ ಚೋಳನು ಚಾಳುಕ್ಯರ ಮೇಲೆ ಸಾಧಿಸಿದ ವಿಜಯದ ತುಣುಕು ದೃಶ್ಯಗಳನ್ನು ಬಹಳ

ಮನೋಜ್ಞವಾಗಿ ಬಿಂಬಿಸಲಾಗಿದೆ. ಚೋಳ–ಚಾಳುಕ್ಯ ಸಂಘರ್ಷಗಳ ಅಧ್ಯಯನಕ್ಕೆ ಉತ್ತಮ ಆಕರವಾಗಿರುವ ಈ ಕಂಬಗಳಲ್ಲಿ ಒಂದು ಸ್ಥಂಭದ ಮೇಲೆ ಖಡ್ಗ ಹಿಡಿದು ನಿಂತಿರುವ ರಾಜೇಂದ್ರ ಚೋಳ ಮತ್ತವನ ಸೋದರನ ಕೆತ್ತನೆ ಇದ್ದರೆ, ಇನ್ನೊಂದರ ಮೇಲೆ ಅಹವಮಲ್ಲನ ರಾಜಧಾನಿ ಕಲ್ಯಾಣವು ಚೋಳರ ವಶವಾಗಿದ್ದು, ಪ್ರಜೆಗಳು ದಿಕ್ಕಾಪಾಲಾಗಿ ದೋಣಿಯೊಂದರಲ್ಲಿ ಸಾಗುತ್ತಿದ್ದು, ಕೋಟೆಯ ದ್ವಾರದ ಬಳಿ ಬೊಗಳುತ್ತಿರುವ ನಾಯಿಯನ್ನು ತೋರಿಸಲಾಗಿದೆ. ಅಲ್ಲದೆ ಸೋತ ಅಹವಮಲ್ಲನ ಸೇನಾಪಡೆ, ಪಲ್ಲಕ್ಕಿ, ಆನೆ, ಕುದುರೆ, ಮತ್ತು ಅಪಾರ ಸಂಪತ್ತುಗಳು ರಾಜೇಂದ್ರ ಚೋಳನಿಗೆ ವಶವಾದ ದೃಶ್ಯವೂ ಇದೆ. ಅಲ್ಲೆ ಇರುವ ಇನ್ನೊಂದು ಕಂಬದ ಮೇಲೆ ರಾಜೇಂದ್ರ ಚೋಳನ ಸಿಂಹಾಸನಾರೋಹಣವನ್ನು ಎಂಟು ಹಂತಗಳಲ್ಲಿ ಮೂಡಿಸಲಾಗಿದೆ. ನವರಂಗದಲ್ಲಿರುವ ಅಲಂಕೃತ ಕಿರು ದುಂಡುಕಂಬಗಳ ಮೇಲೆ ಆಕರ್ಷಕ ಉಬ್ಬುಶಿಲ್ಪಗಳಿದ್ದು, ದ್ವಾರದ ಇಕ್ಕೆಲದಲ್ಲಿ ವಾದ್ಯವೃಂದ ಹಾಗೂ ನರ್ತಿಸುತ್ತಿರುವ ಅಪ್ಸರೆಯರನ್ನು ಕಾಣಬಹುದಾಗಿದ್ದು, ನವರಂಗದ ಛಾವಣಿಯನ್ನು ಅಷ್ಟದಿಕ್ಪಾಲಕರಿಂದ ಆವೃತವಾದ ನಟರಾಜನ ಸುಂದರ ಭುವನೇಶ್ವರಿಯು ಅಲಂಕರಿಸಿದೆ.

ಇಲ್ಲಿಯ ದೇಶೇಶ್ವರ ಗುಡಿಯು ಸುಮಾರು ೧೧ನೇ ಶತಮಾನಕ್ಕಾಗಲೇ ಖ್ಯಾತಿ ಹೊಂದಿದ್ದು, ಅದಕ್ಕೆ ಚೋಳ ಇಮ್ಮಡಿ ರಾಜೇಂದ್ರನು ದತ್ತಿ ನೀಡಿದ ಅಂಶ ೧೦೫೯ರ ಶಾಸನದಿಂದ ವೇದ್ಯವಾಗುತ್ತಿದ್ದು, ಇದನ್ನು ಸುಮಾರು ೧೩–೧೬ನೇ ಶತಮಾನದ ದತ್ತಿ ಶಾಸನಗಳಲ್ಲೂ ದೇಶಿನಾಥ ದೇವರೆಂದೇ ಕರೆಯಲಾಗಿದೆ. ಈ ದೇವಾಲಯದ ಹೊರಮಂಟಪದಲ್ಲಿರುವ ಸುಮಾರು ೧೨೭೭ರ ತಮಿಳು ಶಾಸನ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದ್ದಾಗಿದ್ದು, ಅರ್ಕೇಶ್ವರ ದೇವರ ಪೂಜೆ ಪುರಸ್ಕಾರಗಳಿಗೆಂದು ದತ್ತಿ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಈ ದೇವಾಲಯದ ಉತ್ತರ ಪ್ರವೇಶದ್ವಾರದ ಬಳಿಯಿರುವ ಸು. ೧೧–೧೨ನೇ ಶತಮಾನದ ತಮಿಳು ಶಾಸನದಲ್ಲಿ ಈ ದೇವರನ್ನು ತಿರುಮಾಣಿಕ್ಕಾಳವಾರ್ ಎಂದು ಉಲ್ಲೇಖಿಸಲಾಗಿದೆ. ದೇವಾಲಯದ ಸುತ್ತ ವಿಷ್ಣು, ಕೋಣನ ತಲೆ ಮೇಲೆ ನಿಂತಿರುವ ಚಾಮುಂಡಿ ಸಪ್ತ ಮಾತೃಕಾ ದುರ್ಗಿ, ಮುಂತಾದ ಶಿಲ್ಪಗಳಿವೆ. ಈ ದೇವಾಲಯಕ್ಕೆ ಅನತಿ ದೂರದಲ್ಲಿರುವ ದೇಶೇಶ್ವರ ದೇವಾಲಯವು ಬಹುಶಃ ಗಂಗರ ಕಾಲಕ್ಕೆ ಸೇರಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಈ ದೇವಾಲಯದ ಕಂಬಗಳು ದುಂಡಾಕಾರದವಾಗಿದ್ದು, ಅಲ್ಲೇ ಇರುವ ಒಂದು ಹೊಯ್ಸಳ ಶಾಸನ, ಆಲೂರಿನ ದೇಶೀನಾಥನ ಗುಡಿಗೆ ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಮ್ಮಡಿ ಹರಿಹರನ ಕಾಲದ ೧೪೦೩ರ ಶಾಸನವೂ ಈ ದೇವರಿಗೆ ಬಿಟ್ಟ ದತ್ತಿಯನ್ನು ದಾಖಲಿಸಿದೆ. ಆದರೆ ಮೇಲಿನ ಶಾಸನೋಕ್ತ ಚನ್ನಕೇಶ್ವರ ದೇವಾಲಯವಿಂದು ಪಾಳು ಬಿದ್ದಿದೆ. ಅದರಲ್ಲಿದ್ದ ಕೇಶವ ಶಿಲ್ಪವನ್ನಿಂದು ನೆರೆಯ ಅರ್ಕೇಶ್ವರ ದೇವಾಲಯದ ಆವರಣದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಅಧೀನದಲ್ಲಿ ಸಂರಕ್ಷಿಸಿಡಲಾಗಿದೆ.

ನದಿತೀರದ ಮಂಟಪವೊಂದರ ಮೇಲಿರುವ ೧೨೭೮ರ ಶಾಸನ ಹೊಯ್ಸಳ ಮುಮ್ಮಡಿ ನರಸಿಂಹನ ಆಳ್ವಿಕೆಯಲ್ಲಿ ಆಲೂರ ವೇಳಿ, ಕೋವ, ಕುಣಿಂದ ಹಾಗೂ ನಲ್ಲೊಡೆಯರು ಏಕಸ್ಥರಾಗಿ ಚಂದ್ರನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ, ಆದಿಯಣ್ಣ ಚಲುವಣ್ಣ ಸೋದರರಿಗೆ ಸ್ಥಾನಾಚಾರ್ಯ ಪಟ್ಟವನ್ನು ನೀಡಿ ದತ್ತಿಬಿಟ್ಟ ಅಂಶವನ್ನು ದಾಖಲಿಸಿದ್ದು, ಅದಕ್ಕೆ ಆಲೂರಿನ ಶಿವಾಲಯ ವಿಷ್ಣುಗುಡಿಗಳ ಸ್ಥಾನಪತಿಗಳು ಸಾಕ್ಷಿಯಾಗಿದ್ದನ್ನೂ ತಿಳಿಸುತ್ತದೆ. ಇಲ್ಲಿಯ ಚನ್ನಿಗರಾಯನ ಗುಡಿ ಬಳಿಯಿರುವ ೧೨೯೪ರ ಶಾಸನ, ಮುಮ್ಮಡಿ ಬಲ್ಲಾಳನು ಹೊಮ್ಮೆ, ಆಲೂರು, ಹಿರಿಯೂರುಗಳನ್ನೊಳಗೊಂಡ ಗಂಡರಾಮ ಚತುರ್ವೇದಿಮಂಗಲವನ್ನು ಶಿವಬಳನಾಯನಾರಿಗೆ ಸರ್ವನಮಸ್ಯದ ಅಗ್ರಹಾರವಾಗಿ ನೀಡಿದ್ದನ್ನು ದಾಖಲಿಸುತ್ತಾ, ಸಾಂದರ್ಭಿಕವಾಗಿ ಅಮ್ಮೆಳೆ (ಅಂಬಲೆ)ಯ ಚನ್ನಕೇಶವ ದೇವರನ್ನೂ ಹೆಸರಿಸುತ್ತದೆ.

******